ಶ್ರೀ ಡಿ.ಬಿ. ಚಂದ್ರೇಗೌಡ : ಆಗಬಹುದು. ನಾಳೆ ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು : ನಾಳೆ ವರದಿಯನ್ನು ಸಭೆಯ ಮುಂದಿಡುತ್ತಾರೆ. ನಂತರ ಇದರ ಬಗ್ಗೆ ಚರ್ಚೆ ಮಾಡಿ ತಿದ್ದುಪಡಿಯನ್ನು ಮಾಡೋಣ. ಈಗ ನಿಯಮ 69ರ ಅಡಿಯಲ್ಲಿ ಬಂದಿರುವ ಬರಗಾಲದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳೋಣ.

6. ನಿಯಮ 69ರ ಮೇರೆಗೆ

ವಿಷಯ : ರಾಜ್ಯದಲ್ಲಿ ಬರಗಾಲ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದ ಈ ದಿನದ ಅತ್ಯಂತ ಜ್ವಲಂತವಾದ ಸಮಸ್ಯೆಯೆಂದರೆ ಬರ ಎಂಬುದು ನಮಗೆಲ್ಲಾ ಗೊತ್ತಿದೆ. ಬಹುಶಃ ಈ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜವಾಬ್ದಾರಿಯಿಂದ ನುಣಚಿಕೊಳ್ಳುವಂಥ ಒಂದು ತಂಡವೇ ಇದೆ ಎಂಬುದಕ್ಕೆ ಇವತ್ತಿನ ಬರ ಪರಿಹಾರ ಕೆಲಸ ಕಾರ್ಯಗಳಲ್ಲಿ ಈ ಸರ್ಕಾರ ನಡೆದುಕೊಳ್ಳುತ್ತಿರುವ ನೀತಿ ತೋರಿಸಿಕೊಡುತ್ತಿದೆ. ಒಂದು ಕಡೆಯಲ್ಲಿ ಅಧಿಕಾರದ ಅಮಲಿನಲ್ಲಿ ಮೈಮರೆತು ತಾನು ಏನು ನಿಜವಾದ ಕೆಲಸವನ್ನು ಮಾಡಬೇಕಾಗಿತ್ತೋ ಅದನ್ನು ಬಿಟ್ಟು ಒಂದು ರೀತಿಯಲ್ಲಿ ತನ್ನದೇ ದಾರಿಯಲ್ಲಿ ಹೋಗುವಂಥ ವ್ಯವಸ್ಥೆ, ಜವಾಬ್ದಾರಿಯಿಂದ ನುಣುಚಿಕೊಳ್ಳುವ ಬಗ್ಗೆ ನಾನು ಏಕೆ ಹೇಳಿದ್ದೇನೆಂದರೆ, ಪ್ರಾಯಶಃ ಇವತ್ತು ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಪ್ರತ್ಯೇಕವಾದಂಥ ಜನ ಪ್ರತಿನಿಧಿಗಳು ಲೋಕಸಭೆ ಮತ್ತು ವಿಧಾನ ಸಭೆಯಲ್ಲಿರುವಂಥ ಒಂದು ಹಿನ್ನೆಲೆಯಲ್ಲಿ ಹಲವಾರು ಸಮಸ್ಯೆಗಳನ್ನು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ ಜಂಟಿಯಾಗಿ ನಿಭಾಯಿಸುವಂಥ ವ್ಯವಸ್ಥೆಗಳು ಇವೆ. ಹಲವಾರು ಸಂದರ್ಭಗಳಲ್ಲಿ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಆ ರೀತಿಯಾಗಿ ಜಂಟಿ ಜವಾಬ್ದಾರಿಗಳನ್ನು ನಿರ್ವಹಿಸುವಂಥ ಸಂದರ್ಭಗಳಲ್ಲಿ ಒಂದು ರೀತಿಯಲ್ಲಿ ನಿಜವಾದ ಅರ್ಥದಲ್ಲಿ ಯಾರು ಅದನ್ನು ಅನುಷ್ಠಾನ ಮಾಡಬೇಕಿತ್ತೋ, ಆ ಅನುಷ್ಠಾನ ಮಾಡುವಂಥ ಸರ್ಕಾರ ಅಥವಾ ಸರ್ಕಾರದಲ್ಲಿರುವಂಥ ವ್ಯಕ್ತಿಗಳು ತಮಗೆ ಅದನ್ನು ನಿಭಾಯಿಸಲಿಕ್ಕೆ ಆಗದಾಗ ಕೇವಲ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವಂಥ ಕೆಲಸಕಾರ್ಯಗಳನ್ನು ಮಾಡುವಂಥಾದ್ದು. ಇವತ್ತು ಇದು ಈ ರಾಜ್ಯದ ದುರ್ದೈವ. ಈ ರಾಜ್ಯದ ಪರಿಸ್ಥಿತಿ ಅದಾಗಿದೆ ಎಂದು ಹೇಳುವುದಕ್ಕೆ ಈ ರೀತಿ ಅವರು ಜವಾಬ್ದಾರಿಯಿಂದ ನುಣುಚಿಕೊಳ್ಳುವಂಥ ಕೆಲಸ ಮಾಡುತ್ತಿದ್ದಾರೆಂದು ನಾನು ಹೇಳಿದೆ. ಪ್ರತಿ ಭಾರಿ ಭಾರಿಗೂ ನಾವು ಎಲ್ಲಾ ಕಡೆಗಳಲ್ಲಿ ವಿವಿಧ ಮಂತ್ರಿಮಹೋದಯರು ಹೇಳುವಂಥ ಮಾತುಗಳನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ನಮಗೆ ಕೇಂದ್ರದಿಂದ ಸಾಕಾದಷ್ಟು ಸಹಕಾರಗಳು ಸಿಗುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಬಹುಶಃ ನಾನು ಹೆಚ್ಚೇನೂ ಉಲ್ಲೇಖ ಮಾಡಲಿಕ್ಕೆ ಹೋಗುವುದಿಲ್ಲ. ಈಗಾಗಲೇ ನಮ್ಮ ನಾಯಕರು ಮತ್ತು ಶ್ರೀಮಾನ್ ಸಿಂಧ್ಯರವರು ಅಂಕಿಅಂಶಗಳ ಮೂಲಕ ಎಲ್ಲವನ್ನೂ ಇಟ್ಟಿದ್ದಾರೆ. ಈಗ ನಾವು ನೋಡೋಣ, ತಾವು ಜವಾಬ್ದಾರಿಯಿಂದ ಹೇಗೆ ನುಣಚಿಕೊಂಡಿದ್ದೀರಿ, ಕೇಂದ್ರದ ಮೇಲೆ ಯಾವರೀತಿಯ ಆರೋಪವನ್ನು ಮಾಡುತ್ತೀರಿ ಎಂಬುದರ ಬಗ್ಗೆ ಒಂದು ಸಣ್ಣ ವಿಶ್ಲೇಷಣೆಯನ್ನು ಮಾಡೋಣ. ಪ್ರಾಯಶಃ ಕೇಂದ್ರಸರ್ಕಾರ ತಮಗೆ ಎಷ್ಟು ಮೊತ್ತವನ್ನು ಕೊಟ್ಟಿದೆ, ಆ ಮೊತ್ತದಲ್ಲಿ ಎಷ್ಟನ್ನು ನಾವು ಸದ್ವಿನಿಯೋಗ ಮಾಡಿದ್ದೇವೆ ಎಂದು ಹೇಳುವುದರ ಬಗ್ಗೆ ಸ್ವಲ್ಪಮಟ್ಟಿನ

ಅಂಕಿಅಂಶಗಳನ್ನು ಪರಿಗಣನೆ ಮಾಡಿದರೆ, ಹೇಗೆ ತಾವು ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ವಿಫಲರಾಗಿದ್ದೀರಿ ಎಂಬುದು ಗೊತ್ತಾಗುತ್ತದೆ. ಇದನ್ನು ಜನ ಕೂಡ ತಿಳಿದುಕೊಳ್ಳಬೇಕಾದ ಅವಶ್ಯಕತೆಗಳು ಇವೆ. ಸುಮಾರು 3.65 ಲಕ್ಷ ಟನ್ ಆಹಾರಧಾನ್ಯಗಳನ್ನು ನಿಮಗೆ ಕೊಟ್ಟಿದ್ದಾರೆಂದು ಹೇಳುವಂಥಾದ್ದು ನೀವೇ ಒಪ್ಪಿಕೊಂಡ ಅಂಕಿಅಂಶಗಳ ಪ್ರಕಾರ ಮತ್ತು ಕೇಂದ್ರ ಸರ್ಕಾರದ ಅಂಕಿಅಂಶಗಳೂ ಕೂಡ ಹೌದು. ಇದುವರೆಗೆ ನೀವು ಎಷ್ಟು ಎತ್ತುವರಿ ಮಾಡಿದ್ದೀರಿ? ಫೆಬ್ರವರಿ ಕೊನೆಯವರೆಗೆ ನಮಗೆ ತಿಳಿದಂಥ ಅಂಕಿಅಂಶದ ಪ್ರಕಾರ ಕೇವಲ 3.36 ಲಕ್ಷ ಮಾತ್ರ ಎತ್ತುವರಿ ಮಾಡಿದ್ದೀರಿ. ಉಳಿದುದನ್ನು ಎತ್ತುವರಿಯೇ ಮಾಡಲಿಲ್ಲ. ಏಕೆ ಎತ್ತುವರಿ ಮಾಡಲಿಲ್ಲ? ಮತ್ತೆ ತಾವು ಕೇಂದ್ರಸರ್ಕಾರ ಕೊಡುತ್ತಾ ಇಲ್ಲವೆಂದು ಏಕೆ ಹೇಳುತ್ತಿದ್ದೀರಿ. ಇದನ್ನು ಎತ್ತುವರಿ ಮಾಡಲಿಕ್ಕೆ ನಿಮಗೇನು ತೊಂದರೆಯಾಗಿದೆ? ಎತ್ತುವರಿ ಮಾಡುವಂಥಾದ್ದನ್ನೂ ಮಾಡುತ್ತಾ ಇಲ್ಲ ಮತ್ತು ಕೇಂದ್ರಸರ್ಕಾರದ ಮೇಲೆ ಗೂಬೆ ಕೂರಿಸುವಂಥ ಕೆಲಸವನ್ನು ತಾವೆಲ್ಲಾ ಅಲ್ಲಿ ಕುಳಿತುಕೊಂಡು ಮಾಡುತ್ತಾ ಇದ್ದೀರಿ. ಆಯಿತು, ಒಂದುವೇಳೆ ಎತ್ತುವರಿ ಮಾಡಿದ್ದನ್ನು ಸದ್ವಿನಿಯೋಗ ಮಾಡಿದ್ದೀರಾ? ಅದನ್ನಾದರೂ ಪ್ರಶ್ನೆ ಮಾಡೋಣ. ಅದೂ ಕೂಡ ಮಾಡಲಿಲ್ಲ. ಎಷ್ಟು ಮಾಡಿದ್ದೀರಿ. ಈಗ ಎತ್ತುವರಿ ಮಾಡಿದಂಥ 3.36 ಲಕ್ಷ ಟನ್ ನಲ್ಲಿ ಸಾಧಾರಣವಾಗಿ ನನಗೆ ತಿಳಿದಂಥ ಅಂಕಿಅಂಶದ ಪ್ರಕಾರ ಸುಮಾರು 2,69,800 ಟನ್ ನಷ್ಟು ತಾವು ವಿನಿಯೋಗ ಮಾಡಲು ತಾವು ಬೇರೆ ಬೇರೆ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ್ದೀರಿ. ಎಂದು ಹೇಳುವಂಥಾದ್ದು ಪತ್ರಿಕೆಗಳಿಂದ, ಮಾಧ್ಯಮಗಳಿಂದ ನಮಗೆ ತಿಳಿದಂಥಾದ್ದು. ಆಯಿತು, ಅನುಷ್ಠಾನ ಮಾಡಿದವರು ಹೇಗೆ ಮಾಡಿದ್ದಾರೆ ಎಂಬುದನ್ನು ಯಾರಾದರೂ ನೋಡಿದ್ದಾರಾ? ನಿಮಗೆ ಬೇಕಾದಷ್ಟು ಗೂಟದ ಕಾರುಗಳು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಎಂದು ಹೇಳುವಂಥ ದೊಡ್ಡ ಬಿರುದಾವಳಿಗಳನ್ನು ಕೊಟ್ಟು, ಆ ಕೆಲಸಗಳನ್ನಾದರೂ ತಾವು ಮಾಡುತ್ತೀರಾ? ಎಷ್ಟು ಉಪಯೋಗ ಮಾಡಿದ್ದಾರೆ? ತಮ್ಮ ಅಂಕಿಅಂಶಗಳ ಪ್ರಕಾರವೇ ಫೆಬ್ರವರಿ ಕೊನೆಯ ಹಂತಕ್ಕೆ ಬಂದಾಗ ಸುಮಾರು 2 ಲಕ್ಷದ 60 ಸಾವಿರದ ಟನ್‌ನಷ್ಟು ಮಾತ್ರ ವಿನಿಯೋಗ ಮಾಡಿದ್ದೀರಿ, ಏಕೆ ಬಾಕಿಯದನ್ನು ಉಪಯೋಗ ಮಾಡಲಿಲ್ಲ? ಜಿಲ್ಲಾಮಂತ್ರಿಗಳು ದಿನನಿತ್ಯ ಓಡಾಟ ಮಾಡುತ್ತೀರಲ್ಲ, ಎಷ್ಟು ಸಭೆಗಳನ್ನು ಕರೆದಿದ್ದೀರಿ. ಜಿಲ್ಲಾಧಿಕಾರಿಗಳ ಮೂಲಕ ಈ ವಿನಿಯೋಗಗಳು ಆಗಿವೆಯೇ ಇಲ್ಲವೇ ಎಂಬುದನ್ನು ತಾವು ಎಷ್ಟು ಭಾರಿ ಕೇಳಿದ್ದೀರಿ. ದಯವಿಟ್ಟು, ನಾನು ಕಂದಾಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಜಿಲ್ಲಾವಾರು ಮಾಹಿತಿಗಳನ್ನು ಒದಗಿಸಿ ಆ ಜಿಲ್ಲೆಯಲ್ಲಿ, ಇಂತಹ ಜಿಲ್ಲಾಮಂತ್ರಿ, ಜಿಲ್ಲಾಧಿಕಾರಿಗಳ ಇಷ್ಟು ಸಭೆಗಳನ್ನು ಕರೆದಿದ್ದಾರೆ ಬೇರೆ ಬೇರೆ ಇಲಾಖೆಗಳಿಂದ ಯಾವರೀತಿ ಅದನ್ನು ಅನುಷ್ಠಾನ ಮಾಡಿದ್ದಾರೆ ಎಂಬ ಬಗ್ಗೆ ತಾವು ಅಂಕಿಅಂಶಗಳನ್ನು ಇಡಿ. ಇದನ್ನು ಮಾಡುವ ಬದಲು, ಸುಮ್ಮನೆ ಕೇಂದ್ರಸರ್ಕಾರ ಏನೂ ಮಾಡಲಿಲ್ಲ, ನಾವು ಸಾಕಷ್ಟು ಕೇಳಿದ್ದೇವೆ ಎಂದು ಹೇಳುವುದು ಬೇಡ. ಅಲ್ಲಿ ಕೊಟ್ಟಿದ್ದನ್ನು ನೀವು ಎತ್ತುವರಿ ಮಾಡುವುದಕ್ಕಾಗಲಿಲ್ಲ, ಎತ್ತುವರಿ ಮಾಡಿದ್ದನ್ನು ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಿಕ್ಕೆ ಆಗಲಿಲ್ಲ. ಬಿಡುಗಡೆ ಆಗಿದ್ದು ಸದ್ವಿನಿಯೋಗವಾಗಿದೆಯೇ ಎಂದು ನೋಡುವಂಥ ವ್ಯವಸ್ಥೆಗಳಾಗಲಿಲ್ಲ. ಇವತ್ತು ಕೇಂದ್ರದ ಮೇಲೆ ಗೂಬೆ ಕೂರಿಸಿ, ಜವಾಬ್ದಾರಿಯಿಂದ ನುಣಚಿಕೊಳ್ಳುವಂಥಾದ್ದು ಮಾಡುತ್ತಿದ್ದೀರಿ. ಖಂಡಿತವಾಗಿಯೂ ಸಹ ಈ ಸಾರಿ ಜನ ನಿಮ್ಮನ್ನು ಒಪ್ಪಿಕೊಳ್ಳುವುದಿಲ್ಲ. ನೀವು ತಿಳಿದು ಕೊಳ್ಳಬಹುದು. ಮೊನ್ನೆ ಉಪ ಚುನಾವಣೆಯಲ್ಲಿ ಗೆದ್ದುಬಿಟ್ಟಿದ್ದೇವೆಂದು ಹೇಳಿ ನೀವು ಶಹಭಾಸ್‌ಗಿರಿ ತಟ್ಟಿಕೊಂಡು ಹೋಗ

ಓಡಾಡುವಂಥ ಕೆಲಸಕಾರ್ಯಗಳನ್ನು ಮಾಡಬಹುದು. ಹತ್ತು ಸುಳ್ಳು ಹೇಳಿ ಎಲ್ಲೋ ಒಂದು ಕಡೆ, ಒಂದು ದೊಡ್ಡ ಕೆಲಸ ಮಾಡಿದರೆ ಇಡೀ ಕರ್ನಾಟಕ ಜನತೆ ನಿಮ್ಮನ್ನು ನಂಬುತ್ತಾರೆಂದು ಹೇಳುವುದನ್ನು ತಾವು ದಯವಿಟ್ಟು ಮರೆಯಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಖಂಡಿತ ಜನ ನಿಮ್ಮನ್ನು ಕ್ಷಮಿಸುವುದಿಲ್ಲ.

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) : ನಾವು ಹತ್ತು ಸುಳ್ಳುಹೇಳಿದರೆ, ನೀವು ಸಾವಿರ ಸುಳ್ಳು ಹೇಳುತ್ತೀರಿ.

ಶ್ರೀ ಡಿ.ವಿ. ಸದಾನಂದಗೌಡ : ಸ್ವಾಮಿ, ತಾವು ಜವಾಬ್ದಾರಿ ಸ್ಥಾನದಲ್ಲಿರುವವರು ಸುಳ್ಳು ಹೇಳುವುದನ್ನು ಒಪ್ಪಿಕೊಂಡಿದ್ದೀರಲ್ಲಾ, ನಮಗೆ ಸಂತೋಷ ತಾವು ಹತ್ತು ಸುಳ್ಳು ಹೇಳಿದ್ದೀರಲ್ಲಾ. ನೀವು ಹತ್ತು ಸುಳ್ಳು ಹೇಳಿದ್ದೀರಿ ಎಂಬುದನ್ನು ಒಪ್ಪಿಕೊಂಡಿದ್ದನ್ನು ಕರ್ನಾಟಕದ ಜನತೆ ಖಂಡಿತ ಕ್ಷಮಿಸುವುದಿಲ್ಲ. ನಾವು ಒಂದೇ ಒಂದು ಸುಳ್ಳನ್ನು ಹೇಳಿಲ್ಲ.

ಶ್ರೀ ಎಂ. ಮಹದೇವ್ : ನಾವೇನಾದರೂ ಹತ್ತು ಸುಳ್ಳುಹೇಳಿದರೆ, ನೀವು ಸಾವಿರ ಸುಳ್ಳು ಹೇಳುತ್ತೀರಿ ಎಂದು ಹೇಳಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ನಿಮ್ಮ ಹತ್ತನೇ ಸುಳ್ಳಲ್ಲಿ, ಮೊದಲನೇ ಸುಳ್ಳೇ ನಾವು ಸಾವಿರ ಸುಳ್ಳು ಹೇಳುತ್ತಿದ್ದೇವೆ ಎನ್ನುವುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅಂತೂ ಹತ್ತು ಸುಳ್ಳು ಹೇಳುತ್ತೇವೆಂದು ನೀವು ಒಪ್ಪಿಕೊಂಡಿರಲ್ಲಾ.

ಶ್ರೀ ಎಂ. ಮಹದೇವ್ : ನಾವು ಸುಳ್ಳು ಹೇಳುತ್ತಾ ಇದ್ದೇವೆಂದಲ್ಲ. ನೀವು ಸುಳ್ಳು ಹೇಳಿದ್ದೀರಲ್ಲಾ, ಇಡೀ ರಾಷ್ಟ್ರಕ್ಕೇ ಸುಳ್ಳನ್ನು ಹಂಚಿಬಿಟ್ಟಿದ್ದೀರಿ.

ಶ್ರೀ ಡಿ.ವಿ. ಸದಾನಂದಗೌಡ : ನಮ್ಮ ಕರಾವಳಿ ಜಿಲ್ಲೆಯಲ್ಲಿ ಮೀನು ಹಿಡಿಯುವಂಥ ವ್ಯವಸ್ಥೆ ಉಂಟು. ಸನ್ಮಾನ್ಯ ರಮಾನಾಥ್ ರೈಯವರಿಗೆ, ಶಾಸಕರಾದ ಸಭಾಪತಿಯವರಿಗೆ ಚೆನ್ನಾಗಿ ಗೊತ್ತುಂಟು. ದೊಡ್ಡ ಮೀನಿಗೆ ದೊಡ್ಡ ಬಲೆ ಹಾಕುವಂಥಾದ್ದು, ದೊಡ್ಡ ತೂತು ಇರುತ್ತದೆ ಅದಕ್ಕಿಂತ ಸಣ್ಣ ಮೀನಿಗೆ, ಸಣ್ಣ ಬಲೆ ಹಾಕುವಂಥಾದ್ದು ಇರುತ್ತದೆ. ಕರ್ನಾಟಕ ರಾಜ್ಯದ ಜನರಿಗೆ ನೀವು ಯಾವ ಬಲೆ ಹಾಕುತ್ತೀರಿ? ದಯವಿಟ್ಟು ಹೇಳಿ. ನೀವು ಸುಳ್ಳಿನ ಬಲೆ ಹಾಕುತ್ತೀರಾ? ಸುಳ್ಳಿನ ಬಲೆಯಲ್ಲಿ ನೀವು ಯಾವತ್ತೂ ಬಚಾವ್ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಹದೇವ್ : ಕರ್ನಾಟಕ ಜನ ಬಹಳ ಪ್ರಜ್ಞಾವಂತರು ಇದ್ದಾರೆ. ನಿಮ್ಮ ವಿಚಾರವೆಲ್ಲಾ ಹುಮ್ನಾಬಾದ್ ಚುನಾವಣೆಯಲ್ಲಿ ಗೊತ್ತಾಯಿತಲ್ಲಾ. ಅವರು ಸುಳ್ಳಿಗೆ ಮರಳಾಗಲಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಸ್ವಾಮಿ ರೇಷ್ಮೆ ಬಲೆ ಹಾಕುತ್ತೀರಾ, ಅದು ಈಗ ಇಲ್ಲವಲ್ಲಾ ಈಗ ಅಂಕಿಅಂಶಗಳ ಆಧಾರದ ಮೇಲೆ ನಾನು ಹೇಳಿದ್ದೇನೆ. ಇದಕ್ಕೆ ನೀವೇನು ಹೇಳುತ್ತೀರಿ ಎಂಬುದು ಸದನದ ಮುಂದೆ ಬರಲಿ. ಅಂಕಿಅಂಶಗಳ ಆಧಾರದಲ್ಲಿ ಕೇಂದ್ರಸರ್ಕಾರ ಬಿಡುಗಡೆ ಮಾಡಿದ್ದು, ನೀವು ಅನುಷ್ಠಾನದ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ್ದು, ಆ ಸಂಸ್ಥೆಗಳು ವಿನಿಯೋಗ ಮಾಡಿದ್ದರ ಬಗ್ಗೆ ನಾನು ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಅಂಕಿಅಂಶಗಳ ಮುಖಾಂತರ ನೀವೂ ದಯವಿಟ್ಟು ಬನ್ನಿ, ನಾವು ಇಷ್ಟು ಮಾಡಿದ್ದೇವೆ, ಹೀಗೆ ಮಾಡಿದ್ದೇವೆ ಎನ್ನುವಂಥಾದ್ದನ್ನು ಹೇಳಿ. ಏಕೆ ಹೇಳುವಂಥ ಪ್ರಯತ್ನಗಳನ್ನು ಮಾಡುತ್ತಾ ಇಲ್ಲ. ಹೋದಲ್ಲಿ, ಹೋದಲ್ಲಿ ಇಷ್ಟಿಷ್ಟುದ್ದ ಮಾತನಾಡುತ್ತೀರಿ. ಕೇಂದ್ರಸರ್ಕಾರದ ಮೇಲೆ ಗೂಬೆ ಕೂರಿಸುತ್ತೀರಿ. ನಿಮ್ಮ ಜವಾಬ್ದಾರಿಯನ್ನು ಎಷ್ಟು ನಿಭಾಯಿಸಿದ್ದೀರಿ.

ಶ್ರೀ ಎ. ರಾಮದಾಸ್ : ಕ್ಯಾಬಿನೆಟ್ ಸಚಿವರುಗಳಲ್ಲಿ ವಿಶೇಷವಾಗಿ ಸಚಿವರಾದ ಮಹದೇವ್‌ರವರು ಉತ್ತರ ಹೇಳಬೇಕಾಗುತ್ತದೆ. ಕಾರಣ, ಶ್ರೀ ಸದಾನಂದಗೌಡರು ಬಹಳ ಜವಾಬ್ದಾರಿಯುತವಾದ ಒಂದು ವಿಚಾರವನ್ನು ಹೇಳಿದರು. ಇಲ್ಲಿಯವರೆಗೆ ಕೇಂದ್ರಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು ಎನ್ನುವುದರ ಜೊತೆಗೆ ಅಲ್ಲಿ ಬಿಡುಗಡೆ ಮಾಡರುವಂಥ ಅಕ್ಕಿಯನ್ನು ಮತ್ತು ಬೇರೆ ಬೇರೆ ಪದಾರ್ಥಗಳನ್ನು ಕೊಟ್ಟಂಥಾದ್ದನ್ನು ಇಡೀ ರಾಜ್ಯದಲ್ಲಿ ಅವ್ಯವಹಾರವಾಗಿ, ಮಾರಾಟ ಮಾಡಿಕೊಂಡು, ಅದೂ ಇಂತಹ ಒಂದು ಪರಿಸ್ಥಿತಿಯೊಳಗಡೆ ತಮ್ಮ ಕ್ಷೇತ್ರದಲ್ಲಿ ಆಗಿರುವಂಥ ವ್ಯವಸ್ಥೆಗಳೇನಿವೆ, ಇಡೀ ರಾಜ್ಯಕ್ಕೆ ಆದಂಥ ಒಂದು ಅಪಮಾನ. ಜೊತೆಗೆ ಬರದ ಪರಿಸ್ಥಿತಿಯಲ್ಲಿ ಬಂದಂಥ ಕೂಲಿಗಾಗಿ ಕಾಳಿನ ಒಂದು ಅವ್ಯವಹಾರ ನಡೆದಂಥಾದ್ದು ಎಲ್ಲಿ ಎನ್ನುವ ವಿಚಾರವನ್ನು ದಯವಿಟ್ಟು ಸದನದ ಮುಂದೆ ಕೊಟ್ಟರೆ ಎಲ್ಲರಿಗೂ ಒಳ್ಳೆಯದಾಗುತ್ತೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅವರು ಮೊದಲೇ ನೋಟೀಸ್ ಕೊಡಬೇಕು, ಸುಮ್ಮನೆ ಜನರಲ್ಲಾಗಿ ಕ್ಯಾಬಿನೆಟ್ ಸಚಿವರು ಎಂದರೆ, ಯಾರೋ ಆಗಬಹುದು. ಚಂದ್ರೇಗೌಡರು ಆಗಬಹುದು. ಇನ್ನೊಬ್ಬರೂ ಆಗಬಹುದು. ನೀವು ಹೆಸರು ಹೇಳುವುದು ಬೇಡ. ಕ್ಯಾಬಿನೆಟ್ ಸಚಿವರು ಯಾರು ಎಂದು ನಿಖರವಾಗಿ ಹೇಳಬೇಕು. ಇಲ್ಲದೇ ಹೋದರೆ, ನಾವೆಲ್ಲರೂ ಹೆಗಲು ಮುಟ್ಟಿ ನೋಡಿ ಕೊಳ್ಳಬೇಕಾಗುತ್ತದೆ. ಇದೇನಪ್ಪ ನಾವು ಹೊತ್ತುಕೊಂಡೇ ಹೋಗಿಲ್ಲ. ನಮ್ಮ ಮೇಲೆ ಏಕೆ ಎಂಬುದು ಬರುತ್ತದೆ. ದಯವಿಟ್ಟು ಈ ರೀತಿ ಜನರಲೈಸ್ ಮಾಡತಕ್ಕಂಥಾದ್ದು ಸರಿಯಲ್ಲ.

ಇವೆಲ್ಲಾ ದಾಖಲೆಗಳಲ್ಲಿರಬಾರದು. ಸಭೆಯ ಅಧ್ಯಕ್ಷರಾದ ತಾವು ಸ್ವಲ್ಪ ನಿಯಂತ್ರಣ ಮಾಡಿ. ಸ್ಪೆಸಿಫಿಕ್ಕಾಗಿ Let him make a charge, let him give a notice.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಪತ್ರಿಕೆಗಳಲ್ಲಿ ಕ್ಯಾಬಿನೆಟ್ ಸಚಿವರು ಹೆಸರು ಕೂಡ ಬಂದಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ನೋಟೀಸ್ ಕೊಡಲಿ. ಸದನಕ್ಕೆ ಎಲ್ಲಾ ವಿಚಾರ ತಿಳಿಯಲಿ, the House is entitled to know.

ಶ್ರೀ ಎಂ. ಮಹದೇವ್ : ಕ್ಯಾಬಿನೆಟ್ ಸಚಿವರು ಅವ್ಯವಹಾರ ಮಾಡಿದ್ದಾರೆಂಬುದನ್ನು ನೀವು ಪ್ರೂವ್ ಮಾಡಿಸಿಬಿಡಿ, ಆಮೇಲೆ, ನಾವು ಅದನ್ನು ಎದುರಿಸುವುದಕ್ಕೆ ತಯಾರಿದ್ದೇವೆ. ಏಕೆ, ನೀವು ಅನಾವಶ್ಯಕವಾಗಿ ಮಾತನಾಡುತ್ತಿದ್ದೀರಿ. ಯಾರೋ ಏನೋ ತಪ್ಪು ಮಾಡಿದ್ದಾರೆ, ಈ ವಿಚಾರದಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿದೆ. ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಎಲ್ಲಾ ಕ್ರಮಗಳನ್ನೂ ತೆಗೆದುಕೊಂಡಿದೆ. ಎಲ್ಲೆಲ್ಲಿ ಅವ್ಯವಹಾರ ನಡೆದಿದೆಯೋ ಅಲ್ಲೆಲ್ಲಾ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ. ಅದಕ್ಕೇಕೆ ನೀವು ಬೇರೆ ಅರ್ಥ ಬರುವ ರೀತಿಯಲ್ಲಿ ಮಾತನಾಡುತ್ತೀರಿ?

ಶ್ರೀ ಎ. ರಾಮದಾಸ್ : ನಾನು ಹೇಳಿರುವುದು ಕಡತದಲ್ಲಿದೆ, ಈಗಲೂ ತೆಗೆಸಿ. ಒಬ್ಬರು ಕ್ಯಾಬಿನೆಟ್ ಸಚಿವರ ಕ್ಷೇತ್ರದಲ್ಲಿ ಕೂಲಿಗಾಗಿ ಕಾಳಿನ ಯೋಜನೆಯಲ್ಲಿ ಆಗಿರುವಂಥ ಅವ್ಯವಹಾರದ ವಿಚಾರಗಳು ರಾರಾಜಿಸುತ್ತಾ ಇರುವಂಥಾದ್ದು ಎಂದು ನಾನು ಹೇಳಿದ್ದೇನೆಯೇ ಹೊರತು, ಎಂದು ನಾನು ಹೇಳಿಲ್ಲ. ನೀವು ಬೇಕಾದರೆ ತೆಗೆಯಿರಿ. ನಾನು ಈಗಲೂ ಹೇಳುತ್ತಿದ್ದೇನೆ. ಇವತ್ತೇ ಹೇಳುತ್ತೇನೆ, ಇಪ್ಪತ್ತು ಸಲ ಹೇಳುತ್ತೇನೆ. ಪ್ರೂವ್ ಮಾಡುತ್ತೇನೆ.

---

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವೂ ಶಾಸನ ಸಭೆಯಲ್ಲಿ 30 ವರ್ಷ ಕಳೆದಿದ್ದೇವೆ ನೀವು, ನಮಗೆ ಹೊಸದಾಗಿ ಕಲಿಸಿಕೊಡಬೇಡಿ. ಆದರೆ, ನಾವು ನಿಮ್ಮನ್ನು ಎಷ್ಟು ಗೌರವವಾಗಿ ಕಾಣುತ್ತೇವೆಯೋ ಹಾಗೆಯೇ ಒಂದು ಸರ್ಕಾರ, ಒಬ್ಬ ಕ್ಯಾಬಿನೆಟ್ ಮಂತ್ರಿ ಎಂದರೆ ಗೌರವವಾಗಿ ನೋಡಬೇಕು. ಇತ್ತೀಚಿನ ನಡವಳಿಕೆಗಳು ಏನಾಗಿದೆ ಎಂದರೆ, ಶಬ್ದಗಳ ಬಳಕೆ, ನಾವು ಈ ಹೊಸ ಶಬ್ದಗಳನ್ನು ಕಲಿತುಕೊಳ್ಳಬೇಕಾಗಿದೆ. ಶಬ್ದ ಬಂಡಾರವೇ ಬೇರೆ. ಇದು ಯಾವ ಶಬ್ದ ಬಂಢಾರ ಎಂದು ನಾವು ಕೇಳಬೇಕಾಗಿದೆ.

ಶ್ರೀ ಎ. ರಾಮದಾಸ್ : ದಾಖಲೆಗೆ ಹೋಗಿದೆ ಅದನ್ನು ಪ್ರೂವ್ ಮಾಡಲಿಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಕಡತ ತೆಗೆಸಿ ನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಕ್ಯಾಬಿನೆಟ್ ಮಂತ್ರಿ ಎಂದರೆ, ಯಾರು ಎಂದು ಸ್ಪೆಸಿಫೈ ಮಾಡಬೇಕು.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸಚಿವರಾದ ಚಂದ್ರೇಗೌಡರು ಇದುವರೆಗೂ ಹೇಳದಿದ್ದನ್ನು, ಹೊಸದು ಯಾವುದನ್ನು ಹೇಳಲಿಲ್ಲ.

ಉಪಾಧ್ಯಕ್ಷರು : ರಾಮದಾಸ್‌ರವರೇ, ನೀವು ಆ ರೀತಿ ಹೇಳಿದರೆ ಆಗುವುದಿಲ್ಲ. ಕ್ಯಾಬಿನೆಟ್ ಸಚಿವರು ಎಂದು, ನೀವು ಮೊಗಮ್ಮಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ತರಹ ಹೇಳಿಸಿಕೊಂಡಿಲ್ಲ. ಜ್ಞಾನೇಂದ್ರರವರೆ with due respect ಸ್ವಲ್ಪ ಗೌರವವಾಗಿ ನಡೆದು ಹೇಳುವುದು ಒಳ್ಳೆಯದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರ ಬಗ್ಗೆ ಚರ್ಚೆ ಅನಾವಶ್ಯಕ. ಏಕೆಂದರೆ, ಗೌರವಾನ್ವಿತ ಸದಸ್ಯರು, ನಾನು ಯಾವುದೇ ಮಂತ್ರಿಗಳ ಬಗ್ಗೆ ಹೇಳಲಿಲ್ಲವೆಂದಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ರಾಮದಾಸ್‌ರವರು ಪತ್ರಿಕೆಯಲ್ಲಿ ಬಂದಂಥದ್ದನ್ನು ಪ್ರಸ್ತಾಪ ಮಾಡಿದರು, ಅದಕ್ಕೋಸ್ಕರ ಅಂಥದ್ದು ಇದ್ದರೆ ಸ್ಪೆಸಿಫಿಕ್ ಆಗಿ ಅವರ ಹೆಸರನ್ನು ಕೊಡಿ. ಬರವಣಿಗೆಯಲ್ಲಿ ನಿರ್ದಿಷ್ಟವಾದ ವಿಚಾರಗಳನ್ನು ಕೊಡಿ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ನಾನು ಈಗಲೂ ಹೇಳುತ್ತಾ ಇದ್ದೇನೆ. ಹೇಳಿರುವಂಥ ವಿಚಾರಗಳು ನಿಜ. ದಾಖಲೆಗಳನ್ನು ಕೊಡಿ ಎಂದು ಹೇಳುತ್ತೀರಿ. ತಾವುಗಳು ಹೇಗೂ ಬಜೆಟ್‌ನ ಮೇಲಿನ ಉತ್ತರವನ್ನು ಕೊಡುವಾಗ ಇನ್ನುವ ಅಷ್ಟೂ ಡಾಕ್ಯುಮೆಂಟ್‌ಗಳನ್ನು ನಿಮಗೆ ಕೊಡುತ್ತೇನೆ. ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಗೌಡಾನ್‌ನಲ್ಲಿ ಈ ಬರ ಪರಿಹಾರಕ್ಕೋಸ್ಕರವಾಗಿ ಬಂದಂಥ ಅಕ್ಕಿ ಯಾರು ಮಾರಾಟ ಮಾಡಿದರು? ಅದರ ಸಮಯದಲ್ಲಿ ಅಲ್ಲಿ ಯಾರನ್ನು ಸಸ್ಪೆಂಡ್ ಮಾಡಿದರು? ಇದಕ್ಕೆ ಸಂಬಂಧಪಟ್ಟಂಥ ಅಕ್ಕಿ ಯಾರ ಮನೆಯಲ್ಲಿ ಸಿಕ್ಕಿತು ಎಂಬಿತ್ಯಾದಿ ಎಲ್ಲಾ ದಾಖಲೆಗಳನ್ನು ನಾನು ಕೊಡುತ್ತೇನೆ. ನಾನು ಈ ಕ್ಷಣದಲ್ಲಿಯೂ ಕೂಡ ಅದನ್ನು ಹೇಳುವುದಕ್ಕೆ ಬದ್ಧನಾಗಿದ್ದೇನೆ.

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಪ್ರಕರಣದಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕಠಿಣವಾದಂಥ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಿಮ್ಮಲ್ಲಿ ಏನಾದರೂ ನಿರ್ದಿಷ್ಟವಾದ ಹೆಸರುಗಳು ಇದ್ದರೆ ಕೊಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸಚಿವರು ಎಲ್ಲೆಲ್ಲಿ ಅವ್ಯವಹಾರವಾಗಿದೆ ಅದನ್ನು ನೋಡಿದ್ದೇವೆ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ, ಅವರನ್ನೆಲ್ಲಾ ಸಸ್ಪೆಂಡ್ ಮಾಡಿದ್ದೇವೆ, ಎಂಬಂಥ ಮಾತುಗಳನ್ನು ಹೇಳಿದರು. ದಯವಿಟ್ಟು ಸದನದ ಮುಂದೆ ವಿವರಗಳನ್ನು ಇಡಿ. ಎಷ್ಟು ಕಡೆಗಳಲ್ಲಿ ಅವ್ಯವಹಾರಗಳು ಕೂಲಿಗಾಗಿ ಕಾಳು ಯೋಜನೆಯಲ್ಲಿ ನಡೆದಿವೆ? ಲೋಕಾಯುಕ್ತದವರು ಎಲ್ಲೆಲ್ಲಿ ದಾಳಿ ಮಾಡಿದ್ದಾರೆ? ನಂಜನಗೂಡಿನಲ್ಲಿ ಲೋಕಾಯುಕ್ತದವರು ದಾಳಿ ಮಾಡಿಲ್ಲವೇ? ಅಧಿಕಾರಿಗಳು ಯಾರಿದ್ದಾರೆ ಅವರ ಪಟ್ಟಿಯನ್ನು ಮಾಡಿ ಕೊಡಲಿಲ್ಲವೇ? ಶಿವಮೊಗ್ಗದಲ್ಲಿ ಕೂಡ ಹೀಗೆ ಆಗಿಲ್ಲವೇ? ನೀವು ಇದನ್ನು ನಮ್ಮ ಬಾಯಿಂದಲೇ ಹೇಳಿಸಬೇಕೆಂಬ ಪ್ರಯತ್ನಗಳನ್ನು ಏಕೆ ಮಾಡುತ್ತಾ ಇದ್ದೀರಿ? ಲೋಕಾಯುಕ್ತದ ಧಾಳಿಯು ನಂಜನಗೂಡಿನಲ್ಲಿ ಆಗಿದೆ. ಧಾಳಿ ಆದಮೇಲೆ ಅಲ್ಲಿ ಆದಂಥ ಅವ್ಯವಹಾರಗಳ ಬಗ್ಗೆ ಅಲ್ಲಿರುವಂಥದ್ದೆಲ್ಲವನ್ನೂ ಅವರು ಉಲ್ಲೇಖ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಲೋಕಾಯುಕ್ತರವರಿಂದ ವರದಿಯು ಬಾರದೇ ಹೋದರೆ ಅದನ್ನು ಸರಕಾರ ಹೇಗೆ ಮಾನ್ಯತೆ....

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ಲೋಕಾಯುಕ್ತದವರಿಂದ ವರದಿ ಬರುವವರೆಗೂ ನೀವು ಯಾವುದೇ ಕ್ರಮ ತೆಗೆದುಕೊಳ್ಳಲಾಗುವುದಿಲ್ಲವೇ? ಅವ್ಯವಹಾರಗಳು ನಡೆದಿರುವುದು ನಿಮಗೆ ಗಮನಕ್ಕೆ ಬರುವುದಿಲ್ಲ? ನೀವು ಅದನ್ನು ತಡೆಯುವುದಿಲ್ಲ? ಅದು ಹಾಗೆಯೇ ನಡೆದುಕೊಂಡು ಹೋಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಸರಕಾರದವರು ಇಂಥ ವಿಚಾರಗಳಲ್ಲಿ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಿರುತ್ತದೆ. ನೀವು ಲೋಕಾಯುಕ್ತದ ಪ್ರಸ್ತಾಪ ಮಾಡಿ ಹೇಳಿದ್ದಕ್ಕಾಗಿ ನಾವು ಅದನ್ನು ಹೇಳಬೇಕಾಯಿತು. ಲೋಕಾಯುಕ್ತ ಮಾಡದೇ ಇದ್ದರೂ ನಾವು ಮಾಡುವ ಕೆಲಸವನ್ನು ಮಾಡಿಯೇ ಮಾಡುತ್ತೇವೆ. ಅದಕ್ಕಾಗಿ ತಾವು ಲೋಕಾಯುಕ್ತವನ್ನು ಪ್ರಸ್ತಾಪ ಮಾಡದೇ ನೇರವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅವರು ಮಾತನಾಡುವಾಗ ಎಲ್ಲೆಲ್ಲಿ ಅವ್ಯವಾಹರಗಳು ಆಗಿವೆ ಎಂದು ರೆಫರೆನ್ಸ್ ತೆಗೆದುಕೊಂಡರು. ನೀವು ಲೋಕಾಯುಕ್ತದ ವರದಿ ಬರುವ ತನಕ ನಾವು ಏನೂ ಮಾಡುವುದಿಲ್ಲವೆಂಬ ಮಟ್ಟದಲ್ಲಿ ಇದ್ದರೆ, ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ : ಲೋಕಾಯುಕ್ತದವರು ಹೇಳಿದ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾದರೆ ಅವರ ವರದಿ ಬೇಕಾಗುತ್ತದೆ. ಲೋಕಾಯುಕ್ತ ಮಾಡುವಂಥ ಕೆಲಸವನ್ನು ಸರಕಾರ ಮಾಡಬಾರದು, ತನಿಖೆ ಮಾಡಬಾರದು ಎಂದು ಹೇಳಿಲ್ಲ. ನಾವಾಗಿಯೇ ಗ್ರಹಿಸಬಹುದು, ಕ್ರಮ ಕೈಗೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಮಾನ್ಯ ಸಚಿವ ಮಹದೇವ್ ರವರು ಮಾತನಾಡುತ್ತಾ ಹೇಳಿದರು. ಎಲ್ಲೆಲ್ಲಿ ಅವ್ಯವಹಾರಗಳು ಆಗಿವೆ, ಅಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡಿದ್ದೇವೆ, ಕೇಸ್‌ಗಳನ್ನು ಹಾಕಿದ್ದೇವೆ, ಎಂದು ಹೇಳಿದ್ದಾರೆ, ತಾವುಗಳು ಆ ಬಗ್ಗೆ ವಿವರಗಳನ್ನು ಕೊಡಿ.

ಶ್ರೀ ಎಂ. ಮಹದೇವ್ : ನೀವುಗಳು ಇಂಥಿಂಥ ಕಡೆ ಅವ್ಯವಹಾರಗಳು ನಡೆದಿವೆ ಎಂದು ಹೇಳಿದರೆ, ಸೂಕ್ತ ಮಾಹಿತಿಗಳನ್ನು ಕೊಟ್ಟರೆ ಅದರ ಮೇಲೆ ನಾವು ಕ್ರಮ ಜರುಗಿಸಿ

ನಾವು ತೆಗೆದುಕೊಂಡ ಕ್ರಮಗಳ ಬಗ್ಗೆ ಹೇಳಬಹುದು. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಗಳನ್ನು ಹಾಕಿ ಕೇಳಿ ಈಗ ಉತ್ತರವನ್ನು ಕೊಡುತ್ತೇವೆ. ತಪ್ಪಿತಸ್ಥರು ಎಂದುಕಂಡು ಬಂದವರ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಯಾರನ್ನೂ ಕೂಡ ಸ್ಪೇರ್ ಮಾಡಲು ನಾವು ಹೋಗಿಲ್ಲ. ಎಲ್ಲಿ ಹೀಗೆ ಆಗಿದೆ ಅಲ್ಲಿ ನಾವು ಸಂಬಂಧಪಟ್ಟ ಕ್ಷೇತ್ರದ ಶಾಸಕರು ಮುಂತಾಗಿ ಜವಾಬ್ದಾರಿಯುತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೂಕ್ತ ಕ್ರಮವನ್ನು ತಪ್ಪಿತಸ್ಥರ ಮೇಲೆ ತೆಗೆದುಕೊಂಡಿಲ್ಲವೆ? ನೀವುಗಳು ಜನರಲ್ ಆಗಿ ಮಾತನಾಡುತ್ತಾ ಇದ್ದೀರಿ... ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಕ್ಕಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಸಚಿವರು ಹೆಗಲು ಮುಟ್ಟಿಕೊಂಡು ನೋಡುತ್ತಾ ಇದ್ದಾರೆ. ನಿಮ್ಮನ್ನು ಯಾರೂ ಕುಂಬಳಕಾಯಿ ಕಳ್ಳ ಎಂದು ಹೇಳಲಿಲ್ಲ. ಆಗಲೇ ಸಚಿವರು ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಮಹದೇವ್ : ಇಲಾಖೆಯಲ್ಲಿ, ನಮ್ಮ ಕ್ಷೇತ್ರದಲ್ಲಾಗಲೀ, ರಾಜ್ಯದ ಯಾವ ಕಡೆಗಳಲ್ಲಿಯೇ ಆಗಲಿ, ಅವ್ಯವಹಾರಗಳು, ತಪ್ಪುಗಳು ನಡೆದರೆ ಅದನ್ನು ಗಮನದಲ್ಲಿಟ್ಟುಕೊಂಡು ಸರಕಾರವು ಸೂಕ್ತ ಮತ್ತು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತದೆ, ನೀವು ಏತಕ್ಕಾಗಿ ಅಷ್ಟು ಲಘುವಾಗಿ ಮಾತನಾಡುತ್ತೀರಿ.

ಶ್ರೀ ಸಿ. ಚೆನ್ನಿಗಪ್ಪ : ನಾವುಗಳು ಇಂಥ ತಪ್ಪುಗಳು ಆಗಿವೆ ಎಂದು ಹೇಳಿ ಸರಕಾರದ ಮುಂದೆ ಇಡುತ್ತೇವೆ. ಉತ್ತರ ಕೊಡುವುದು ಸರಕಾರದ ಕರ್ತವ್ಯ. ಜನತೆ ಅದನ್ನು ಪರಿಶೀಲನೆ ಮಾಡುತ್ತದೆ. ಅಷ್ಟಕ್ಕೆ ಸೀಮಿತವಾಗಿ ಅದನ್ನು ಬಿಟ್ಟು ಬೇರೆ ಮಾತುಗಳನ್ನು ಆಡಬೇಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ವಿಚಾರವನ್ನು ತಮ್ಮ ಮುಂದಿಡಲು ಬಯಸುತ್ತೇನೆ. ಮಾನ್ಯ ಹಿರಿಯ ಸಚಿವರಾದ ಕಾಗೋಡು ತಿಮ್ಮಪ್ಪರವರು ನಮಗ ಲೋಕಾಯುಕ್ತರ ಧಾಳಿಯ ಕುರಿತಾದ ವರದಿಗಳು ಬಂದಾಗ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ವರದಿಯ ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಇದನ್ನು ತಾವುಗಳು ದಯಮಾಡಿ ಬೇರೆ ವಿಚಾರಗಳಲ್ಲಿ ಮಾಡಿ. ಬರಗಾಲದ ವಿಚಾರದಲ್ಲಿ ನೀವು ಲೋಕಾಯುಕ್ತರವರೆಗೆ ಹೋಗುವುದು ಬೇಡ. ನೀವು ಪ್ರತಿಯೊಬ್ಬ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ನೇಮಕ ಮಾಡಿ ಜವಾಬ್ದಾರಿಯಿಂದ ಈ ವಿಚಾರವನ್ನು ನೋಡಿಕೊಳ್ಳಿ ಎಂದು ಕೊಟ್ಟಿದ್ದಾರೆ. ಆ ರೀತಿಯಲ್ಲಿ ಯಾವುದೇ ದುರುಪಯೋಗವಾದ ರೀತಿಯಲ್ಲಿ ನೋಡುವಂಥ ಕೆಲಸಕಾರ್ಯಗಳನ್ನು ಮಾಡಿ. ದುರುಪಯೋಗ ಆದ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂಬ ಪರಿಸ್ಥಿತಿಯ ವರೆಗೆ ಕಾಯುವುದು ಬೇಡ, ಅದು ಸರಿಯಲ್ಲ ಎನ್ನುವುದು ನನ್ನ ವಾದ. ಇವೊತ್ತು ಬರದ ಸಂದರ್ಭದಲ್ಲಿ ನಾವು ಜಾಗ್ರತೆಯಿಂದ ಕೆಲಸ ಮಾಡಬೇಕಾಗುತ್ತದೆ. ಬಾಕಿ ಸಂದರ್ಭಗಳಲ್ಲಿ ಬೆಂಗಳೂರಿನ ಅಕ್ಕಪಕ್ಕದಲ್ಲಿ ಏನೆಲ್ಲಾ ಆಯಿತು, ಎಷ್ಟೆಲ್ಲಾ ಕೊಳ್ಳೆ ಹೊಡೆದರು, ಏನೆಲ್ಲಾ ತಿಂದರು, ಅದು ಮುಂದೆ ಏನೆಲ್ಲಾ ಆಗುತ್ತಾ ಇದೆ ಎಂಬ ವಿಚಾರ ನಮಗೆಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ನಾನು ಉಲ್ಲೇಖ ಮಾಡಲು ಹೋಗುವುದಿಲ್ಲ. ಆದರೆ ಬರದ ವಿಚಾರದಲ್ಲಿ ದಯವಿಟ್ಟು, ಕೂಲಿಗಾಗಿ ಕಾಳಿನ ಯೋಜನೆ ಇರಬಹುದು, ಬೇರೆ ಯಾವುದೇ ರೀತಿಯ ಕಾಮಗಾರಿಗಳು ಇರಬಹುದು, ಆ ವಿಚಾರದಲ್ಲಿ ಲೋಕಾಯುಕ್ತದ ತಪಶೀಲಿನ ವರೆಗೆ ಹೋಗುವುದು ಸೂಕ್ತವಲ್ಲ. ಅಲ್ಲಿ ಯಾರು ಜವಾಬ್ದಾರಿಯುತ ಉಸ್ತುವಾರಿ ಮಂತ್ರಿಗಳು ಇದ್ದಾರೋ ಅವರು

ಇವುಗಳನ್ನು ನೋಡಿಕೊಳ್ಳಬೇಕು. ಸರಕಾರ ಅವರಿಗೆ ಜವಾಬ್ದಾರಿಯನ್ನು ಕೊಟ್ಟ ಮೇಲೆ ಆ ಕೆಲಸವನ್ನು ಮಾಡದಿದ್ದರೆ ಅವರು ಅಲ್ಲೇಕೆ ಇರುವುದು? ವಾರಕ್ಕೊಮ್ಮೆ ಸದರಿ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಕರೆಸಿ, ವಾರಕ್ಕೊಮ್ಮೆ ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳನ್ನು ಕರೆಸಿ, ವಾರಕ್ಕೊಮ್ಮೆ ಅವರನ್ನೆಲ್ಲಾ ಕರೆಸಿ ಅಲ್ಲಿ ಏನೆಲ್ಲಾ ನಡೆದಿದೆ ಎಂಬುದನ್ನು ನೋಡಿ. ಕನಿಷ್ಟ ಜೂನ್‌ವರೆಗೆ ಎಲ್ಲಾ ಕಡೆಗಳಲ್ಲಿಯೂ ಇಂಥ ಅವ್ಯವಹಾರಗಳು ನಡೆಯುತ್ತಿರುವುದನ್ನು ಪರಿಶೀಲಿಸಿ ಅವುಗಳನ್ನು ನಿಲ್ಲಿಸುವಂಥ ಕೆಲಸವನ್ನು ಮಾಡಿ. ಹೀಗೆ ನೀವು ಮಾಡದೇ ಇರುವುದರಿಂದಾಗಿ ಕರ್ನಾಟಕ ರಾಜ್ಯವು ಬರಪರಿಹಾರದ ವಿಚಾರದಲ್ಲಿ ಸಂಪೂರ್ಣ ವಿಫಲವಾಗುವಂತಾಯಿತು. ನಿಮ್ಮ ಜವಾಬ್ದಾರಿಯಿಂದ ನೀವೇ ನುಣುಚಿಕೊಳ್ಳ ಬೇಡಿ. ಅದನ್ನು ಬಿಟ್ಟು ಲೋಕಾಯುಕ್ತದವರ ವರದಿ ಬರಲಿಲ್ಲ ಎಂದು ಹೇಳುತ್ತಿದ್ದೀರಿ. ಇದೇನಾ ನೀವು ಜನರಿಗೆ ಒಳ್ಳೆಯ ಆಡಳಿತವನ್ನು ಕೊಡುವ ರೀತಿ? ನಿಮ್ಮ ಜನರ ಕುರಿತಾದ ಚಿಂತನೆಯು ಇದೇನಾ? ಹೀಗೆ ಆಗಬಾರದು. ನಿಮ್ಮ ಜವಾಬ್ದಾರಿಯನ್ನು ನೋಡಿಕೊಳ್ಳಿ. ವಾರಕ್ಕೊಮ್ಮೆ ನಿಮ್ಮ ಅಧಿಕಾರಿಗಳನ್ನು ಕರೆಸಿ, ಎಷ್ಟು ಹಣ ಬಂದಿದೆ? ಎಷ್ಟು ಬಿಡುಗಡೆಯಾಗಿದೆ? ಅದರಲ್ಲಿ ಖರ್ಚು ಆದುದು ಎಷ್ಟು? ಹಾಗೆ ಖರ್ಚು ಆಗದಿರುವುದಕ್ಕೆ ಕಾರಣವೇನು? ಯಾವ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸಿದ್ದಾರೆ? ಎಂಬಿತ್ಯಾದಿಗಳನ್ನು ನೋಡಿಕೊಳ್ಳುವುದರ ಮುಖಾಂತರ, ಕೇಂದ್ರದಿಂದ ಬಿಡುಗಡೆಯಾದ ಹಣವನ್ನು ಸದ್ವಿನಿಯೋಗ ಮಾಡಿ, ನೀವು ಕೊಡುವಂಥಾದ್ದನ್ನು ಕೊಟ್ಟುಬಿಡಿ. ಬೇರೆ ಸಂಬಳ ಕೊಡಲು, ಮುಂತಾದವುಗಳಿಗೆ ದುಡ್ಡು ಇಲ್ಲದಿದ್ದರೆ ತೊಂದರೆಯಿಲ್ಲ. ಬದುಕಲು ಜನರಿಗೆ ಕುಡಿಯುವ ನೀರು ಕೊಡಲು ಮತ್ತಿತರ ಅವಶ್ಯಕತೆಗಳನ್ನು ದಯಮಾಡಿ ಕೊಟ್ಟುಬಿಡಿ. ಅದರ ಬಗ್ಗೆ ಚಿಂತನೆ ಮಾಡುವಂಥ ಕೆಲಸಕಾರ್ಯಗಳನ್ನು ಮಾಡಬಾರದು. ನಾವು ತಪ್ಪುಗಳು ಆದಾಗ ಒಪ್ಪಿಕೊಳ್ಳಬೇಕು. ಲೋಕಾಯುಕ್ತರ ಧಾಳಿಯಾಗಿದೆ, ಆ ಕುರಿತು ವರದಿಯು ನಮಗೆ ಬರಲಿ, ವರದಿಯು ಬಂದಮೇಲೆ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿಕೊಳ್ಳುವಂಥ ಮಾತು ಖಂಡಿತವಾಗಿಯೂ ಈ ಬರದ ಛಾಯೇ ಇರುವಾಗ ಕರ್ನಾಟಕದ ಜನರಿಗೆ ನಾವು ಹೇಳುವಂಥ ಮಾತುಗಳು ಆಗಿರಬಾರದು ಎನ್ನುವಂಥ ನನ್ನ ಮನಸ್ಸಿನ ನೋವನ್ನು ಮಾತ್ರ ತಮ್ಮಲ್ಲಿ ಹೇಳಿಕೊಳ್ಳುತ್ತೇನೆ. ಇದಕ್ಕಿಂತಲೂ ಹೆಚ್ಚು ಏನನ್ನೂ ಹೇಳಲು ನಾನು ಇಚ್ಛೆಪಡುವುದಿಲ್ಲ. ಇವೊತ್ತು ಕಾಳಸಂತೆಯಲ್ಲಿ ಮಾರಾಟವಾಗಿರುವಂಥಾದ್ದರ ಬಗ್ಗೆ ವಿವರಗಳು ಪತ್ರಿಕೆಗಳಲ್ಲಿ ಬಂದಿವೆ. ಇದು ಏಕೆ ಬಂತು? ಕಾಳಸಂತೆಯಲ್ಲಿ ಈ ಅಕ್ಕಿ ಹೋಗಲು ಕಾರಣ ಏನು? ಇದು ಎಲ್ಲಿಂದ ಹೋಯಿತು? ಇದನ್ನು ಯಾರಾದರೂ ನೋಡಿದ್ದೀರಾ? ಯಾರಾದರೂ ಇದನ್ನು ಕೇಳುವಂಥ ಪ್ರಯತ್ನಗಳನ್ನು ಮಾಡಿದ್ದೀರಾ? ಕಾಳಸಂತೆಯಲ್ಲಿ ಕೂಲಿಗಾಗಿ ಕಾಳು ಯೋಜನೆಯ ಅಕ್ಕಿ ಮಾರಾಟವಾಗುವಂಥಾದ್ದು, ಮುಂತಾಗಿ ಇರುವಾಗ ಅವುಗಳನ್ನು ನೀವು ಕೇಳಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಕೇಂದ್ರದ ಯೋಜನೆಯ ಅಕ್ಕಿ-ಕಾಳುಗಳು ಕಾಳಸಂತೆಯಲ್ಲಿ ಹೋಗಿದ್ದೆ ಮಂತ್ರಿಗಳು ಏನು ಮಾಡಿದ್ದಾರೆ? ಯಾರು ಏನು ಮಾಡಿದ್ದಾರೆ ಎಂದು ಕೇಳಿದರೆ ಏನಿದು? ಕೇಂದ್ರ ಸರಕಾರ ಕೊಟ್ಟಿದೆ, ಅದು ಕಾಳಸಂತೆಯಲ್ಲಿ ಹೋಗಿದೆ ಎಂದೆಲ್ಲಾ ಹೇಳುತ್ತಿದ್ದೀರಿ. ಕೇಂದ್ರ ಸರಕಾರವೇನೂ ಭಗವಂತನ ಅಪರಾವತಾರವಲ್ಲ. ಕೇಂದ್ರ ಸರಕಾರದವರು ನಮಗೆ ನ್ಯಾಯವಾಗಿ ಕೊಡಬೇಕಾದುದ್ದನ್ನು ಕೊಡುತ್ತದೆ. ರಾಜ್ಯ ಸರಕಾರಕ್ಕೆ ನೀವೇನು ಭಿಕ್ಷೆ ಕೊಟ್ಟಿದ್ದೀರಾ? ಕೇಂದ್ರ ಸರಕಾರ ಕೊಟ್ಟಿದ್ದು, ಕೇಂದ್ರಸರಕಾರ ಕೊಟ್ಟಿದ್ದು ...

ಎಂದು ಪದೇ ಪದೇ ಹೇಳುತ್ತಾ ಇದ್ದೀರಿ. ಅವರು ನಮಗೆ ಭಿಕ್ಷೆ ಏನೂ ಕೊಟ್ಟಿಲ್ಲ. ಅವರು ಕೊಟ್ಟಿದ್ದಾರೆ, ಅದನ್ನು ಹೇಗೆ ಯುಟಿಲೈಸೇಶನ್ ಮಾಡಿದ್ದಾರೆ ಎಂಬ ಬಗ್ಗೆ ಬೇಕಾದರೆ ಕೇಳಿ. ಅದಕ್ಕೆ ಬೇಕಾದಂಥ ಮಾಹಿತಿಗಳನ್ನು ಒದಗಿಸತಕ್ಕಂಥಾದ್ದು ಸರಕಾರದ ಜವಾಬ್ದಾರಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ, ಜೇವರ್ಗಿ, ಹಾವೇರಿಗಳಲ್ಲಿ ಆಗಿದ್ದ ಅವ್ಯವಹಾರಗಳನ್ನು ಸ್ಪೆಸಿಫಿಕ್ ಆಗಿ ಹೇಳಿದ್ದೇವೆ. ಎಷ್ಟು ಜನರ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದೀರಿ? ಅದನ್ನು ಹೇಳಿ.

ಶ್ರೀ ಡಿಬಿ. ಚಂದ್ರೇಗೌಡ : ಸ್ಪೆಸಿಫಿಕ್ ಇನ್ ಸ್ಟನ್ಸ್ ಕೊಟ್ಟು ಕೇಳಿ.

ಶ್ರೀ ಎ. ರಾಮದಾಸ್ : ನಮಗೆ ಈ ಪ್ರಕರಣಗಳ ಕುರಿತಾದ ಉದ್ದೇಶ ಇಷ್ಟೇ. ಕೂಲಿಗಾಗಿ ಕಾಳು ಯೋಜನೆಯಲ್ಲಿ ಬಂದಂಥ ಹಣ ಯಾರು ತುಂಬಾ ಕಷ್ಟದಲ್ಲಿದ್ದಾರೋ ಅವರಿಗೆ ತಲುಪಬೇಕೆಂಬ ಉದ್ದೇಶವು ಈ ಸದನದ ಎಲ್ಲರಲ್ಲಿಯೂ ಇರುವಂಥಾದ್ದು. ನಮಗೆ ಗೋಚರವಾಗಿರುವ ಒಂದೆರಡು ಪ್ರಕರಣಗಳು ಇರಬಹುದು. ಇಂಥ ಪ್ರಕರಣಗಳನ್ನು ತಡೆಯುವ ಕೆಲಸಗಳು ಸರಕಾರದಿಂದ ಆಗಬೇಕೆಂದು ನಮ್ಮೆಲ್ಲರ ಅಪೇಕ್ಷೆ. ಮೈಸೂರು ಜಿಲ್ಲೆಗೆ ಈ ಯೋಜನೆಯಡಿಯಲ್ಲಿ ಬಂದಂಥ ಒಂದು ಆಹಾರ. ಪಡಿತರವನ್ನು ಎತ್ತಲು ಸುಮಾರು ಒಂದು ತಿಂಗಳ ಡಿಲೇ ಆಯಿತು. ಅದೆಲ್ಲವನ್ನೂ ರಿವ್ಯೂ ಮೀಟಿಂಗ್‌ನಲ್ಲಿ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಚಾಮರಾಜನಗರ, ಮತ್ತು ಮೈಸೂರಿನಲ್ಲಿ ರಿವ್ಯೂ ಆಯಿತು. ಇದಕ್ಕೆ ಸಂಬಂಧಪಟ್ಟ ಹಾಗೆ ಮೈಸೂರು ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ವಿಶೇಷವಾಗಿ ಬಂದಂಥ ಕಾಳುಗಳನ್ನು ವಿತರಣೆ ಮಾಡಲು ಆಗದೆ ಬೇರೆ ಬೇರೆ ಗೋಡೌನ್‌ಗಳಲ್ಲಿ ಉಳಿದಿತ್ತು. ಅನಂತರದಲ್ಲಿ ಆ ಕಾಳುಗಳನ್ನು ವಿತರಣೆ ಮಾಡಲು ಆಗಲಿಲ್ಲವೆಂದು ಹೇಳಿ, ಆ ಪದಾರ್ಥಗಳನ್ನು ರೈಸ್‌ಮಿಲ್‌ನಲ್ಲಿ, ನಂಜನಗೂಡು ತಾಲ್ಲೂಕಿನ ರೈಸ್‌ಮಿಲ್‌ಗಳಲ್ಲಿ ಅದನ್ನು ಸೀಜ್ ಮಾಡಲಾಯಿತು. ಅಲ್ಲಿನ ಅಂಗಡಿಗಳಲ್ಲಿ ಸೀಜ್ ಮಾಡಲಾಯಿತು. ಸೀಜ್ ಮಾಡಿದ ನಂತರದಲ್ಲಿ ಅದನ್ನು ಎನ್‌ಕ್ವಾಯರಿ ಮಾಡಿತು. ಅದನ್ನು ರೈಸ್ ಮಿಲ್‌ಗೆ ಕೊಟ್ಟವರು ಯಾರು? ಅಂಗಡಿಗಳಿಗೆ ಕೊಟ್ಟವರು ಯಾರು ಎಂಬ ಬಗ್ಗೆ ಎನ್‌ಕ್ವಾಯರಿಗಳು ಆಯಿತು. ಎನ್‌ಕ್ವಾಯರಿ ಆಗಲಿಲ್ಲವೆಂದು ನಾನು ಹೇಳುವುದಿಲ್ಲ. ನಿಮ್ಮ ಡಿಪಾರ್ಟ್‌ಮೆಂಟ್‌ಗಳೇ, ಸರಕಾರವೇ ಎನ್‌ಕ್ವಾಯರಿ ಮಾಡಿತು. ಎನ್ ಕ್ವಾಯರಿ ಮಾಡಿ ಸಂಬಂಧಪಟ್ಟವರು ಯಾರು ಈ ಒಂದು ಕೂಲಿಗಾಗಿ ಕಾಳು ಯೋಜನೆಯಲ್ಲಿ ಬಂದಂಥ ಈ ಪದಾರ್ಥಗಳನ್ನು ವಿಲೇ ಮಾಡಿದವರು ಯಾರು ಎಂಬ ಚರ್ಚೆಯೂ ಆಯಿತು. ಕೂಲಂಕಷವಾದ ಚರ್ಚೆಯು ಆದಂಥ ಸಂದರ್ಭದಲ್ಲಿ ಅದನ್ನು ನಾನು ಹೇಳಿದರೆ ಗಲಾಟೆಯಾಗುತ್ತದೆ. ಹೆಸರು ಹೇಳಬೇಕೆಂದು ಕೇಳುತ್ತೀರಿ. ಆವಾಗ ಒಬ್ಬ ಅಧಿಕಾರಿಯನ್ನು ಯಾರು ಎಂದು ಪಾಯಿಂಟ್‌ಔಟ್ ಮಾಡಿದರು. ಅವರು ಎಷ್ಟನ್ನು ಮಾರಿದ್ದಾರೆ? ಅವರ ಕಸ್ಟಡಿಗೆ ಬಂದಂಥ ಸುಮಾರು 50 ಟನ್‌ಗಳಷ್ಟು ಆಹಾರ ಪದಾರ್ಥಗಳು ಏನಾಯಿತು ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಇವೆಲ್ಲದರ ಬಗ್ಗೆ ತನಿಖೆಯಾಗುವಾಗ, ಅಧಿಕಾರಿಯನ್ನು ಪ್ರಶ್ನಿಸಿದಾಗ ಅವನು ಒಂದು ಮಾತನ್ನು ಹೇಳಿದ. ಅದು ಆತ ತನ್ನ ರಕ್ಷಣೆಗೆ ಹೇಳಿರಬಹುದು. ಅದು ನಿಜ ಅಲ್ಲ... ಅದು ಪತ್ರಿಕೆಗಳಲ್ಲಿ ಬಂತು.

ಶ್ರೀ ಎಂ. ಮಹದೇವ್ : ನೀವು ಮಾತನಾಡಬೇಕಾದರೆ ಸರಿಯಾಗಿ ಮಾತನಾಡಿ.

4.30 ಪಿಎಂ

ಲೋಕಾಯುಕ್ತಕ್ಕೆ ತನಿಖೆಗಾಗಿ ಕೊಟ್ಟಿದೆ. ಸಂಪೂರ್ಣವಾದ ವರದಿ ತೆಗೆದುಕೊಳ್ಳಿ. ಯಾರೇ ಅಧಿಕಾರಿ ತಪ್ಪು ಮಾಡಿರಲಿ ಅವನನ್ನು ಸಸ್ಪೆಂಡ್ ಮಾಡುವುದಲ್ಲದೆ ಕ್ರಿಮಿನಲ್ ಕೇಸನ್ನೂ

ಹಾಕಿ ಎಂದು ಹೇಳಿದ್ದೇವೆ. ನಾವೇ ಕರೆಸಿ ಹೇಳಿದ್ದೇವೆ. ಶಾಸಕರಿಗೆ ಸಂಬಂಧ ಇದೆ, ಅವರು ಮಾಡು ಎಂದು ಹೇಳಿದರು ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ? ಇದನ್ನು ನೀವು ಸಾಬೀತು ಪಡಿಸಿದರೆ ನಾನು ರಾಜಕೀಯದಿಂದ ನಿವೃತ್ತನಾಗುತ್ತೇನೆ, ನೀವೂ ನಿವೃತ್ತರಾಗುತ್ತೀರೇನು? ಮಾತನಾಡಬೇಕಾದರೆ ಜವಾಬ್ದಾರಿಯಿಂದ ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಬೆಧರಿಕೆ ಹಾಕುತ್ತಿದ್ದಾರೆ. ನೀವು ಅವರಿಗೆ ಹೇಳಬೇಕು. ಶಾಸಕರಿಗೆ ಮಾತನಾಡುವ ಹಕ್ಕು ಇದೆ. ಮಂತ್ರಿಗಳು ಬೆದರಿಕೆ ಹಾಕುತ್ತಿದ್ದಾರೆ. ಕಡತದಿಂದ ಆ ರೀತಿಯ ಪದಗಳನ್ನು ತೆಗೆಸಿಹಾಕಬೇಕು. ಬೆದರಿಕೆ ಹಾಕುವಂಥಾದ್ದು ಸರಿಯಾಗುವುದಿಲ್ಲ.

ಶ್ರೀ ಎಂ. ಮಹಾದೇವ್ : ತಪ್ಪು ಮಾಡಿದ್ದಾರೆ ಇಂಥವರು ಎಂದು ಹೇಳಿ, ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ಜರುಗಿಸುತ್ತೇವೆ. ನೀವು ಮಾತನಾಡುವಾಗ ಸರಿಯಾಗಿ ಮಾತನಾಡಬೇಕು.

ಶ್ರೀ ಎ. ರಾಮದಾಸ್ : ಸಾರ್ ನಾನು ಯೀಲ್ಡ್ ಆಗಿಲ್ಲ. ನಾನು ಹೇಳುವುದು....

ಉಪಾಧ್ಯಕ್ಷರು : ರಾಮದಾಸ್‌ರವರೇ, ನೀವು ಏನು ಹೇಳುತ್ತೀದ್ದಿರಿ ಅದು ಬೇಸ್ ಲೆಸ್. ನೀವು ವಿಷಯವನ್ನು ಹೇಳಬೇಕಾದರೆ ಕರೆಕ್ಟಾಗಿ ಸದನದಲ್ಲಿ ಮಂಡಿಸುವ ರೀತಿಯಲ್ಲಿ ಮಂಡಿಸಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಅವರು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದಾರೆ.

ಶ್ರೀ ಎಂ. ಮಹಾದೇವ್ : ಪತ್ರಿಕೆಯಲ್ಲಿ ಹಾಗೆ ವರದಿ ಆಗಿಲ್ಲ. ಇವರು ಸದನದಲ್ಲಿ ಬಂದು ಕೂತುಕೊಂಡು ಕಟ್ಟುಕಥೆ ಹೇಳುತ್ತಿದ್ದಾರೆ.

ಶ್ರೀ ಎ. ರಾಮದಾಸ್ : ಈ ವಿಚಾರವನ್ನು ಅವನು ಹೇಳಿದ ಮೇಲೆ...

ಶ್ರೀ ಎಂ. ಮಹಾದೇವ್ : ಏನೇ ಇರಲಿ ಅದನ್ನು ನೀವು ಪ್ರೂವ್ ಮಾಡುತ್ತೀರಾ?

ಶ್ರೀ ಎ. ರಾಮದಾಸ್ : ಉಪಾಧ್ಯಕ್ಷರೇ, ನಾನು ಮುಗಿಸುತ್ತೇನೆ. ಏನು ಎಂದು ಕೇಳಿದ ಮೇಲೆ ಕೊನೆಗೆ ಹೇಳಿದರೆ ಒಳ್ಳೆಯದು. ಪತ್ರಿಕೆಗಳಲ್ಲಿ ಅವರ ಹೇಳಿಕೆ ಬಂದ ನಂತರದಲ್ಲಿ ಮಾರನೇ ದಿವಸ ಆ ಕ್ಷೇತ್ರದ ಶಾಸಕರು ಮತ್ತೆ ಹೇಳಿದರು. ನನ್ನ ಮೇಲೆ ಅವನು ದೂರು ಹೇಳಿರುವುದು ಅಕ್ಷರಶಃ ಸುಳ್ಳು, ಅವನನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಈ ತರಹ ಹೇಳಿಕೆ ಕೊಟ್ಟಿದ್ದಾನೆ. ನನ್ನ ಬಗ್ಗೆ ಕೂಡ ತನಿಖೆಯಾಗಲಿ ಎಂದು ಹೇಳಿ ಆನಂತರ ಅವನನ್ನು ಸಸ್ಪೆಂಡ್ ಮಾಡಿದರು. ಇದು ಪತ್ರಿಕೆಗಳಲ್ಲಿ ಬಂದಂತಹ ವಿಚಾರ. ಆ ಅಧಿಕಾರಿ ಮಾಡಿದ ಅನ್ಯಾಯ ಏನಿದೆ ಅದು ಎಲ್ಲರ ಮೇಲೂ ದುಷ್ಪರಿಣಾಮ ಬೀರಬಾರದು. ಆ ದೃಷ್ಟಿಯಲ್ಲಿ ಇದಕ್ಕೆ ಸಂಬಂಧಪಟ್ಟ ಪ್ರಕರಣ ಏನಾಗಿದೆ ಅದಕ್ಕೆ ಸಂಬಂಧಪಟ್ಟ ತನಿಖೆ ಸದನದ ಮುಂದಿಟ್ಟಾಗ ಅವನ ಹೇಳಿದಂತಹ ಸುಳ್ಳಿನ ಮಾತುಗಳಿರಬಹುದು. ತನಿಖೆಯಲ್ಲಿ ಅಧಿಕಾರಿಗಳು ಕೊಟ್ಟ ವಿಚಾರಗಳೆಲ್ಲವೂ ದೂರ ಆಗುತ್ತದೆ ಎಂಬ ವಿಚಾರವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ, ನಾನೇನು ಆಪಾದನೆ ಮಾಡುತ್ತಿಲ್ಲ.

ಉಪಾಧ್ಯಕ್ಷರು : ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಪತ್ರಿಕೆಗಳಲ್ಲಿ ಬಂದಿದೆ ಅನ್ನುವುದು, ಯಾವುದೇ ಕ್ಯಾಬಿನೇಟ್ ಮಂತ್ರಿ ಅನ್ನುವುದಾಗಲಿ ಯಾವುದೋ ಕ್ಷೇತ್ರಕ್ಕೆ ಸೇರಿದ ಸದಸ್ಯರು ಅನ್ನುವುದಾಗಲಿ ಅವರು ಮೊದಲು ರಿಟನ್ ನೋಟಿಸ್ ಕೊಡಬೇಕು. ತಮ್ಮ ಅನುಮತಿ ಪಡೆದು ಪ್ರಸ್ತಾಪ ಮಾಡಬೇಕು. ಇರತಕ್ಕಂತಹ ವಾಡಿಕೆ ಮತ್ತು ಪದ್ಧತಿ. ಸತ್ಸಂಪ್ರದಾಯಗಳನ್ನು ಬಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎಂದು ಮೊದಲು ಹೇಳಿಬಿಡುವುದು ಆಮೇಲೆ ಪತ್ರಿಕೆಯಲ್ಲಿ ಬಂದಿದೆ ಎಂದು ಅದನ್ನು ಅಮೆಂಡ್ ಮಾಡಿಕೊಳ್ಳುವುದು. ಮೊದಲನೇ ಸ್ಟೇಟ್ ಮೆಂಟಿಗೆ ನಾನಿಲ್ಲದೇ ಇದ್ದರೆ ಅಬ್ಜೆಕ್ಷನ್ ತೆಗೆಯುತ್ತಲೇ ಇರಲಿಲ್ಲ. ಪ್ರಾರಂಭಕ್ಕೆ ಅವರು ಹೇಳಿದ್ದು ಒಬ್ಬ ಕ್ಯಾಬಿನೆಟ್ ಮಂತ್ರಿ ಎಂದು ಆಮೇಲೆ ಇಲ್ಲ ಪತ್ರಿಕೆಯಲ್ಲಿ ಬಂದಿತ್ತು ಎಂದು ಅದನ್ನು ತಿರುಚಿದರು, ಕಡತ ತೆಗೆಸಿ ನೋಡಿ. ಈಗ ಮತ್ತೊಂದು ಹೊಸದು, ಹಾಗೆ ಹೇಳಿದ್ದರು ಎಂದು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ : ಅವರು ಪತ್ರಿಕೆ ರೆಫರೆನ್ಸ್ ಮಾಡಿ ಮಾತನಾಡಿದ್ದಾರೆ. ನೀವು ದಾಖಲೆ ದಯವಿಟ್ಟು ತೆಗೆದುನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಒಂದು ರಾಷ್ಟ್ರೀಯ ಪಕ್ಷದ ಪ್ರತಿನಿಧಿ. ದಯಮಾಡಿ ಇದು ಶಾಸನಸಭೆಯ ಕಡತಗಳಲ್ಲಿ ಶಾಶ್ವತವಾಗಿ ಉಳಿಯುವಂಥವು. ತಮ್ಮಲ್ಲಾದರೂ ನಾನು ಮನವಿ ಮಾಡುತ್ತೇನೆ; ಕೆಲವು ನಿಯಮಗಳಂತೆ ನಡೆಸೋಣ.

ಶ್ರೀ ಜಗದೀಶ್ ಶೆಟ್ಟರ್ : ಪತ್ರಿಕೆಯನ್ನು ರೆಫರ್ ಮಾಡಿಕೊಂಡು ಹೇಳುತ್ತಿದ್ದಾರೆ ಅವರು, ನೀವು ಸ್ಪೆಸಿಫಿಕ್ ಉದಾಹರಣೆ ಕೊಡಿ ಅಂದರು, ಅದಕ್ಕೆ ಅವರು ಹೇಳುತ್ತಿದ್ದಾರೆ, ಆಮೇಲೆ ಅವರು ಏನು ಡಿನೈ ಮಾಡಿದರು ಅದನ್ನೂ ಹೇಳಿದರು, ಭಾಷಣವನ್ನು ಕಂಪ್ಲೀಟ್ ಮಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು : ನೀವು ಬರವಣಿಗೆಯಲ್ಲಿ ಕೊಟ್ಟರೆ ಏನು ತೊಂದರೆ?

ಶ್ರೀ ಜಗದೀಶ್ ಶೆಟ್ಟರ್ : ಅಲ್ಲ ಅಧ್ಯಕ್ಷರೇ ಅವರ ಮೇಲೆ ಅವರು ಅಲಿಗೇಶನ್ ಮಾಡಿಲ್ಲ. ಪತ್ರಿಕೆಯಲ್ಲಿ ಹೀಗೆ ಬಂದಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರಾದ ಮಹಾದೇವ್ ರವರ ಮೇಲೆ ಅಲಿಗೇಷನ್ ಮಾಡಿ ಅವರು ಇದರಲ್ಲಿ ಇನ್ ವಾಲ್ವ್ ಆಗಿದ್ದಾರೆ ಎಂದು ನೇರವಾಗಿ ಆಪಾದನೆ ಮಾಡಿದ್ದರೆ ನೋಟೀಸ್ ಕೊಡಬಹುದು.

ಗೊಂದಲ

ಶ್ರೀ ಎಂ. ಮಹದೇವ್ : ಸ್ವಾಮಿ ಶೆಟ್ಟರ್‌ರವರೇ, ನೀವು ನಾಯಕರಿರಬಹುದು. ಪತ್ರಿಕೆಂಯಲ್ಲಿ ಬಂದಿರುವ ವಸ್ತು ಸ್ಥಿತಿಯನ್ನಾದರೂ ಅವರು ಹೇಳಲಿ. ಅದನ್ನು ವಿಕೃತಗೊಳಿಸಿ ಅದರ ಮೇಲೆ ಏನೇನೋ ಕಟ್ಟುಕಥೆ ಹೇಳಿದರೆ ಹೇಗೆ? ಆ ರೀತಿ ಯಾವ ಪತ್ರಿಕೆಯಲ್ಲಿ ಬಂದಿದೆ ನೋಡೋಣ, ತೆಗೆಸಿರಿ. ಉಪಾಧ್ಯಕ್ಷರೇ, ನಾನು ಯಾವ ಸ್ಟೇಟ್‌ಮೆಂಟೂ ಕೊಟ್ಟಿಲ್ಲ. ಕೆಡಿಪಿ ಸಭೆಯಲ್ಲಿ ಒಂದು ಮಾತು ಹೇಳಿದ್ದೇನೆ. ಯಾರೇ ತಪ್ಪು ಮಾಡಿದ್ದರೂ ಅವರ ಮೇಲೆ ಕಠಿಣ ಕ್ರಮ ಜರುಗಿಸಿ ಲೋಕಾಯುಕ್ತಕ್ಕೆ ಅದನ್ನು ರೆಫರ್ ಮಾಡಿ-ಅಷ್ಟು ಮಾತ್ರ ಹೇಳಿದ್ದೇನೇ ಹೊರತು ಅವನು ವೈಯಕ್ತಿಕವಾಗಿ ನನಗೆ ಆಗುವುದಿಲ್ಲ ಆದ್ದರಿಂದ ಅವನನ್ನು ಹಾಗೆ ಮಾಡಿ ಹೀಗೆ ಮಾಡಿ ಅಂತ ಹೇಳಲಿಲ್ಲ. ಒಂದೇ ಸೆಂಟೆನ್ಸ್ ಪೇಪರ್‌ನಲ್ಲಿ ಬಂದಿರುವುದು. ಇವರು ಇಷ್ಟೆಲ್ಲಾ ಕಥೆ ಹೇಳಿದರಲ್ಲಾ ಅದು ಪೇಪರ್‌ನಲ್ಲಿ ಬಂದಿದೆ ಅನ್ನುವುದೆಲ್ಲಾ, ಕಂಪ್ಲೀಟ್ ಸುಳ್ಳು. ಇದು ನಮಗೂ

ಮರ್ಯಾದೆ ಪ್ರಶ್ನೆ. ಏಕೆಂದರೆ ಅವರು ಸದನದಲ್ಲಿ ವೈಯಕ್ತಿಕವಾಗಿ ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಕ್ಲಾರಿಫೈ ಮಾಡಲೇಬೇಕಾಗುತ್ತದೆ. ಈಗಲೂ ನಾನು ಸವಾಲು ಹಾಕುತ್ತಿದ್ದೇನೆ. ಸದನದಿಂದ ಒಂದು ಸಮಿತಿ ಮಾಡಲಿ ಅಥವಾ ಇನ್ನೇನಾದರೂ ಮಾಡಲಿ ಅಧ್ಯಕ್ಷರೇ ನಾನೇನಾದರೂ ಅದರಲ್ಲಿ ಡೈರೆಕ್ಟಾಗಿ ಅಥವಾ ಇನ್ ಡೈರೆಕ್ಟಾಗಿ ಇನ್‌ವಾಲ್ವಾಗಿದ್ದರೆ ನಾನು ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ರಾಜಕೀಯದಿಂದಲೇ ನಿವೃತ್ತನಾಗುತ್ತೇನೆ. ಆ ಕೆಲಸ ಅವರು ಮಾಡುತ್ತಾರಾ? ಇವತ್ತೂ ಒಪ್ಪಿಕೊಳ್ಳಲಿ, ಮಾಡಲಿ. ಈ ಘಳಿಗೆಯಿಂದ ನಾನು ನಿವೃತ್ತನಾಗುತ್ತೇನೆ. ಅವರು ಒಪ್ಪಿಕೊಳ್ಳಲಿ ಪ್ರೂವ್ ಮಾಡಲಿ, ಸದನದ ಸಮಿತಿಯನ್ನಾದರೂ ಮಾಡಲಿ ಲೋಕಾಯುಕ್ತ ಆದರೂ ಮಾಡಲಿ, ಸಿಓಡಿ ಸಿಬಿಐ ಆಗಲಿ, ಯಾವುದು ಬೇಕಾದರೂ ಆಗಲಿ, ಒಂದು ವಿಚಾರಣಾದರೂ ಪ್ರೂವ್ ಆಗಿಬಿಟ್ಟರೆ ನಾನು ಸಚಿವ ಸ್ಥಾನದಿಂದಲ್ಲ, ಶಾಸಕ ಸ್ಥಾನದಿಂದಲ್ಲ, ರಾಜಕೀಯದಿಂದಲೇ ನಾಳೆಯಿಂದಲೇ ನಿವೃತ್ತನಾಗುತ್ತೇನೆ ಆ ಚಾಲೆಂಜ್ ಅವರು ಒಪ್ಪಿಕೊಳ್ಳುತ್ತಾರಾ ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ಏತಕ್ಕಾಗಿ ಈ ರೀತಿ ಸವಾಲು ಹಾಕುತ್ತಾರೋ ಗೊತ್ತಾಗುವುದಿಲ್ಲ.

ಶ್ರೀ ಎಂ. ಮಹಾದೇವ್ : ಹೌದು ಬೇಕಾಬಿಟ್ಟಿ.. ಅವರು ಮಾತನಾಡಿಬಿಟ್ಟರೆ .. ಹೇಗೆ? ನಾನು ಗೌರವಸ್ಥ ಮನೆತನದಿಂದ ಬಂದವನು, ಮೂರು-ನಾಲ್ಕು ಸಲಚುನಾವಣೆಯಲ್ಲಿ ಕಂಟೆಸ್ಟ್ ಮಾಡಿ, ಬಂದಿದ್ದೇನೆ. ಇಲ್ಲಿರುವ ವಿರೋಧ ಪಕ್ಷದವರು ನನಗೆ ಬಹಳ ಮಿತ್ರರು, ಅಪ್ಪಿತಪ್ಪಿ ಯಾರು ಇವತ್ತಿನವರೆಗೂ ಒಂದು ಮಾತನಾಡಿಲ್ಲ.

ಶ್ರೀ ಎಂ. ಮಹಾದೇವ್ : ನಾವು ಮಾತನಾಡಬೇಕಾದರೆ ವೈಯಕ್ತಿಕವಾಗಿ ಮಾತನಾಡುವುದು ಬೇಡ. ಅವರು ಪೊಲಟಿಕಲ್ಲಾಗಿ ಬರಲಿ ನನಗೆ ಶಕ್ತಿ ಇದೆ ಎದುರಿಸಲು. ನನ್ನ ಮೇಲೆ ಬೇರೆ ತರಹ ಮಾಡಲಿ. ಈ ಲುಚ್ಛಾ ಕೆಲಸಕ್ಕೆ ನಾನು ಹೋಗುವುದಿಲ್ಲ.

ಶ್ರೀ ಎ. ರಾಮದಾಸ್ : ನಾನು ಹೇಳಿರುವುದು ಅವರ ಪ್ರಿವಿಲೇಜ್‌ಗೆ ಧಕ್ಕೆ ತಂದಿದ್ದರೆ ನನ್ನ ವಿರುದ್ಧ ಪ್ರಿವಿಲೇಜ್ ಮೂವ್ ಮಾಡಲಿ, ನಾನು ಸಂಬಂಧಪಟ್ಟಿದ್ದನ್ನು ಕೊಡುತ್ತೇನೆ, ನಾನು ವೈಯಕ್ತಿಕವಾಗಿ ಅವರ ವಿರುದ್ಧ ಹೇಳಿದ್ದೇನೆ ಅಂದರೆ ಪ್ರಿವಿಲೇಜ್ ಮೂವ್ ಮಾಡಬಹುದು, ಕೊಡುತ್ತೇನೆ ಡಾಕ್ಯುಮೆಂಟ್ಸ್.

ಶ್ರೀ ಎಂ. ಮಹಾದೇವ್ : ಇಷ್ಟು ಹೊತ್ತೂ ನೀವು ಹೇಳಿದ್ದು ಇನ್ನೇನು?

ಉಪಾಧ್ಯಕ್ಷರು : ರಾಮದಾಸ್ ಅವರೇ, ಇನ್ನು ಮುಂದೆ ಪತ್ರಿಕೆಯಲ್ಲಿ ಬಂದದ್ದೇ ನಿಜ ಎಂದು ತಿಳಿದುಕೊಂಡು ತಾವು ವಾದ ಮಾಡುವುದಕ್ಕಿಂತ ಸ್ಪೆಸಿಫಿಕ್ಕಾಗಿ ನೀವು ನೋಟಿಸ್ ನಮಗೆ ಕೊಡಬೇಕು. ರೈಟಿಂಗ್‌ನಲ್ಲಿ ಕೊಡಬೇಕು. ಆಗ ಅದಕ್ಕೆ ತಮಗೆ ಮಾತನಾಡಲು ಅವಕಾಶ ಕೊಡುತ್ತೇವೆ. ಇಲ್ಲದ್ದಿದ್ದರೆ ಮಾತನಾಡಲು ಅವಕಾಶ ಕೊಡುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಇದುವರೆಗೆ ರಾಮನೇ ಗತಿ ಅಂತಿದ್ದರು. ಇನ್ನು ಮುಂದೆ ರಾಮದಾಸನೇ ಗತಿ ಅವರಿಗೆ.

ಶ್ರೀ ಡಿ.ವಿ. ಸದಾನಂದ ಗೌಡ : ಯಾವತ್ತಾದರೂ ಅಂತಹ ದಿವಸ ನಿಮಗೆಲ್ಲಾ ಬರಲಿ. ಅಂಥವರೇ ಸರಿ ನಿಮಗೆ. ಮಾನ್ಯ ಉಪಾಧ್ಯಕ್ಷರೇ ಇವರು ಇಷ್ಟೆಲ್ಲಾ ಮಾತನಾಡಿದರಲ್ಲಾ

ನಾನು ಒಂದು ಪ್ರಶ್ನೆ ಆಚೆ ಭಾಗದಲ್ಲಿ ಕೂತವರಿಗೆ ಕೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಶ್ರೀ ಅಭಯಚಂದ್ರರೇ, ನಿಮ್ಮೂರಿನ ಬಗ್ಗೆ ಅಲ್ಲ. ನಿಮ್ಮ ಮುಖ್ಯಮಂತ್ರಿಗಳ ಊರಿನ ಬಗ್ಗೆ. ಸನ್ಮಾನ್ಯ ಎಸ್ ಎಂ ಕೃಷ್ಣರ ಊರಿನಲ್ಲಿ ಒಟ್ಟು ಬಿಡುಗಡೆಯಾದ ಆಹಾರಧಾನ್ಯ ಎಷ್ಟು? ಮಂಡ್ಯ ಜಿಲ್ಲೆಗೆ ಎಂಬುದನ್ನು ನಮಗೆ ತಿಳಿಸಬೇಕು. ತಿಳಿಸಲೇಬೇಕು. ತಿಳಿಸಲಿಲ್ಲವೆಂದರೆ ನಾವು ನಿಮ್ಮನ್ನು ಬಿಡುತ್ತೇವಾ? ಬಿಡುವುದಿಲ್ಲ ಅಷ್ಟು ಸುಲಭದಲ್ಲಿ. ಜನಗಳಿಗೆ ಈ ರೀತಿ ಅನ್ಯಾಯ ಮಾಡಿದರೆ ನಿಮ್ಮನ್ನು ಯಾವತ್ತೂ ಬಿಡುವುದಿಲ್ಲ.

ಮಾನ್ಯ ಸದಸ್ಯರು : ಅನ್ಯಾಯ ಮಾಡಿರುವುದಕ್ಕೇ ಮೊನ್ನೆ ಹುಮ್ನಾಬಾದ್‌ನಲ್ಲಿ ಮತ ಕೊಟ್ಟಿರುವುದು.

ಗೊಂದಲ

ಉಪಾಧ್ಯಕ್ಷರು : ತಾವು ಯಾರನ್ನು ಕೇಳಬೇಕೋ ಅವರಿಗೆ ಕೇಳಿರಿ. ಸದಸ್ಯರಿಗೆ ಕೇಳಿದರೆ ಅವರೇನು ಉತ್ತರ ಕೊಡುತ್ತಾರೆ. ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿ. ನೀವು ಯಾವುದೋ ಸದಸ್ಯರನ್ನು ಕೇಳಿದರೆ ಉತ್ತರ ಹೇಗೆ ಕೊಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಕಂದಾಯ ಸಚಿವರು ಇದಕ್ಕೆ ಸಂಬಂಧವೇ ಇಲ್ಲ. ಅನ್ನುವ ರೀತಿ ಇದ್ದಾರೆ. ನಿಜವಾಗಲೂ ಸಂಬಂಧಪಟ್ಟ ಮಂತ್ರಿ ಅವರು ಸಾರ್, ಈಗಲೂ ಕೇಳುತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಉಪಾಧ್ಯಕ್ಷರೇ, ನಾನು ನೇರವಾಗಿ ಅವರನ್ನು ನೋಡುತ್ತಲೇ ಮಾತನಾಡುತ್ತಿದ್ದೆ ಅವರನ್ನು ನನ್ನನ್ನೂ ನೋಡುವುದಿಲ್ಲ, ಅವರಷ್ಟಕ್ಕೆ ಇದನ್ನು ಕೇಳುವುದೂ ಇಲ್ಲ, ಈಗ ನೋಡಿ ಅವರನ್ನು, ಈಗ ಕೂಡ ಕೇಳುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ದಯವಿಟ್ಟು ರೆವಿನ್ಯು ಸಚಿವರೆ ನಾವು ಹೇಳುತ್ತಿರುವುದನ್ನು ಕೇಳಿ ಎಂದು ಹೇಳಿ. ನೀವಾದರೂ ನಮ್ಮ ರಕ್ಷಣೆಗೆ ಬನ್ನಿ. ನಾವು ವಿರೋಧಪಕ್ಷದವರು ಮಾತನಾಡುವುದು ಯಾವುದಕ್ಕಾಗಿ?

ಶ್ರೀ ಕಾಗೋಡು ತಿಮ್ಮಪ್ಪ : ಅದೊಂದು ಬ್ರಹ್ಮಾಂಡ. ಎಲ್ಲಿ ಏನು ನಡೆದರೂ ಕೂಡ ಆಕರ್ಷಣೆ ಮಾಡುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ನಾವು ಗಮನವನ್ನು ಸೆಳೆಯಬೇಕಾದರೆ ಅಂಕುಶ ತರಬೇಕಾ?

ಉಪಾಧ್ಯಕ್ಷರು : ಮಾನ್ಯ ಕಂದಾಯ ಸಚಿವರೇ, ನಿಮ್ಮನ್ನು ಕೇಳುತ್ತಿದ್ದಾರೆ, ಸದಾನಂದಗೌಡರು ನಿಮ್ಮನ್ನು ಕೇಳುತ್ತಿದ್ದಾರೆ. ನಾವು ಎಷ್ಟೆಲ್ಲಾ ಮಾತನಾಡಿದರೂ ಸುಮ್ಮನೆ ಕುಳಿತಿದ್ದಾರಲ್ಲಾ, ತಮ್ಮ ಲೋಕದಲ್ಲಿಯೇ ಇದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ನಾನು ಎಲ್ಲೇ ಕುಳಿತರೂ ನಿಮ್ಮ ಶಬ್ದ ಕೇಳುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ನನಗೆ ಈಗ ತಕ್ಷಣ ಒಂದು ಉತ್ತರ ಬೇಕು. ನಾನು ಯಾವ ಜಿಲ್ಲೆಯ ಬಗ್ಗೆ ಮಾತನಾಡುತ್ತಿದ್ದೆ ಎಂದು ತಕ್ಷಣ ಒಂದು ಉತ್ತರ ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) : ಅವರು ಹೇಳಿದ್ದನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ತಾವು ಆಗಿನಿಂದಲೂ ಕೇಳುತ್ತಿದ್ದೀರಿ. ನಿಮಗೆ ನನ್ನ ಅಭಿನಂದನೆಗಳು. ಆದರೆ ಯಾರು ಕೇಳಬೇಕಾಗಿತ್ತೋ ಅವರು ಕೇಳುತ್ತಿರಲಿಲ್ಲ ಎಂದು ನನಗೆ ಸ್ವಲ್ಪ ಅಸಮಾಧಾನ.

ಶ್ರೀ ಅರಗ ಜ್ಞಾನೇಂದ್ರ : ಇದಕ್ಕಾಗಿಯೇ ರಾಜ್ಯ ಮಂತ್ರಿ, ಕ್ಯಾಬಿನೆಟ್ ಮಂತ್ರಿ ಎಂದು ಎಲ್ಲಾ ಇಲಾಖೆಗೂ ಮಾಡಿಬಿಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೇ, ನನಗೆ ತಿಳಿದಮಟ್ಟಿನ ಅಂಕಿಅಂಶಗಳ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಫೆಬ್ರವರಿ ಕೊನೆಯ ದಿನದವರೆಗೆ ಅಲ್ಲಿಗೆ ವಿತರಣೆ ಮಾಡಿದಂಥ ಅಲ್ಲಿ ಅನುಷ್ಠಾನ ಮಾಡಬೇಕಾದಂಥ ಕೇವಲ ಸುಮಾರು 30 ಪರ್ ಸೆಂಟ್ ಮಾತ್ರ ಇಷ್ಟರವರೆಗೆ ವಿನಿಯೋಗವಾಗಿದೆ ಎನ್ನುವ ಮಾತುಕತೆ ಕೇಳಿಬರುತ್ತಿರುವುದುಂಟು. ದಯವಿಟ್ಟು ಇದನ್ನು ವೆರಿಫೈ ಮಾಡಿ ಸದನಕ್ಕೆ ಹೇಳಬೇಕು. ಉಳಿದದ್ದು ಎಲ್ಲಿ ಹೋಗಿದೆ? ಕಾಳಸಂತೆಯಲ್ಲಿ ಮಾರಾಟವಾಗಿದೆಯೇ ಅಥವಾ ಬೇರೆ ಎಲ್ಲಿಗಾದರೂ ವ್ಯವಸ್ಥೆಗಳಾಗಿದ್ದಾವೆಯೇ ಅಥವಾ ಜನರಿಗೆ ಕೊಡಲಿಕ್ಕೆ ಉಂಟಾ ಇಲ್ಲವೇ? ಏಕೆ ಈ ರೀತಿ ಮಾಡುತ್ತಿದ್ದೀರಿ ನೀವು? ನನಗೆ ತಿಳಿದ ಅಂಕಿಅಂಶಗಳ ಪ್ರಕಾರ ಇವತ್ತು ಹಲವಾರು ಪತ್ರಿಕೆಗಳಲ್ಲಿ ನಾನು ಓದಿದ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಯಾರು ಮುಖ್ಯಮಂತ್ರಿಯವರು ಅವರ ಹೆಸರು ಹೇಳಿದರೆ ಅಧಿಕಾರಿಗಳು ನಡುಗಬೇಕಿತ್ತು, ಅಂಥ ಅಧಿಕಾರಿಗಳು ಆ ಭಾಗದಲ್ಲಿ ಕೇವಲ 30 ಪರ್‌ಸೆಂಟ್ ಕೂಲಿಗಾಗಿ ಕಾಳು ಧಾನ್ಯವನ್ನು ಇವತ್ತು ವಿನಿಯೋಗ ಮಾಡಿದ್ದಾರೆಂದು ಹೇಳಿದರೆ ಪ್ರಾಯಶಃ ಈ ಸರ್ಕಾರ ಇಲ್ಲಿ ಕುಳಿತುಕೊಳ್ಳುವುದಕ್ಕೆ ನಿಜವಾಗಿ ಅರ್ಹತೆ ಇಲ್ಲ. ಬರದ ಈ ಸಂದರ್ಭದಲ್ಲಿ ಕೂಡ ಕಾವೇರಿಯದ್ದು ಆಯಿತು ಅಲ್ಲಿ, ಅದರ ಪಕ್ಕದಲ್ಲಿ ವೀರಪ್ಪನದ್ದು ಆಯಿತು. ಈ ಬರ ಬರುವಂಥ ಈ ಸಂದರ್ಭದಲ್ಲಿ ಕೂಡ ಅಲ್ಲಿ ಕೇವಲ 30 ಪರ್ ಸೆಂಟ್ ಅಂತೆ ಸ್ವಾಮಿ ಚಂದ್ರೇಗೌಡರೇ? ಇಷ್ಟರವರೆಗೆ ವಿನಿಯೋಗವಾಗಿರುವುದು 30 ಪರ್‌ಸೆಂಟ್. ಪಾಸ್ ಮಾರ್ಕ್ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ಮತ್ತು ಸಚಿವರು) : ನೀವು ಹಾಗನ್ನುತ್ತೀರಿ. ನಾನು ಮುಖ್ಯಮಂತ್ರಿಗಳ ಕೈಯಲ್ಲಿ ನಿನ್ನೆ ಹೆಚ್ಚು ಅಕ್ಕಿ ಬಿಡುಗಡೆ ಮಾಡಿ, ನಮ್ಮ ಹತ್ತಿರ ದುಡ್ಡಿದೆ, ಮ್ಯಾಚಿಂಗ್ ಗ್ರಾಂಟ್ ಇದೆ, ಖರ್ಚು ಮಾಡಬೇಕೆಂದು ಬರೆಸಿಕೊಂಡು ಬಂದಿದ್ದೇನೆ. ನೀವು ಹೇಗೆ ಹೇಳುತ್ತೀರೋ ಅರ್ಥವಾಗುತ್ತಿಲ್ಲ. ಎಲ್ಲಾ ಜಿಲ್ಲೆಗಳಲ್ಲೂ ಆಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಇದರ ಬಗ್ಗೆ ದಯವಿಟ್ಟು ಸದನದ ಮುಂದೆ ಫೆಬ್ರವರಿ ಕೊನೆಯ ದಿನದವರೆಗಿನ ಅಂಕಿಅಂಶಗಳನ್ನು ಇಡಿ. ಮಾನ್ಯ ಮುಖ್ಯಮಂತ್ರಿಗಳ ತವರೂರಿನಲ್ಲಿ ಬರದ ಕಾಮಗಾರಿ ಇಂಥ ನಿಕೃಷ್ಟ ಪರಿಸ್ಥಿತಿಯಲ್ಲಿ ಆಗುತ್ತಿದೆ ಎಂದು ಹೇಳಿದರೆ ಉಳಿದ ಕರ್ನಾಟಕದ ಭಾಗದಲ್ಲಿ ಹೇಗೆ ಆಗಿರಬಹುದು ಎಂಬುದು ಆಲೋಚನೆ ಮಾಡಲಿಕ್ಕೆ ಸಾಧ್ಯ ಇಲ್ಲದಂಥ ಪರಿಸ್ಥಿತಿಗಳು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಕೆಲಸ ಪ್ರಾರಂಭವಾದುದು ನಿಧಾನ ಎನ್ನುವುದು ನಿಮಗೆ ಗೊತ್ತು ತಾನೇ ಕೇವಲ ಒಂದೂವರೆ ತಿಂಗಳು, ಎರಡು ತಿಂಗಳೂ ಏನೂ ಕೆಲಸ ಸಾಗಲೇ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಗಲಾಟೆ ಇದ್ದಕಾರಣ ಆಗಲಿಲ್ಲ. ನೀರಾವರಿ ಕಾರಣ ಇಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ಹಣವನ್ನು ಬಿಡುಗಡೆ ಮಾಡಿ ಕೂಲಿಗಾಗಿ ಕಾಳನ್ನು ಬಿಡುಗಡೆ ಮಾಡಿ ನಾನೇ ಪರಿಶೀಲನೆ ಮಾಡಿ ಬಂದಿದ್ದೇನೆ. ನಾಳೆ ನೀವೇ ಬನ್ನಿ ನನ್ನ ಜೊತೆ. ಮಂಡ್ಯಕ್ಕೆ ಹೋಗೋಣ. ಕೆಲಸ ಅಲ್ಲಿ ಎಷ್ಟರಮಟ್ಟಿಗೆ ನಡೆಯುತ್ತಿದೆ, ಎಷ್ಟು ಕೆಲಸ ಅಲ್ಲಿ ಪ್ರಾರಂಭವಾಗಿದೆ, ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ, ಅವನ್ನೆಲ್ಲಾ ನಾನು ಖುದ್ದು ತೋರಿಸುತ್ತೇನೆ. ಸುಮ್ಮನೆ ಭಾಷಣ ಮಾಡಿದರೆ ಏನು ಪ್ರಯೋಜನ?

ಶ್ರೀ ಡಿ.ವಿ. ಸದಾನಂದಗೌಡ : ಸದನಕ್ಕೆ ಆ ಅಂಕಿಅಂಶಗಳನ್ನು ಒದಗಿಸಿ. ನಾನು ತಿಳಿದುಕೊಂಡ ಮಾಹಿತಿ ಪ್ರಕಾರ ನಾನು ಪತ್ರಿಕೆಗಳಲ್ಲಿ ಓದಿದ ಪ್ರಕಾರ ಸದನಕ್ಕೆ ಆ ವಿಚಾರವನ್ನು ನಾನು ಮಂಡನೆ ಮಾಡುತ್ತಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಎಲ್ಲಾ ಶಾಸನಸಭಾ ಸದಸ್ಯರೂ ಎಂಎಲ್ ಸಿಗಳು ಎಲ್ಲರೂ ಕೂಡ ಆ ಸಭೆಯಲ್ಲಿ ಹಾಜರಿದ್ದರು. ಆ ಪರಿಶೀಲನೆ ಮಾಡಿದ ಸಭೆಯಲ್ಲಿ, ಕೆಲಸ ನಿಧಾನವಾಗಿದೆ. ಕೆಲಸ ಅಲ್ಲಿ ಪ್ರಾರಂಭವೇ ಆಗಿರಲಿಲ್ಲ. ಇತ್ತೀಚೆಗೆ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ. ಎಲ್ಲಾ ತಾಲ್ಲೂಕುಗಳಲ್ಲೂ ನಡೆಯುತ್ತಿದೆ. ಹೆಚ್ಚಿಗೆ ಹಣವನ್ನು ಸಹಾ ಬಿಡುಗಡೆ ಮಾಡಿದೆ. ಕಾಳನ್ನು ಬಿಡುಗಡೆ ಮಾಡಿದೆ.

ಉಪಾಧ್ಯಕ್ಷರು : ಮಾನ್ಯ ಸದಾನಂದಗೌಡರೇ, ಸಚಿವರು ಆಹ್ವಾನ ಮಾಡುತ್ತಿದ್ದಾರೆ. ನೀವು ಖುದ್ದಾಗಿ ನೋಡಬೇಕೆಂದರೆ ಕರೆದುಕೊಂಡು ಹೋಗುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೇ, ಉತ್ತರ ಕೊಡುವಾಗ ಅದನ್ನೆಲ್ಲಾ ಕೊಟ್ಟರೆ ಸಾಕು. ಮತ್ತೆ ನಾವು ಅದರಲ್ಲಿ ಕ್ಲಾರಿಫಿಕೇಷನನ್ನು ಕೇಳುತ್ತೇವೆ. ಕೂಲಿಗಾಗಿ ಕಾಳು ಬಗ್ಗೆ ಅಲ್ಲಲ್ಲಿ ನಡೆದ ಕಾಮಗಾರಿಗಳ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಕುಡಿಯುವ ನೀರಿನ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ? 500 ಲಕ್ಷ ರೂಪಾಯಿಗಳನ್ನು ನಗರಪ್ರದೇಶಕ್ಕೆ ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದಿರಿ. ಯಾವ ನಗರಕ್ಕೆ ಬಿಡುಗಡೆ ಮಾಡಿದ್ದೀರಿ? ಎಷ್ಟೆಷ್ಟು ಕಾಮಗಾರಿಗಳಾಗಿವೆ? ಯಾವ ಹಂತದಲ್ಲಿದೆ? ನನಗೆ ತಿಳಿದಮಟ್ಟಿಗೆ ಈಗಾಗಲೇ ಬೋರ್‌ವೆಲ್‌ಗಳನ್ನು ಕೊರೆಯತಕ್ಕ ವಿಚಾರದಲ್ಲಿ ಇನ್ನೂ ಕೂಡ ಯಾರು ಕೂಡ ಬೋರ್ ವೆಲ್ ಕೊರೆಯುವ ಬಗ್ಗೆಯೇ ಜಿಜ್ಞಾಸೆ ಇದೆ ಎಂದು ನಮ್ಮ ಗಮನಕ್ಕೆ ಬರುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ 900 ಲಕ್ಷ ರೂಪಾಯಿಗಳನ್ನು ವಿನಿಯೋಗ ಮಾಡಬೇಕೆನ್ನುವ ತೀರ್ಮಾನಗಳನ್ನು ಮಾಡಿದ್ದೀರಿ ಎಂದು ಹೇಳಿ ಪತ್ರಿಕೆಗಳಲ್ಲಿ ಬರುತ್ತಿದೆ. ಫೆಬ್ರವರಿ ಕೊನೆಯ ದಿನಾಂಕಕ್ಕೆ ಎಷ್ಟು ಬೋರ್‌ವೆಲ್‌ಗಳನ್ನು ಕೊರೆದಿದ್ದೀರಿ? ಯಾವ ಯಾವ ಜಿಲ್ಲೆಗಳಲ್ಲಿ ಯಾರ್‍ಯಾರು ಬೋರ್‌ವೆಲ್‌ಗಳನ್ನು ಕೊರೆಸಿದ್ದು? ಅದ್ದರಿಂದೇನಾದರೂ ಪ್ರಯೋಜನಗಳಾಗಿವೆಯೇ? ಈ ವಿಚಾರವನ್ನು ಸದನದಲ್ಲಿಡಿ. ನಿಷ್ಪಕ್ಷಪಾತವಾಗಿ ಈ ಕೆಲಸಕಾರ್ಯಗಳಾಗಬೇಕು. ಇದರಲ್ಲಿ ರಾಜಕೀಯವಾಗಿ ಯಾವುದೇ ಲಾಭಗಳನ್ನು ಪಡೆಯಬೇಕೆಂದು ಹೇಳಿ ಯಾವುದೇ ಇರಾದೆ ಈ ಭಾಗದಲ್ಲಿ ಕೂತಂಥ ನಮಗ್ಯಾರಿಗೂ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಬರದ ಕಾಮಗಾರಿಗಳು ಅತ್ಯಂತ ಯಶಸ್ವಿಯಾಗಿ ಆಗಬೇಕು, ನಿಮಗೆ ಇಲ್ಲ ಎಂಬುದು ನನಗೆ ಗೊತ್ತಿದೆ. ಏಕೆಂದರೆ ನಿಮ್ಮನ್ನು ಕೂರಿಸಿದ್ದೇ ಅಲ್ಲಿ ಇರಬಾರದು ಎಂದು ಹೇಳಿ. ಆದರೆ ಸ್ವಲ್ಪ ಸ್ವಲ್ಪ ಅಲ್ಲಲ್ಲಿ ಇದೆ. ಯಾರ್‍ಯಾರಿಗೋ ಯಾರ್‍ಯಾರೋ ಬೆನ್ನು ಮುಟ್ಟಿಕೊಂಡು ಅಲ್ಲಿ ಕುಂಬಳಕಾಯೋ ಇಲ್ಲಿ ಕುಂಬಳಕಾಯೇ ಎಂದು ನೋಡುತ್ತಿರುತ್ತಾರೆ. ಆದ ಕಾರಣ ನಾನು ಹೇಳುವಂಥದ್ದು. ಈ ಸಂಶಯದ ಕತ್ತಿ ಉಂಟಲ್ಲಾ, ನಿಮ್ಮ ತಲೆ ಮೇಲೆ ತೂಗುತ್ತಿದೆ.

ಅದ್ದಕಾಗಿಯೇ ಈ ವಿಚಾರವನ್ನು ನಾವು ಪ್ರಸ್ತಾಪ ಮಾಡುತ್ತೇವೆಯೇ ಹೊರತು ಬೇರೆ ವಿಚಾರಕ್ಕಲ್ಲ. ದಯವಿಟ್ಟು ಈ ಕಾಮಗಾರಿಗಳ ಬಗ್ಗೆ ಯಾವ ಹಂತದಲ್ಲಿ ನೀವು ಹೋಗಿದ್ದೀರಿ, ಆ ಸ್ಪೀಡ್ ಸಾಕಾಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬಹ್ಮಾವರ) : ಮಾನ್ಯ ಉಪಾಧ್ಯಕ್ಷರೇ, ನಮ್ಮ ಮೂರು ಜಿಲ್ಲೆಗಳು ಬರಪೀಡಿತ ಜಿಲ್ಲೆಗಳೆಂದು ಸರ್ಕಾರ ಡಿಕ್ಲೇರ್ ಮಾಡಿಲ್ಲ. ಏಕೆಂದರೆ ಅಲ್ಲಿ ಬರ ಇಲ್ಲ. ಆದರೆ ಕುಡಿಯುವ ನೀರಿನ ಸಮಸ್ಯೆ ಇದೆ. ನಮ್ಮಲ್ಲಿ ಈಗ ಮೂರು ಜನ ಉಸ್ತುವಾರಿ ಸಚಿವರುಗಳು ಇದ್ದಾರೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ, ಮಡಿಕೇರಿ. ಕೂಲಿಗಾಗಿ ಕಾಳು ಯೋಜನೆಯಲ್ಲಿ ಕಾಳು ಕೊಟ್ಟಿಲ್ಲ. ಶಾಸಕರ ನಿಧಿಯನ್ನು ಕೊಟ್ಟಿಲ್ಲ. ಇದನ್ನು ಯಾವ ರೀತಿ ಸರಿಪಡಿಸುತ್ತೀರಿ ಎಂಬುದನ್ನು ನೋಡಬೇಕು. ಏಕೆಂದರೆ ಉಸ್ತುವಾರಿ ಸಚಿವರುಗಳು ಇದರ ಬಗ್ಗೆ ಡಿ.ಸಿ.ಗಳಿಂದ ರಿಪೋರ್ಟ್ ತರಿಸಿ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುವುದು, ಹಣವನ್ನು ಕೊಡಿಸುವುದು ಏನೂ ವ್ಯವಸ್ಥೆ ಮಾಡಿಲ್ಲ. ನಮ್ಮ ಉಡುಪಿ ಜಿಲ್ಲೆಯಿಂದ ಡಿಸಿ ಅವರು 261 ಲಕ್ಷ ರೂಪಾಯಿಗಳಿಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದನ್ನು ಪತ್ರಿಕೆಯಲ್ಲಿ ಓದಿದ್ದೇವೆ. ಆದರೆ ಇದ್ಯಾವುದೂ ಆಗಿಲ್ಲ. ಅದೇ ಒಂದು ಆಲೋಚನೆ ಏನು ಬರುತ್ತಿದೆ ಎಂದರೆ the worst form of inequality is to try to make unequal things equal. ನಮ್ಮಲ್ಲಿ ಏನಾಗಿದೆ ಎಂದರೆ ಉತ್ತರ ಕರ್ನಾಟಕ ಹಿಂದುಳಿದಿದೆ ಎಂಬುದು ಗೊತ್ತಿದೆ. ಆದರೆ ಉಡುಪಿ ಮಂಗಳೂರನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾರೋ ಅಥವಾ ಅದನ್ನು ಇಲ್ಲಿಗೆ ತರುತ್ತಿದ್ದಾರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಇದ್ದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸ್ವಲ್ಪ ಸಹಕಾರವನ್ನು ಕೊಡಬೇಕಾಗುತ್ತದೆ. ಅದಕ್ಕೆ ಶಾಸಕರ ನಿಧಿಯನ್ನಾದರೂ ಕೊಡಿ. ಶಾಸಕ ನಿಧಿಯನ್ನೇ ಕೊಟ್ಟು ನಮ್ಮ ಹತ್ತಿರ ಅದಕ್ಕೆ ನಾವು ಕುಡಿಯುವ ನೀರಿಗೆ ವ್ಯವಸ್ಥೆಯನ್ನು ಮಾಡುತ್ತೇವೆ. ಇದನ್ನು ಸರಿಪಡಿಸದಿದ್ದರೆ ಪ್ರಾಯಶಃ ಸ್ವಲ್ಪ ತೊಂದರೆಯಾಗುತ್ತದೆ. ನಮ್ಮಲ್ಲಿ ಉಸ್ತುವಾರಿ ಸಚಿವರುಗಳು ಜವಾಬ್ದಾರಿ ತೆಗೆದುಕೊಳ್ಳದೆ ಇರುವುದರಿಂದ ಹೀಗೆಲ್ಲಾ ಆಗುತ್ತಿದೆ. ಸಭಾಪತಿಯವರು ಶಾಸಕರಿದ್ದಾರೆ, ಅಭಯಚಂದ್ರರವರು ಇದ್ದಾರೆ, ಇದು ಸದಾನಂದಗೌಡರಿಗೆ ಗೊತ್ತಿದೆ. ಸ್ವಲ್ಪ ಅದರ ಬಗ್ಗೆಯೂ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚು ಏನೂ ಹೇಳುವುದಕ್ಕೆ ಇಷ್ಟುಪಡುತ್ತಿಲ್ಲ. ಈಗ ಅಧಿವೇಶನ ಪ್ರಾರಂಭವಾಗಿದೆ. ಅಧಿವೇಶನದ ಪ್ರಾರಂಭಿಕ ಹಂತದಲ್ಲೇ ಬರದ ಬಗ್ಗೆ ಸಮಗ್ರವಾದ ಒಂದು ಚಿಂತನೆಗಳನ್ನು ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಈ ವಿಚಾರವನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಎಲ್ಲರೂ ಕೂಡ ಅತ್ಯಂತ ಮನಸ್ಸಿನ ನೋವಿನಿಂದ ಈ ಸರ್ಕಾರ ಬರದ ಕಾಮಗಾರಿಯ ಬಗ್ಗೆ ತೆಗೆದುಕೊಂಡಂಥ ಕೆಲಸಕಾರ್ಯಗಳು ಯಶಸ್ವಿಯಾಗಲಿಲ್ಲ, ಒಳ್ಳೆಯ ರೀತಿಯಲ್ಲಿ ಆಗಲಿಲ್ಲ ಎನ್ನುವಂಥ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ದಯವಿಟ್ಟು ಮುಂದಿನ ಎರಡು ಮೂರು ತಿಂಗಳು ಅತ್ಯಂತ ಗಂಭೀರ ಪರಿಸ್ಥಿತಿಯನ್ನು ಎದುರಿಸುವಂಥ ಹಂತದಲ್ಲಿ ನಾವಿದ್ದೇವೆ. ಆದಕಾರಣ ಸದನದ ಮುಂದೆ ಈ ಸರ್ಕಾರ ಇಷ್ಟರವರೆಗೆ ಮಾಡಿದಂಥ ಕೆಲಸಕಾರ್ಯಗಳೇನು ಎಂದು ಸದನದ ಮುಂದೆ ಇಡಿ. ಸ್ವಲ್ಪ ನಿಮ್ಮಿಂದ ತಪ್ಪಾಗಿದೆ ಎಂದು ಗೊತ್ತಿದ್ದರೂ ಕೂಡ ಸಾರ್ವಜನಿಕರ ಹಿತದೃಷ್ಟಿಯಿಂದ ಸಮಗ್ರ ಕರ್ನಾಟಕ ಜನತೆಯ ಹಿತದೃಷ್ಟಿಯಿಂದ

ಬರಪೀಡಿತ ಪ್ರದೇಶದಲ್ಲಿರುವಂಥ ಜನ ಮುಂದಿನ ದಿನಗಳಲ್ಲಾದರೂ ಒಳ್ಳೆಯ ರೀತಿಯಲ್ಲಿ ಬದುಕುವಂಥ ಹಿತದೃಷ್ಟಿಯಿಂದ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿ ಎಂದು ಹೇಳುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಸಿಂಧ್ಯಾಜಿಯವರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರೂ ಮಾತನಾಡಿದರು. ಆದರೆ ಇಲ್ಲಿಯವರೆಗೆ ಮಾತನಾಡಿದವರ ಪೈಕಿ ಗೋಶಾಲೆ ತೆಗೆಯುವ ವಿಚಾರದಲ್ಲಿ ಯಾರೂ ಮಾತನಾಡಿಲ್ಲ. ಗೋಶಾಲೆಗಳು ನಮ್ಮ ಉತ್ತರ ಕರ್ನಾಟಕದಲ್ಲಂತೂ ಅತೀ ಅವಶ್ಯಕ ಇದೆ. ಏಕೆಂದರೆ ನಾಲ್ಕು ವರ್ಷದಿಂದ ನಮ್ಮಲ್ಲಿ ಬರ ಇದೆ. ಅದರ ಬಗ್ಗೆ ನನ್ನ ರಿಕ್ವೆಸ್ಟ್ ಇದೆ. ನಾನು ಸಿಗ್ನೇಟರಿ ಇಲ್ಲ. ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಗೋಶಾಲೆ ತೆಗೆಯುವ ಬಗ್ಗೆ ಕೆಲಸ ಆಗಬೇಕು. ಧಾರವಾಡದಲ್ಲಿ ಒಂದು ಕಡೆಯಲ್ಲೇನೋ ಆಗಿದೆ. ಶಾಸಕರಾದ ಶ್ರೀ ಡಿ.ಆರ್. ಪಾಟೀಲರಿಗೆ ಅದು ಗೊತ್ತಿರಬಹುದು. ಅದೊಂದು ಬಿಟ್ಟರೆ ಮಿಕ್ಕಿದ್ದು ಈ ರಾಜ್ಯದಲ್ಲಿ ಎಲ್ಲೂ ಕೂಡ ಆಗಿಲ್ಲ. ಅದು ಒಂದು. ಎರಡನೆಯದು, ನಮ್ಮ ಶಾಸಕರ ಅನುದಾನವನ್ನು ತಾವು ಮುರಿದುಕೊಂಡಿದ್ದೀರಿ. 30 ಕೋಟಿ ರೂಪಾಯಿಗಳ ಅನುದಾನವನ್ನು ನಮ್ಮದು ಎಲ್ಲರದ್ದನ್ನೂ ತಾವು ಮುರಿದುಕೊಂಡಿದ್ದೀರಿ. ಅದನ್ನು ತಾವು ಎರಡು ಕಡೆ ಅಡ್ಜಸ್ಟ್ ಮಾಡುತ್ತೇನೆಂದು ಹೇಳಿದ್ದೀರಿ. ಇದು ಇಂಟರೆಸ್ಟ್ ಕಾಂಪ್ನೊನೆಂಟ್‌ಗೆ ಕೊಡುತ್ತೇವೆಂದು ಹೇಳಿದ್ದೀರಿ. 30 ಕೋಟಿ ರೂಪಾಯಿಗಳನ್ನು ನೀವು ಮುರಿದುಕೊಂಡಾಗಿದೆ. ಇದುವರೆಗೂ ಒಂದು ಬ್ಯಾಂಕಿಗೂ ನೀವು ಹಣವನ್ನು ಸಂದಾಯ ಮಾಡಿಲ್ಲ. ಈಗ ನೀವು ಮುರಿದಿರುವ ಹಣ ಡಿಸಿಸಿ ಬ್ಯಾಂಕಿಗೆ ರೀ-ಇನ್ ವೆಸ್ಟ್‌ಮೆಂಟಿಗೆ ಕೊಡಬೇಕಾಗಿತ್ತು. ಇದುವರೆಗೂ ಕೊಟ್ಟಿಲ್ಲ. ಅದನ್ನು ಯಾವಾಗ ಕೊಡುತ್ತೀರಿ ಎನ್ನುವುದನ್ನು ಕ್ಲಾರಿಫೈ ಮಾಡಬೇಕು. ಮತ್ತೆ ಮೂರನೆಯದು, ನಮ್ಮಲ್ಲಿ ಬೋರ್‌ವೆಲ್‌ಗಳನ್ನು ತೋಡಲಿಕ್ಕೆ ಹೊಸ ಹೊಸ ಬೋರ್‌ವೆಲ್‌ಗಳನ್ನು ಸ್ಕೇರ್ ಸಿಟಿ ಫಂಡ್‌ನಿಂದ ಕೊಡುವುದಕ್ಕಾಗುವುದಿಲ್ಲ. ಕೆಲಾಮಿಟಿ ರಿಲೀಫ್ ಫಂಡ್‌ನಲ್ಲೂ ಆಗುವುದಿಲ್ಲ. ಡಿಸಿ ಗಳು ಸ್ಪೆಸಿಫಿಕ್ ಆಗಿ ಹೇಳಿಬಿಡುತ್ತಾರೆ. ನಾವು ಹೊಸ ಬೋರ್‌ವೆಲ್ ಕೊರೆಯುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಾರೆ. ಅದ್ದಕೇನಾದರೂ ಕಾನೂನಿನ ಮಾರ್ಪಾಡು ಮಾನ್ಯ ರೆವಿನ್ಯೂ ಮಿನಿಸ್ಟರ್ ಮಾಡುತ್ತಾರಾ? ನೀನೇ ಅವರಿಗೆ ಕನ್‌ವಿನ್ಸ್ ಮಾಡಬೇಕು. ಏಕೆಂದರೆ ಯಾವ ಡಿಸಿಗೂ ನೀವು ನಮ್ಮಲ್ಲಿ ಈಗ ಈ ಬೋರ್‌ವೆಲ್‌ನಲ್ಲಿ ನೀರು ಹೋಗಿದೆ, ಹೊಸ ಬೋರ್‌ವೆಲ್ ಹೊಡೆಯಲು ಆದೇಶ ಕೊಡಿ ಎಂದರೆ ಕೆಲಾಮಿಟಿ ರಿಲೀಫ್ ಫಂಡ್‌ನಲ್ಲಿ ಪ್ರಾವಿಜನ್ ಇಲ್ಲ. ಡ್ರೌಟ್ ಫಂಡ್, ಸ್ಕೇರ್ಸಿಟಿ ಫಂಡ್‌ನಲ್ಲಿ ಏನಾದರೂ ಕೊಡುತ್ತೀರಾ ಎಂದರೆ ಅದರಲ್ಲೂ ಪ್ರಾವಿಷನ್ ಇಲ್ಲ. ದಯಮಾಡಿ ಈ ಮೂರು ಸ್ಪೆಸಿಫಿಕ್ ವಿಚಾರಕ್ಕೆ ಉತ್ತರ ಕೊಡಬೇಕು. ನೀವೇ ಅವರಿಗೆ ಇನ್‌ಸಿಸ್ಟ್ ಮಾಡಿ, ಮುಂದೆ ಯಾವಾಗ ಕೇಳುತ್ತಾರೋ ಗೊತ್ತಿಲ್ಲ ಸ್ವಲ್ಪ ನೀವಾದರೂ ಹೇಳಿದರೆ ಒಳ್ಳೆಯದು. ನೀವು ಆಗ ಸ್ವಲ್ಪ ನೋವಿನಿಂದ ಹೇಳಿದಿರಿ. ಈ ಸದನ ಎತ್ತೆತ್ತಲೋ ಹೊರಟಿದೆ ಎಂದು ಹೇಳಿದಿರಿ. ನಿಮಗೆ ಗೊತ್ತಿದೆ ಈ ಸದನದಲ್ಲಿ ನಿನ್ನೆ ಮೊನ್ನೆ ನಾವು ಒಂದು ಹೊಸ ಉತ್ತರ ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷಣೆ ಮಾಡಿರಲಿಲ್ಲ. ಯಾರೋ ಒಂದು ಕ್ಲಾರಿಫಿಕೇಶನ್ ಕೇಳಿದ್ದೆವು. ಅವರೇ ಹೇಳಿ ಬಿಟ್ಟರು. ಅವರೇ ನಿಮಗೆ ಉತ್ತರ ಕೊಡುತ್ತಾರೆ ನಾವೆಲ್ಲ ಎಂದು ಹೇಳಿದರು.

ಹಿಂದಿನವರೆಗೆ ಆ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಎಂದು ಪಾಸ್ ಆನ್ ಮಾಡಿದರು ಎಂಬುದು ನನಗಂತೂ ಗೊತ್ತಾಗಿಲ್ಲ.

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಮಾನ್ಯ ಉಪಾಧ್ಯಕ್ಷರೆ, ಈಗ ರಾಜ್ಯದಲ್ಲಿ ಬರಗಾಲ ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಸರ್ಕಾರ ಇವತ್ತು ಬರ ಪರಿಹಾರ ಕಾಮಗಾರಿಗೆ, ಕೇಂದ್ರ ಮತ್ತು ರಾಜ್ಯದ ಸಮನ್ವಯದಲ್ಲಿ ಕೂಲಿಗಾಗಿ ಕಾಳು ಮತ್ತು ಕೂಲಿ ಕೊಡುವಂತಹ ವಿಚಾರದಲ್ಲಿ ಇವತ್ತು ಹಳ್ಳಿಗಾಡಿನ ಜನರಿಗೆ ಕೆಲಸ ಇಲ್ಲದ ಕಡೆ ಕೆಲಸವನ್ನು ಕೊಡುವಂತಹ ವಿಚಾರದಲ್ಲಿ ಸಣ್ಣ ಕೆರೆಗಳ ಹೂಳನ್ನು ಎತ್ತುವಂತಹ ವಿಚಾರದಲ್ಲಿ, ಕುಡಿಯುವ ನೀರಿನ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಸುಮಾರು ಈಗಾಗಲೇ ಮೂರು ತಿಂಗಳಿಂದ ಕೆಲಸಗಳನ್ನು ಸರ್ಕಾರ ಶುರು ಮಾಡಿದೆ. ಆದರೆ ಇಲ್ಲಿ ಏನಾಗಿದೆ ಎಂದರೆ, ಈ ವಿಚಾರದ ಬಗ್ಗೆ ಮಾನ್ಯ ಸದಾನಂದ ಗೌಡರು ಶ್ರೀ ಸಿಂಧ್ಯ ಅವರು, ಜಗದೀಶ್ ಶೆಟ್ಟರ್ ಅವರುಗಳೆಲ್ಲಾ ನಿನ್ನೆ ಮೊನ್ನೆಯಲ್ಲಾ ಹೇಳಿದರು. ಬರಗಾಲದಲ್ಲಿ ಏನು ಇವತ್ತು ಜನರಿಗೆ ಕೂಲಿ ಕಾಳನ್ನು ಕೊಡುತ್ತೇವೆಂದು ಸರ್ಕಾರ ಹೇಳಿದೆ, ಅಷ್ಟು ಪ್ರಮಾಣದಲ್ಲಿ ಇವತ್ತು ಸಿಕ್ಕಿಲ್ಲ. ಇವತ್ತು ಒಂದು ತಾಲ್ಲೂಕಿಗೆ ಬರೇ 20 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಲವತ್ತು ಲಕ್ಷ ರೂಪಾಯಿ ಅಕ್ಕಿಗೆ ಕೊಟ್ಟಿದ್ದಾರೆ. 60 ಲಕ್ಷ ರೂಪಾಯಿ ಬಿಟ್ಟರೆ ಬೇರೆ ಏನೂ ಕೊಟ್ಟಿಲ್ಲ. 60 ಲಕ್ಷ ರೂಪಾಯಿಗಳಲ್ಲಿ 400 ಹಳ್ಳಿ, 420 ಹಳ್ಳಿ, 320 ಹಳ್ಳಿಗಳಿಗೆ ಅಷ್ಟು ಕೂಲಿಕಾರನಿಗೆ ಕೆಲಸ ಸಿಗಲು ಸಾಧ್ಯವಿಲ್ಲ. ಕೊಡತಕ್ಕದ್ದು ಏನೂ ಸಾಲುವುದಿಲ್ಲ. ಬರ ಪರಿಹಾರಕ್ಕೆ ಕೊಡುತ್ತೇವೆಂದು ಹೇಳುತ್ತಾರೆ ಅಷ್ಟೇ. ಆದರೆ ಬರ ಪರಿಹಾರಕ್ಕೆ ಕೊಡುವಂತಹ ಹಣಕಾಸು ಆಗಬಹುದು ಅಥವಾ ಕೂಲಿಕಾಳು ಈ ಒಂದು ಸ್ಥಿತಿಯಲ್ಲಿ ಸಾಲುವುದಿಲ್ಲ. ಇವತ್ತು ಏನಾಗಿದೆ ಎಂದರೆ, ಮಾನ್ಯ ಸದಾನಂದ ಗೌಡರು ಹೇಳಿದ ಹಾಗೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ಆಡಳಿತವನ್ನು ರಿವ್ಯೂ ಮಾಡುವ ವಿಚಾರದಲ್ಲಿ ಶಾಸಕರನ್ನು ಕರೆದು ಅನೇಕ ಸಾರಿ ರಿವ್ಯೂ ಮಾಡಿದ್ದಾರೆ. ನಮ್ಮ ಸಚಿವರು ಡಾ: ಪರಮೇಶ್ವರ್ ಅವರು ತುಮಕೂರಿನಲ್ಲಿ ಕರೆದರು. ಇಲ್ಲಿ ಡಿ.ಕೆ. ಶಿವಕುಮಾರ್ ಅವರು ರಿವ್ಯೂ ಮಾಡಿದರು. ಆ ಟೈಮಿನಲ್ಲಿ ಕುಡಿಯುವ ನೀರಿನ ಬಗ್ಗೆ ನಾವೆಲ್ಲಾ ಕೇಳಿದಾಗ ಡಿಸಿ ಅವರು ಹೇಳುತ್ತಾರೆ, ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಕೇವಲ ಐದು-ಆರು ಬೋರುಗಳನ್ನು ಒಬ್ಬ ಎಂಎಲ್‌ಎಗಳಿಗೆ ಕೊಡುತ್ತೇವೆಂದರು. ಅದರಲ್ಲಿ, ನಿಭಾಯಿಸಬೇಕು ಎನ್ನುತ್ತಾರೆ. ದಯಮಾಡಿ ಮಾನ್ಯ ಕಂದಾಯ ಸಚಿವರು ಕೇಳಬೇಕು. 300 ಹಳ್ಳಿ, 320 ಹಳ್ಳಿ 400 ಹಳ್ಳಿಗಳಿಗೆ ಕೇವಲ 5-6 ಬೋರ್ ಕೊರೆಸಿ ಕೊಟ್ಟರೆ ಶಾಸಕರನ್ನು ಬಿಡುತ್ತಾರಾ ಎಂಬುದನ್ನು ತಾವು ಯೋಚನೆ ಮಾಡಬೇಕು. ದಯಮಾಡಿ ಯೋಚನೆ ಮಾಡಬೇಕು. ನಾವು ರೈತರಿಗೆ ರಾಜ್ಯಕ್ಕೆ ಯಾವುದೇ ರೀತಿಯಲ್ಲಿ ತೊಂದರೆ ಆಗದ ಹಾಗೆ ವಿದ್ಯುಚ್ಛಕ್ತಿ ಕೊಡತ್ತೇವೆ, ಕುಡಿಯುವ ನೀರು ಕೊಡುತ್ತೇವೆ, ಪರಿಹಾರ ಕಾಮಗಾರಿಯನ್ನು ನಾವು ಕೈಗೊಳ್ಳುತ್ತೇವೆ ಎನ್ನುವಂತಹ ಮಾತನ್ನು ಪತ್ರಿಕೆಯಲ್ಲಿ ಸರ್ಕಾರದವರು ಹೇಳುತ್ತಾರೆ, ಟಿವಿ ಮಾಧ್ಯಮದಲ್ಲೂ ಹೇಳುತ್ತಾರೆ. ನಾವು ಹಳ್ಳಿಗಳಿಗೆ ಹೋದರೆ ಶಾಸಕರುಗಳ ಅನುಭವದ ಪ್ರಕಾರ ಹಾಗೂ ನನ್ನ ಅನುಭವದ ಪ್ರಕಾರ ಹಳ್ಳಿಗೆ ಹೋದಾಗ ಯಾವ ಊರಿಗೆ ಹೋದರೂ ಬಿಂದಿಗೆ ತಂದು ಇಡುತ್ತಾರೆ. ಟಿ.ಸಿ. ಇಲ್ಲ, ಎಂದು ಹೇಳುತ್ತಾರೆ ನೀರು ಕೊಡಿಸಿ ಎಂದು ಹೇಳುತ್ತಾರೆ, ಪವರ್ ಎರಡು ಗಂಟೆಗೆ ಬರುತ್ತದೆ ಎಂದು ಹೇಳುತ್ತಾರೆ. ಶಾಸಕರು ಇನ್ನೇನೂ ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲಿಂದ ಹೋದ ಮೇಲೆ. ಇಲ್ಲಿ ಮಾತ್ರ ಬಂದು ಎ.ಸಿ.ಯಲ್ಲಿ ಕುಳಿತುಕೊಂಡು 8-10 [illegible]

ಮಾಡುವುದನ್ನು ಬಿಟ್ಟರೆ ಆಚೆಗೆ ಹೋದರೆ ಎಲ್ಲರಿಗೂ ಬೆಂಕಿ ಇಟ್ಟುಕೊಂಡ ಹಾಗೆ ಆಗುತ್ತದೆ. ಅಷ್ಟರಮಟ್ಟಿಗೆ ಜನರು ನಮ್ಮನ್ನು ಒತ್ತಾಯ ಮಾಡುತ್ತಾರೆ. ಅವರ ಬರಗಾಲ ಮತ್ತು ಕುಡಿಯುವ ನೀರಿನ ವಿಚಾರದಲ್ಲಿ ಒತ್ತಾಯ ಮಾಡುತ್ತಾರೆ. ಸರ್ಕಾರದವರು ಅವರು ಹೇಳಿದ ರೀತಿಯಲ್ಲಿ ಇವತ್ತು ಕೆಲಸ ಮಾಡಿಲ್ಲ. ಉದಾಹರಣೆಗೆ ಇವತ್ತು ಬೆಂಗಳೂರು ಗ್ರಾಮಾಂತರ, ಮತ್ತು ಕೋಲಾರ ಜಿಲ್ಲೆಗಳು, ಏನು ದಕ್ಷಿಣ ಭಾಗದಲ್ಲಿ ಇರತಕ್ಕಂಥಹ ಜಿಲ್ಲೆಗಳಲ್ಲಿ ಒಣ ಭೂಮಿಯಲ್ಲಿ ಕುಡಿಯುವ ನೀರಿನ ಮಟ್ಟ 600, 700, 800 ಅಡಿಗೆ ಹೋಗಿದೆ. ದಿನ ದಿನ ಇವತ್ತು ಕುಡಿಯುವ ನೀರು ಒಂದೊಂದು ತಾಲ್ಲೂಕಿನಲ್ಲಿ 8-10 ಬೋರ್‌ಗಳು ಫೇಲ್ಯೂರ್ ಆಗಿ ಹೋಗುತ್ತಿವೆ. ಅದೂ ಅಲ್ಲದೆ ನಮ್ಮ ಮಾನ್ಯ ಶಿವಾನಂದ ಪಾಟೀಲ್ ಅವರು ಹೇಳಿದ ಹಾಗೆ ದನಕರುಗಳ ವಿಚಾರ, ಮೇವಿನವಿಚಾರ. ಇವತ್ತು ದನಕರುಗಳು ಜಾತ್ರೆಯಲ್ಲಿ 20 ಸಾವಿರ, 30 ಸಾವಿರ, 50 ಸಾವಿರ ಬೆಲೆ ಬಾಳುವಂತಹ ಹೋರಿಗಳನ್ನು ಕೇವಲ 4 ಸಾವಿರ 5 ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಅಂತೂ 8 ರಿಂದ 9 ಜಾತ್ರೆಗಳು ಆಗುತ್ತವೆ. ಪ್ರತಿ ವರ್ಷ ಇಡೀ ರಾಜ್ಯದಲ್ಲಿಯೇ ಅತ್ಯುತ್ತಮವಾದ ಜಾತ್ರೆ ಇವತ್ತು ಕ್ಯಾಲನಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನ, ಶಿವಗಂಗಾ ಜಾತ್ರೆ, ಮಹಿಮಾರಂಗ ಜಾತ್ರೆ. ಕಳೆದ ವರ್ಷ ಅಲ್ಲಿ 75 ಸಾವಿರ ರೂಪಾಯಿಗೆ ಹೋಗಿತ್ತು. ಈ ವರ್ಷ ಹತ್ತು ಸಾವಿರಕ್ಕಿಂತ ಜಾಸ್ತಿ ಎಲ್ಲೂ ಹೋಗಿಲ್ಲ. ಮಾನ್ಯ ಸಚಿವರಾದ ಶ್ರೀ ಮುನಿಯಪ್ಪನವರಿಗೆ ಗೊತ್ತಿರಬೇಕು. ನಾವು ನೀವೆಲ್ಲ ಹೋರಿಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡಿದಂತಹ ಜನ. ಈ ವರ್ಷ ಆ ಮಟ್ಟಕ್ಕೆ ಹೋಗಿದೆ. ಕಾರಣವೇನೆಂದರೆ ರೈತರಿಗೆ ಬೆಳೆ ಆಗಿಲ್ಲ. ಅವರಿಗೆ ಇವತ್ತು ಮೇವು ಸಿಕ್ಕಿಲ್ಲ. ಮೇವುಗಳನ್ನು ಕೂಡಿಟ್ಟುಕೊಳ್ಳುವಂತಹ ಒಂದು ಕಾರ್ಯಕ್ರಮವನ್ನು ಸರ್ಕಾರ ಇವತ್ತಿನವರೆಗೆ ಆ ಪ್ರಶ್ನೆ ಎತ್ತಿಲ್ಲ. ದಯಮಾಡಿ, ನಾನು ಸರ್ಕಾರವನ್ನು ವಿನಂತಿ ಮಾಡುತ್ತೇನೆ. ಕೂಡಲೇ ಮೇವಿನ ಬ್ಯಾಂಕ್ ಎಂದು ಇತ್ತು, ಅದನ್ನು ಸ್ಥಾಪನೆ ಮಾಡಬೇಕು. ಹೋಬಳಿ ಹೆಡ್ ಕ್ವಾರ್ಟರ್ಸ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಜಾನುವಾರುಗಳಿಗೆ ಮೇವು ಕೊಡುವಂತಹ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಳ್ಳಬೇಕು. ಅದೇ ರೀತಿ ಸಮರೋಪಾದಿಯಲ್ಲಿ ಬೋರ್‌ವೆಲ್‌ಗಳನ್ನು ಕೊರೆಯಬೇಕು. ಎಲ್ಲೆಲ್ಲಿ ಕುಡಿಯಲು ನೀರು ಇಲ್ಲ. ಅಲ್ಲಿ ಹೊಸ ಬೋರ್‌ವೆಲ್ ಕೊರೆಯಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇವತ್ತೇನು ಕೇಂದ್ರ ಸರ್ಕಾರದಿಂದ ಬಂದಂತಹ ಹಣದಲ್ಲಿ ಹೊಸ ಬೋರನ್ನು ಕೊರೆಯಬಾರದು ಎಂದೇನು ಹೇಳುತ್ತಾರೆ, ಆ ಒಂದು ರಿಸ್ಟ್ರಿಕ್ಷನ್ಸ್ ಅನ್ನು ತೆಗೆಸಬೇಕು. ದಯಮಾಡಿ ಎಲ್ಲಿ ಎಷೆನ್ಷಿಯಲ್ ಇದೆ, ಅಲ್ಲಿ ಹೊಸದಾಗಿ ಬೋರ್ ಕೊರೆಯುವಂತಹ ವ್ಯವಸ್ಥೆಗೆ ಕೂಡಲೇ ಸರ್ಕಾರ ಅನುಮತಿ ಕೊಡಬೇಕೆಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಮಾನ್ಯ ರಾಮದಾಸ್‌ರವರು ಅನೇಕ ಕಡೆ ಅವ್ಯವಹಾರ ಆಗಿದೆ ಎಂದು ಹೇಳುತ್ತಿದ್ದರು. ಅದು ಸತ್ಯ. ಅವ್ಯವಹಾರ ಆಗುವುದಕ್ಕೆ ರಾಜಕಾರಣಿಗಳೇ ಕಾರಣ. ಅಧಿಕಾರಿಗಳ ಮೇಲೂ ಹಾಕಬಾರದು. ನಾವು ರಿವ್ಯೂ ಕೆಲಸವನ್ನು ಮಾಡಿ ಎಂದರೆ ಅವರು ಮಾಡುತ್ತಾರೆ. ಅದು ಬಿಟ್ಟು ಬರೇ ಡೈರೆಕ್ಷನ್ ಕೊಟ್ಟರೆ ಅವರೂ ನಮ್ಮ ತಕರಹ ಹೇಳಿಬಿಟ್ಟು ಅನ್ಯಾಯ ಮಾಡುವುದು, ರಾಜಕಾರಣಿಗಳು ಬಿಟ್ಟರೆ ನನ್ನ ಪ್ರಕಾರ. ಆದ್ದರಿಂದ ದಯಮಾಡಿ ಸರ್ಕಾರ ಏನು ತನ್ನ ಬರ ಕಾಮಗಾರಿ ವಿಚಾರದಲ್ಲಿ ಇವತ್ತು ವಿಫಲಗೊಂಡಿದೆ. ಅದು ರಾಜ್ಯದ ರೈತರಿಗೆ, ಕೂಲಿ ಕಾರ್ಮಿಕರಿಗೆ ಇವತ್ತು ಒಂದು ಖುದ್ದಾಗಿ ಪರಿಣಾಮ ಆಗಿದೆ. ಅವರು ಜೀವನ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ

ಕೊಡತಕ್ಕ 20, 30 ಲಕ್ಷ ಬಿಟ್ಟು ಪ್ರತಿ ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಬರ ಪರಿಹಾರಕ್ಕೆ ಮೂರು ತಿಂಗಳಿಗೆ ಒಂದು ಸಾರಿ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಕೂಡಲೇ ಮಾಡಬೇಕು. ನಂತರ ಕೇಂದ್ರ ಸರ್ಕಾರದಿಂದ ಬಂದಂತಹ ಧಾನ್ಯಗಳನ್ನು ಪೂರ್ಣವಾಗಿ ಉಪಯೋಗ ಮಾಡುವ ರೀತಿಯಲ್ಲಿ ಸರ್ಕಾರ ಆದೇಶ ಮಾಡಿ, ಹಳ್ಳಿಗಾಡಿನ ಜನರಿಗೆ, ಕೂಲಿಕಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಉಪಾಧ್ಯಕ್ಷರೆ, ಈ ಬರದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಾನು ಜ್ಞಾಪಿಸಿಕೊಳ್ಳುವಂತಹ ಸನ್ನಿವೇಶ ಏನು ಎಂದರೆ 1964ನೇ ಇಸವಿಯಲ್ಲಿ ಒಂದು ಬಹಳ ಭೀಕರವಾದಂತಹ ಬರಗಾಲ ಬಂದಿತ್ತು ಎನ್ನತಕ್ಕಂಥದ್ದನ್ನು ನಾವು ನೀವು ಎಲ್ಲಾ ಓದಿದ್ದೇವೆ. ನಾನಂತೂ ಆವಾಗ ಸದನದ ಸದಸ್ಯನಾಗಿರಲಿಲ್ಲ. ಆದರೆ ಅದರ ಬಗ್ಗೆ ನಾನು ವಿಚಾರವನ್ನು ತಿಳಿದುಕೊಂಡಿದ್ದೇನೆ. 'The famine of 1964 was the severe-most' ಆ ಸಂದರ್ಭದಲ್ಲಿ ಈ ಬರದ ಬಗ್ಗೆ ಏನು ಚರ್ಚೆ ಆಯಿತು ಎಂದು ನಾನು ಸ್ವಲ್ಪ ಅವಲೋಕನ ಮಾಡಿದೆ. ಅದರ ಬಗ್ಗೆ ಅವತ್ತು ನಮ್ಮ ಇದ್ದಂತಹ ಮುಖ್ಯಮಂತ್ರಿಗಳು, ಮಂತ್ರಿಗಳು, ಸದನದಲ್ಲಿ ಆದಂತಹ ಚರ್ಚೆಗಳು, ಮತ್ತು ಎಕ್ಸ್‌ಪರ್ಟ್ಸ್ ರಿಪೋರ್ಟ್ ಏನು ಕೊಟ್ಟರು, ಅದನ್ನೆಲ್ಲಾ ಸ್ವಲ್ಪ ಅವಲೋಕನ ಮಾಡಿದ್ದೇನೆ. ಅದನ್ನು ಅವಲೋಕನ ಮಾಡಿದಾಗ ಬಹುಶಃ ನಮ್ಮ ಹಿರೀಕರು, ಸೀನಿಯರ್ಸ್, ಎಲ್ಡರ್ಸ್ ಏನು ಸಲಹೆಗಳನ್ನು ಕೊಟ್ಟಿದ್ದರು. ಅದನ್ನು ಏನಾದರೂ ಹಾನೆಸ್ಟ್ ಆಗಿ ನಾವು ಅದನ್ನು ಜಾರಿಗೆ ತಂದಿದ್ದರೆ, ಅದು ನಾವಾದರೂ ಇರಲಿ, ನಮ್ಮ ಅಪೋಸಿಷನ್ ಅವರಾದರೂ ಇರಲಿ, ಜಾರಿಗೆ ತಂದಿದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅತ್ತೆ ಗವರ್ನಮೆಂಟ್ ಇರಲಿ, ಯಾರೇ ಇರಲಿ, ಪರವಾಗಿಲ್ಲ. ನಾನು ನಮ್ಮ ಅಪೋಸಿಷನ್‌ನವರಿಗೆ ಅತ್ತೆಯವರು ಎಂದು ನಾನು ಅನೇಕ ಸಲ ಹೇಳುತ್ತೇನೆ. ಅವರು ತಪ್ಪು ತಿಳಿದುಕೊಳ್ಳಬಾರದು. ನಾವೆಲ್ಲಾ ಈ ಕಡೆ ಇರುವವರು ಸೊಸೆಯರು ಇದ್ದ ಹಾಗೆ. ಯಾವಾಗಲೂ ಅತ್ತೆಯವರು ಏನು ಮಾಡುತ್ತಾರೆ ಎಂದರೆ ಸೊಸೆಯಿಂದಿರು ಯಾವಾಗಲೂ ಎಷ್ಟೇ ಪ್ರೀತಿಯಿಂದ ಕಂಡರೂ ಅತ್ತೆಯವರು ತಪ್ಪು ಹುಡುಕುವುದನ್ನು ಬಿಡುವ ಹಾಗೆ ಇಲ್ಲ. ಯಾವಾಗಲೂ ತಪ್ಪು ಹುಡುಕುತ್ತಲೇ ಇರುತ್ತಾರೆ. ಹಗಲೆಲ್ಲಾ ಏನಮ್ಮ ಊಟ ಮಾಡಿದೆಯಾ ಚೆನ್ನಾಗಿದ್ದೀಯಾ ಎಂದು ಕೇಳುವ ಹಾಗೆ ಇಲ್ಲ. ಅದೇ ತಪ್ಪು ಹುಡುಕುವುದು, ಸೊಸೆ ಮೇಲೆ ಏನಾದರೂ ಆಪಾದನೆ ಮಾಡುವಂತಥಾದ್ದು ಅತ್ತೆಯವರಿಗೆ ಇರತಕ್ಕಂಥ ಒಂದು ವಿಶೇಷವಾದಂತಹ ಗುಣ. ನಾವು ಅದನ್ನು ಕಾಣುತ್ತೇವೆ. ಹಾಗೆ ನಮ್ಮ ಅಪೋಸಿಷನ್ ಮಿತ್ರರುಗಳು ಬಹಳಷ್ಟು ವಿಚಾರಗಳನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಆದರೆ 1964ರಲ್ಲಿ ನಡೆದಂತಹ ಒಂದು ಅಭಾವ ಏನಾಯಿತು? ಅದರ ಬಗ್ಗೆ ಅವರೇಕೆ ಚಿಂತನೆ ಮಾಡಲಿಲ್ಲ? ಅವತ್ತು ಬಹಳ ಸಿವಿಯರ್ ಆಗಿತ್ತು. ಬಹಳಷ್ಟು ಸಿವಿಯರ್ ಆಗಿದ್ದಂತಹ ಆ ಒಂದು ಫ್ಯಾಮಿನ್ ಬಗ್ಗೆ ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ 20 ಪರ್ಸೆಂಟ್ ಜಾರಿಗೆ ಬಂದಿದ್ದರೂ ಇವತ್ತು ಕುಡಿಯುವ ನೀರಿಗೆ, ಹುಲ್ಲಿನ ಸಮಸ್ಯೆ, ಆ ಸಮಸ್ಯೆ, ಈ ಸಮಸ್ಯೆ ಎಂದು ಹೇಳಿ 108 ಸಮಸ್ಯೆ ಇದ್ದಾವಲ್ಲಾ, ಇವ್ಯಾವುದಕ್ಕೂ ಆಸ್ಪದ ಬರುತ್ತಿರಲಿಲ್ಲ. ಆದರೆ ನಮ್ಮ ಇಂಡಿಯನ್ ಮೆಂಟಾಲಿಟಿ, ನಮ್ಮ ವೇ ಆಫ್ ಮ್ಯಾನೇಜ್‌ಮೆಂಟ್, ನಮ್ಮದು ಯಾವುದೂ ಲಾಂಗ್ ರೇಂಜ್ ಪಾಲಿಸಿ ಇಲ್ಲ. ಶಾರ್ಟ್ ಲಿವಿಂಗ್, ಶಾರ್ಟ್ ಟರ್ಮ್ ಮ್ಯಾನೇಜ್

ಮೆಂಟ್. ನಾಳೆಗೆ ಏನು, ಇವತ್ತೇನು ಸಾಯಂಕಾಲ ಬೆಳಿಗ್ಗೆ, ಮುಗಿದು ಹೋಯಿತು. ಇನ್ನು ಐದು ವರ್ಷ, ಆರು ವರ್ಷಕ್ಕೆ ಏನು ಎಂಬ ಪ್ರಶ್ನೆ ಯೋಚನೆ ಮಾಡುವ ಹಾಗೇ ಇಲ್ಲ.

5.00 ಪಿಎಂ

This is the lacuna of our Indian management of our economic system, planning system ಅನ್ನು ನಾವು ಅಲ್ಲಿ ಕಾಣುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಅವರು ಅವೊತ್ತೇ ಹೇಳಿದರು ಈ ಬರ ಪರಿಹಾರ ಕಾಮಗಾರಿ ಕಾರ್ಯಕ್ರಮದಲ್ಲಿ ದೇವರು ಕೊಟ್ಟಿರುವ ನೀರನ್ನು ನಾವು ಯಶಸ್ವಿಯಾಗಿ ಉಳಿಸಿಕೊಳ್ಳಬೇಕಾದರೆ, ಭಗವಂತ ಆಕಾಶ, ಭೂಮಿ ಮತ್ತು ಮಳೆ ಏನು ಕೊಟ್ಟಿದ್ದಾನೆ, ಇದರ ಬಗ್ಗೆ ಬಸವಣ್ಣನವರ ಒಂದು ವಚನ ನನಗೆ ಜ್ಞಾಪಕಕ್ಕೆ ಬರುತ್ತದೆ. "ಬೆಳೆ ನಿಮ್ಮದ್ದಾನ, ಎಲೆ ನಿಮ್ಮದ್ದಾನ, ಸುತ್ತ ಬೀಸೋ ಗಾಳಿ ನಿಮ್ಮದ್ದಾನ. ಆಕಾಶ ನಿಮ್ಮದ್ದಾನ, ಭೂಮಿ ನಿಮ್ಮದ್ದಾನ" ಭಗವಂತ ಇವೆಲ್ಲವನ್ನೂ, ಕೊಟ್ಟಿದ್ದಾನೆ. ಆಕಾಶ ಕೊಟ್ಟಿದ್ದಾನೆ. ಅದಕ್ಕಿಂತಲೂ ಜಾಸ್ತಿಯಾಗಿ ಗಾಳಿ ಕೊಟ್ಟಿದ್ದಾನೆ, ನಾವು-ನೀವೂ ಸ್ಟ್ರೈಕ್ ಮಾಡುವಂತೆ ಗಾಳಿಯೇನಾದರೂ ಹತ್ತು ನಿಮಿಷ ಸ್ಟ್ರೈಕ್ ಮಾಡಿದರೆ ನೀವು ಅಲ್ಲೇ, ನಾವು ಇಲ್ಲೇ. ಯಾರ ಸಮಾಧಿ ಯಾರೂ ಮಾಡುವಂತಿಲ್ಲ. ಸಹಾನುಭೂತಿಯಂತೂ ಯಾರು ಹೇಳುವಂತಿಲ್ಲ. ದೇವರು ಎಂತಹ ಅದ್ಭುತವಾದ ಗಾಳಿ ಕೊಟ್ಟಿದ್ದಾನೆ. ಅದಕ್ಕಿಂತಲೂ ಯಥೇಚ್ಛವಾಗಿ ಸಮುದ್ರ ಕೊಟ್ಟಿದ್ದಾನೆ. ಕಾಲು ಭಾಗ ಭೂಮಿ ಇದ್ದರೆ ಮುಕ್ಕಾಲು ಭಾಗ ನೀರು ಕೊಟ್ಟಿದ್ದಾನೆ. You see the God's management of our system. ಪ್ರಪಂಚದಲ್ಲಿ ಕಾಲು ಭಾಗ ಮಾತ್ರ ಭೂಮಿ ಇರುವುದು ನಮಗೂ ನಿಮಗೂ ಗೊತ್ತು ಆದರೆ, ಮುಕ್ಕಾಲು ಭಾಗ ನೀರನ್ನು ಕೊಟ್ಟಿದ್ದರೂ ಸಹ ಮನುಷ್ಯ ಇವೊತ್ತು 'ನೀರಿಲ್ಲ, ನೀರಿಲ್ಲ' ಎನ್ನುತ್ತಾನಲ್ಲಾ ಇದರ ಮರ್ಮವಾದರೂ ಏನು? We lack the management science. ಈ ಮ್ಯಾನೇಜ್‌ಮೆಂಟ್ ಸೈನ್ಸ್‌ನಲ್ಲಿ ಒಂದು ಥಿಯರಿ ಬರುವುದು ಹಿರಿಯರಿಗೆಲ್ಲಾ ಗೊತ್ತಿದೆ, ಪ್ರಾಬ್ಲಮ್ಸ್ ಅನ್ನು ಸಾಲ್ವ್ ಮಾಡುವಂತಿಲ್ಲ Mange the problems without solving it. That itself is a management. It is a principle of management. Manage the problem without solving the problem. Find an excuse under some excuse. That itself is a management. ಈ ಎರಡು ರೂಲನ್ನು ಬಹಳ ಸಲ, ಏನು ಈ ಸಿಸ್ಟಂ ಅನ್ನು ಜಾರಿಗೆ ತಂದಿದ್ದೇವೆ, ಅದರಲ್ಲಿ ಕಾಣುತ್ತಿದ್ದೇವೆ, ಇದಲ್ಲ, ನಮ್ಮ ಮ್ಯಾನೇಜ್‌ಮೆಂಟ್ ಸಿಸ್ಟಂ ಹೇಗಿರಬೇಕೆಂದರೆ, ನಾವು ಕಾಯಿಲೆಗೆ ಔಷಧಿ ತೆಗೆದುಕೊಂಡಾಗ ಹುಷಾರಾಗಲೇಬೇಕೆಂದು ಹೇಗೆ ನಾವು ಪಟ್ಟು ಹಿಡಿಯುತ್ತೇವೋ, ಆ ರೀತಿ ಸಲ್ಯೂಷನ್ ಹುಡುಕಬೇಕೇ ಹೊರತು. not just to management a problem. ಆದುದರಿಂದಲೇ, 1964ರಲ್ಲಿ ಹೇಳಿದಂಥ ಅನೇಕ ಸಲಹೆಗಳನ್ನು ನಾವು ಜಾರಿಗೆ ತರದೆ ಬರೀ we have managed the problems. But we have not solved it. That we should do. ನಾನು ಬಸವಣ್ಣನವರ ವಚನವನ್ನು ಹೇಳುವಂಥ ಸಂದರ್ಭದಲ್ಲಿ ಜ್ಞಾಪಕ ಬಂದದ್ದನ್ನು ನಿಮಗೆ ಹೇಳಿದೆ. ಭಗವಂತ ನಮಗೆ ಯಥೇಚ್ಛವಾಗಿ ಎಲ್ಲವನ್ನೂ ಕೊಟ್ಟ. God gives and forgives, man gets and forgets. ಇದೊಂದು ಮಾತನ್ನು ಹಿರಿಯರೆಲ್ಲರೂ ಹೇಳುತ್ತಾರೆ. ಭಗವಂತನಿಂದ ನಾವು ಎಲ್ಲವನ್ನೂ ಪಡೆದುಕೊಳ್ಳುತ್ತೇವೆ, ಆದರೆ, ಮರೆಯುತ್ತೇವೆ. ಆದರೆ, ದೇವರು ಎಲ್ಲವನ್ನೂ ಕೊಟ್ಟು, ನೀನು ಉಪಯೋಗಿಸಿಕೊಳ್ಳುವುದಾದರೆ ಉಪಯೋಗಿಸಿಕೋ,

ಬಿಟ್ಟರೆ ಬಿಡು ಎಂದು ಹೇಳಿ ಕ್ಷಮಿಸಿ ಬಿಡುತ್ತಾನೆ, ಮನುಷ್ಯಾನಾದವನಿಗೆ ಭಗವಂತ ಎಲ್ಲವನ್ನೂ ಕೊಟ್ಟರೂ ಕೂಡ ಅದನ್ನು ಮ್ಯಾನೇಜ್ ಮಾಡುವುದಕ್ಕೆ ಬಾರದೆ, ತನಗೆ ತಾನು ಹೇಗಿರಬೇಕೆಂಬ ಬಗ್ಗೆ ಪದ್ಧತಿಯನ್ನೂ ಸಹ ಜಾರಿಗೆ ತರದೇ ತೊಂದರೆ ಅನುಭವಿಸುತ್ತಿದ್ದಾನೆ. ಆತ ಯಥೇಚ್ಛವಾಗಿ ಅರಣ್ಯ ಕೊಟ್ಟ, ಅರಣ್ಯವನ್ನು ಏತಕ್ಕೆ ಕೊಟ್ಟನು? ಸುಮ್ಮನೆ ಕೊಟ್ಟನೇ? ಕರಾವಳಿಯ ಸುತ್ತಮುತ್ತಲೂ ಬೇಕಾದಷ್ಟು ಮರಗಳಿವೆ, ಎಲ್ಲಾ ಕಡೆಗಳಲ್ಲೂ ಮರಗಳಿವೆ. ದೇವರು ಇದನ್ನೆಲ್ಲಾ ಏಕೆ ಕೊಟ್ಟ? ಒಳ್ಳೆಯ ಗಾಳಿ ಕೊಡಲೆಂದು. ಅದಕ್ಕೆ ಮನುಷ್ಯ ಏನು ಮಾಡಿದನೆಂದರೆ, we have turned anti-nature, we are anti nature I tell you ಅದು pro-nature ಆಗಲೇ ಇಲ್ಲ. ಈ ಹಿಂದೆ ಇದ್ದ ನಮ್ಮ ಹಿರಿಯರಕು ಅನಕ್ಷರಸ್ಥರಾಗಿದ್ದರೂ, ಅವರಿಗೆ ಬುದ್ಧಿ ಇಲ್ಲದಿದ್ದರೂ ಸಹ ವಿವೇಕ ಎಂಬುದಿತ್ತು, They were not anti-nature, they were pro-natures. We are all anti-natures, With the result, ಬರ ಬಂತು, ಎಲ್ಲವೂ ಬಂತು. 1964ರಲ್ಲಾದ ಘಟನೆ ಕುರಿತು ಪ್ರಸ್ತಾಪಿಸುತ್ತಿರುವ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗುತ್ತದೆ. 1964ರಲ್ಲಿ ಆಹಾರದ ಬಗ್ಗೆಯೂ ಕೊರತೆ ಇತ್ತು. ಆಗ ಊಟ ಮಾಡಲು ತೊಂದರೆಯಿತ್ತು. ಆಹಾರವನ್ನು ಇಂಪೋರ್ಟ್ ಮಾಡಿಕೊಂಡರು. ಬಹುಶಃ ಪಿಎಲ್ 480 ಎಂದು ಅಮೆರಿಕಾದಿಂದ ಏನು ಗೋಧಿಯನ್ನು ಇಂಪೋರ್ಟ್ ಮಾಡಿಕೊಂಡರು, ಅದನ್ನು ಆಗಲೇ ತಂದದ್ದು, ಇವೊತ್ತು ನಮಗೆ ಊಟ ಇದೆ, ಹೇಳಿಕೊಳ್ಳುವಷ್ಟು ತೊಂದರೆಯೇನಿಲ್ಲ, ಬೇಕಾದಷ್ಟು ಆಹಾರ ಇದೆ. ಕೇಂದ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಸಂಗ್ರಹಿಸಿಡಲಾಗಿದೆ. ಎಷ್ಟು ಬೇಕಾದರೂ ಕೇಳಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ, ನಮಗೆ ಕೊಡುವುದರಲ್ಲಿ ಸ್ವಲ್ಪ ಹಿಂದು-ಮುಂದು ಆಟವಾಡಿಸುತ್ತಿದ್ದಾರೆ. ಅದನ್ನು ಎಲ್ಲಿ ತೆಗೆದುಕೊಂಡರೋ ನಮಗಂತೂ ಗೊತ್ತಿಲ್ಲ. ಸದನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳಿದ್ದಾರೆ. ಬಹುಶಃ ಅವರು ದೆಹಲಿಗೆ ಬಹಳ ಬೇಗ ಹೋಗಿ ಕೇಳಿದರೆ ನೀವು ಕೇಳಿದಷ್ಟು ಕೊಟ್ಟುಬಿಡುತ್ತಾರೆಂದು ಯಾರೋ ಹೇಳುತ್ತಿದ್ದರು. ಆದಷ್ಟು ಬೇಗ ಮಾನ್ಯ ಮಂತ್ರಿಗಳು ಹೋದರೆ ರಾಜ್ಯಕ್ಕೆ ಶೀಘ್ರವಾಗಿ ಆಹಾರ ಬರುತ್ತದೆಂಬ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಗುರುಸ್ವಾಮಿಯವರೆ, ಈಗ ತಾವು ಬರ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ, ಆದರೆ, ಸದನದಲ್ಲಿ ಮಂತ್ರಿಗಳಿಗೇ ಬರ ಬಂದುಬಿಟ್ಟಿದೆ.

ಶ್ರೀ ಎ.ಎಸ್. ಗುರುಸ್ವಾಮಿ : ಅವರಿಗೆಲ್ಲಿ ಬರ? ನಾನು ಬರ ಹೇಳುತ್ತಿಲ್ಲ. ಬರದ ಬಗ್ಗೆ ಔಷಧಿ ಕಂಡುಹಿಡಿಯುವುದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಂ.ವೈ ಘೋರ್ಪಡೆಯವರ ಹತ್ತಿರ ಒಂದು ಮಂತ್ರವಿದೆಯೆಂದು ಒಬ್ಬರು ಹೇಳಿದ್ದಾರೆ. ಅವರು ಆದಷ್ಟು ಬೇಗ ದೆಹಲಿಗೆ ಹೋದರೆ ರಾಜ್ಯಕ್ಕೆ ಬೇಗ ಆಹಾರಧಾನ್ಯಗಳು ಬರುತ್ತದೆ. ಆದುದರಿಂದ, ನಿಮ್ಮೆಲ್ಲರ ಪರವಾಗಿ ನಾನು ಅವರಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ. ತಾವು ಬೇಗ ದೆಹಲಿಗೆ ಹೋಗಿ ನಮಗೆ ಬೇಕಾದಷ್ಟು ಆಹಾರಧಾನ್ಯಗಳನ್ನು ಒದಗಿಸಿಕೊಡಿ. ಇವೊತ್ತು ಮೈಸೂರು ಜಿಲ್ಲೆಯಲ್ಲಿ ಫುಡ್ ಕಾಂಪೊನೆಂಟ್ ಇಲ್ಲದೆ ವರ್ಕ್ ಸಫರ್ ಆಗುತ್ತಿರುವುದನ್ನು ನೋಡುತ್ತಿದ್ದೇನೆ. ಆದಕಾರಣ, ಆದಷ್ಟು ಬೇಗ ಫುಡ್ ಕಾಂಪೊನೆಂಟ್ ಬರುವಂಥ ವ್ಯವಸ್ಥೆಯಾಗಬೇಕು. ನಾನು ಬರ ಕುರಿತಂತೆ ವಿಚಾರ ಪ್ರಸ್ತಾಪವಾದ ಸಂದರ್ಭದಲ್ಲಿ ಹೇಳುತ್ತಿದ್ದೆ. We are anti-nature ಎಂಬ temperament ನಲ್ಲಿ ಇರತಕ್ಕಂಥ ಒಂದು ಸನ್ನಿವೇಶನವನ್ನು

ಕಾಣುತ್ತಿದ್ದೇವೆ. ಅಂದರೆ ಸದುಪಯೋಗಪಡಿಸಿಕೊಳ್ಳುವಂಥ ಒಂದು ಮ್ಯಾನೇಜ್‌ಮೆಂಟ್ ಸೈನ್ಸ್ ಅನ್ನು ನಾವು ಅಳವಡಿಸಿಕೊಂಡಿಲ್ಲವೆಂಬುದನ್ನು ಕಾಣುತ್ತಿದ್ದೇವೆ. ಇದನ್ನು ನಾವು ಸರಿಪಡಿಸಿಕೊಂಡರೆ ಸಮಸ್ಯೆಗಳು ಕಡಿಮೆಯಾಗುತ್ತದೆ. ನಾನು ಯುನಿಸೆಫ್ ರಿಪೋರ್ಟ್ ತರಿಸಿಕೊಂಡು ಅಧ್ಯಯನ ಮಾಡಿದ್ದೇನೆ. UNICEF experts from all over the countries, have come here to study, ಇಂಡಿಯಾ ದೇಶದಲ್ಲಿ 'ಬರ, ಬರ' ಎಂದು ಹೇಳುತ್ತಾರಲ್ಲಾ ಪ್ಲಡ್ಡೂ ಬರ, ಅಭಾವ ತಪ್ಪಿದರೆ ಪ್ರಭಾವ, ಇವೆರಡನ್ನೇ ಹೇಳುತ್ತಿರುತ್ತಾರಲ್ಲಾ, ಏಕೆ ಎಂದು ಒಂದು ಕ್ಯೂರಿಯಾಸಿಟಿಯಲ್ಲಿ ಒಂದು ಎಕ್ಸ್‌ಪೋರ್ಟ್ ಕಮಿಟಿಯನ್ನು ಯುನಿಸೆಫ್‌ನವರು ಕಾನ್ಸ್ ಟಿಟ್ಯೂಟ್ ಮಾಡಿ ನಮ್ಮ ಇಂಡಿಯಾ ದೇಶಕ್ಕೆ ಕಳುಹಿಸಿದ್ದಾರೆ. ಅವರು ಒಂದು ರಿಪೋರ್ಟ್ ಸಲ್ಲಿಸಿದ್ದು, ಅದರಲ್ಲಿ ಏನು ಹೇಳುತ್ತಾರೆಂದರೆ, ಇಂಡಿಯಾ ದೇಶದಲ್ಲಿ ಎಲ್ಲವೂ ಇದೆ. ಆದರೆ, ಇವರು ಸರಿಯಾಗಿ ಮ್ಯಾನೇಜ್ ಮಾಡುತ್ತಿಲ್ಲವೆಂದು ಹೇಳುತ್ತಾರೆ. ಇಲ್ಲಿ ಯಾವುದಕ್ಕೂ ಶಾರ್ಟೇಜ್ ಇಲ್ಲವೆನ್ನುತ್ತಾರೆ. ಇಲ್ಲಿ ನೀರು ಸಾಕಷ್ಟಿದ್ದರೂ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಬರುತ್ತಿಲ್ಲ, ವಾಟರ್ ಮ್ಯಾನೇಜ್ ಮೆಂಟ್ ಪ್ರಕಾರ ಯಾವುದಕ್ಕೆ ಎಷ್ಟು ಉಪಯೋಗಿಸಿಕೊಳ್ಳಬೇಕೆಂಬುದರ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲ. ಡ್ರೈ ವಾಟರ್ ಮ್ಯಾನೇಜ್‌ಮೆಂಟ್ ಯಾವುದಕ್ಕೆ ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಚಿಂತನೆ ಇಲ್ಲ, ಸಮುದ್ರಕ್ಕೆ ಬೇಕಾದಷ್ಟು ಪ್ರಮಾಣದಲ್ಲಿ ನದಿಗಳ ನೀರನ್ನು ವೇಸ್ಟಾಗಿ ಬಿಡುತ್ತಿದ್ದಾರೆ, ಈಸ್ಟ್, ವೆಸ್ಟ್ ವೈಸ್ ಹರಿಯುತ್ತಿವೆ, ಅದನ್ನು ಕಂಟ್ರೋಲ್ ಮಾಡಿ ಒಂದಕ್ಕೊಂದು ಕೂಡಿಸುವಂತಾದ್ದು, ಈಗ ಗಂಗಾ-ಕಾವೇರಿ ಕಲ್ಯಾಣವೆಂದು ನದಿಗಳನ್ನು ಕೂಡಿಸುವಂಥ ಪದ್ಧತಿಯೇನಿದೆ, ಇದರ ಬಗ್ಗೆ ಅವರು ಅವೊತ್ತೇ ಯೋಚನೆ ಮಾಡಿದ್ದರು. ಇಷ್ಟೆಲ್ಲಾ ನೀರನ್ನು ಉಪಯೋಗಿಸಿಕೊಂಡಲ್ಲಿ ನಿಮಗೆ ಯಾವುದೇ ರೀತಿಯಾದ ಸಮಸ್ಯೆಯುಂಟಾಗುವುದಿಲ್ಲವೆಂದು ಯುನಿಸೆಫ್ ಎಕ್ಸ್ ಪೋರ್ಟ್ ಕಮಿಟಿಯವರು ಹೇಳಿದ್ದಾರೆ. ಇಂಡಿಯನ್ ಥಿಂಕರ್ಸ್ ಬಗ್ಗೆಯೂ ಒಂದು ವಿಚಾರ ಹೇಳಿದ್ದಾರೆ. ಏನೆಂದರೆ, short-sighted management policy ಇಟ್ಟುಕೊಂಡು ಮಾಡುತ್ತಿದ್ದಾರೆ. ಇದು ತಪ್ಪು. Long range policyಯನ್ನು ನಮ್ಮ ಡ್ರೌಟ್ ಮ್ಯಾನೇಜ್‌ಮೆಂಟ್‌ನಲ್ಲಿ ಇಟ್ಟುಕೊಳ್ಳಬೇಕೆಂಬ ಮಾತನ್ನು ಹೇಳಿದರು. ಅಂದರೆ, ನಮ್ಮಲ್ಲಿ ಈಗೇನು ಬೇಕಾದಷ್ಟು ಕೆರೆ-ಕಟ್ಟೆಗಳು, ಗೋಕಟ್ಟೆಗಳಿವೆ, ಇವುಗಳೆಲ್ಲವನ್ನೂ ಕೂಡ ಜೀರ್ಣೋದ್ಧಾರ ಮಾಡಿದರೆ, ಇವುಗಳೆಲ್ಲದರಲ್ಲಿ ನೀರು ನಿಂತರೆ ನೀರಿಗೆ ಅಭಾವ ಬರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ, ನನಗನ್ನಿಸುವುದೇನೆಂದರೆ, ಈಗ ಕೆರೆ ಯೋಜನೆ ಎಂದು ನಾವು ಏನು ಮಾಡಿದ್ದೇವೆ, ಬರ ಪರಿಹಾರ ಕಾಮಗಾರಿ ಯೋಜನೆಯಡಿ ಕೆರೆಗಳಲ್ಲಿ ಹೂಳು ತೆಗೆಯುವ ಮೂಲಕ ಕೆರೆಗಳಲ್ಲಿ ನೀರು ನಿಂತರೆ ಬತ್ತಿ ಹೋಗಿರುವ ಬೋರ್‌ವೆಲ್‌ಗಳೆಲ್ಲವೂ ಮತ್ತೆ ಚಾರ್ಜ್ ಆಗುತ್ತದೆಂಬ ನಂಬಿಕೆ ನನಗಿದೆ. ಕೆಲವು ಕಡೆಗಳಲ್ಲಿ ಆ ರೀತಿ ಆಗಿದೆ. ಕೆರೆ ಪ್ರಾಧಿಕಾರವೆಂದು ಏನು ಪ್ರಾರಂಭಿಸಿದ್ದೇವೆ. This is one of the beautiful projects. ಸದರಿ ಯೋಜನೆ ಯಶಸ್ವಿಯಾಗಿ ಕೆರೆಗಳಲ್ಲಿ ನೀರು ನಿಂತರೆ ಬೋರ್‌ವೆಲ್‌ಗಳು ಮತ್ತೆ ಚಾರ್ಜ್ ಆಗುವ ಮೂಲಕ ಕುಡಿಯುವ ನೀರಿನ ಸಮಸ್ಯೆ ಶೇಕಡ 50ರಷ್ಟು ಕಡಿಮೆಯಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೊಂದು ಒಳ್ಳೆಯ ಕಾರ್ಯಕ್ರಮವೆಂಬುದರಲ್ಲಿ ಎರಡು ಮಾತಿಲ್ಲ. ಇವೊತ್ತು ನದಿಗಳ ನೀರನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ವ್ಯವಸಾಯದ ಲಕ್ಷಾಂತರ ಎಕರೆಗಳಿಗೆ ಏನು ಬಳಸಿಕೊಂಡಿದ್ದೇವೆ, ಇವೊತ್ತು ಸುಮಾರು 27,000

ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಬೇಕೆಂದು ಏನು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ, ಇದು ಗ್ರೌಂಡ್ ವಾಟರ್ ಅನ್ನು ರಿ-ಚಾರ್ಜ್ ಮಾಡುತ್ತದೆ. ತನ್ಮೂಲಕ ಕುಡಿಯುವ ನೀರಿಗೆ ಯಾವುದೇ ಸಮಸ್ಯೆವುಂಟಾಗುವುದಿಲ್ಲ. ಆದಕಾರಣ, ಸರ್ಕಾರ ಇದರ ಬಗ್ಗೆ ಹೆಚ್ಚು ಗಮನಹರಿಸಬೇಕೆಂಬುದು ನನ್ನ ಅರಿಕೆ. ಕೇಂದ್ರ ಸರ್ಕಾರದವರು ಈ ಕುರಿತಂತೆ ಒಂದು ಸಲಹೆ ಕೊಡ ಕೊಟ್ಟಿದ್ದು. ಇದು ಯುನಿಸೆಫ್ ರಿಪೋರ್ಟ್‌ನಲ್ಲಿ ಸಹ ಬಂದಿದೆ. ಇದನ್ನು ತಮಗೆ ಕೊಡುತ್ತೇನೆ. ಅದನ್ನು ತಾವು ಸರ್ಕಾರಕ್ಕೆ ಕಳುಹಿಸಿಕೊಡಬಹುದು. ಅವರು ಏನು ಹೇಳುತ್ತಾರೆಂದರೆ, ಗ್ರೌಂಡ್ ವಾಟರ್ ಸಪ್ಲೈ ಅನ್ನು ರೆಗ್ಯುಲೇಟ್ ಮಾಡಬೇಕೆಂದು ಒಂದು ಡ್ರಾಫ್ಟ್ ಆ್ಯಕ್ಟ್ ಅನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿಕೊಟ್ಟಿದ್ದಾರೆ. Ground Water Management Regulatory Authority ಮಾಡಬೇಕೆಂದು ಕಳುಹಿಸಿದ್ದಾರೆ. ಅಂದರೆ, ಎಲ್ಲೆಂದರಲ್ಲಿ ಸಿಕ್ಕಾಪಟ್ಟೆ ಬೋರ್‌ವೆಲ್‌ಗಳನ್ನು ಕೊರೆದು ಇರುವ ಅಂತರ್ಜಲವನ್ನೆಲ್ಲಾ ಬರಿದು ಮಾಡುವ ಮೂಲಕ ಭೂಮಿಯನ್ನು ಬರಡು ಮಾಡುವಂಥ ಕೆಲಸ ಮಾಡಬಾರದೆಂದಿದ್ದರೂ ಸಹ ಅನೇಕ ರಾಜ್ಯಗಳು. even today in our state ಆ ರೆಗ್ಯುಲೇಶನ್ ಮಾಡಿಲ್ಲ, ಸಿಕ್ಕಾಪಟ್ಟೆ ಬೋರ್‌ವೆಲ್‌ಗಳನ್ನು ಕೊರೆದು ಯಾವ ಕೆರೆಗಳಲ್ಲೂ ನೀರು ನಿಲ್ಲಿಸಬಾರದಂಥ ಪರಿಸ್ಥಿತಿಗೆ ನಾವು ತಂದಿಟ್ಟಿದ್ದೇವೆ. ಇಂತಹ ಕೆಲಸ ಆಗಬಾರದು. ಗ್ರೌಂಡ್ ವಾಟರ್ ಚಾರ್ಜ್ ಆಗುವುದಕ್ಕೆ ಒಂದು ರೆಗ್ಯುಲೇಶನ್ ಆಗುವುದು ಬಹಳ ಮುಖ್ಯವೆಂದು ಈ ಸಂದರ್ಭದಲ್ಲಿ ಹೇಳಲು ನಾನು ಇಚ್ಛೆಪಡುತ್ತೇನೆ. ಯುನಿಸೆಫ್‌ನವರು ಹೇಳುವ ಇನ್ನೊಂದು ಬಹಳ ಮಹತ್ವಪೂರ್ಣವಾದ ವಿಚಾರವೇನೆಂದರೆ, ನಾವು ಹಮ್ಮಿಕೊಂಡಿರುವ ಬಹಳಷ್ಟು ಪ್ರಾಜೆಕ್ಟ್‌ಗಳೇನಿವೆ, they are not based on realistic grounds ಎನ್ನುವ ಮಾತುಗಳನ್ನಾಡಿದ್ದಾರೆ. ಅಂದರೆ, ಯಾವ ಯೋಜನೆಯಲ್ಲಿ ನಾವು ಇದನ್ನು ಕಾರ್ಯಗತಗೊಳಿಸಿದರೆ ಎಷ್ಟು ಪ್ರಮಾಣದಲ್ಲಿ ನೀರನ್ನು ಕನ್‌ಸರ್ವ್ ಮಾಡಬೇಕಿತ್ತೋ ಅಷ್ಟು ಪ್ರಮಾಣದಲ್ಲಿ ಆಗಿಲ್ಲವೆಂಬ ಮಾತನ್ನು ಯುನಿಸೆಫ್ ರಿಪೋರ್ಟ್‌ನಲ್ಲಿ ಹೇಳಿರುವುದನ್ನು ಕೇಳುತ್ತಿದ್ದೇವೆ. ಆದುದರಿಂದ, ಯುನಿಸೆಫ್ ರಿಪೋರ್ಟ್‌ನಲ್ಲಿ ಬಂದಿರುವ ವಿಚಾರಗಳೆಲ್ಲವನ್ನೂ ಸರ್ಕಾರ ಗಮನದಲ್ಲಿಟ್ಟುಕೊಂಡು ಜಾರಿಗೆ ತಂದರೆ ವಾಟರ್ ಮ್ಯಾನೇಜ್ ಮೆಂಟ್ ಪಾಲಿಸಿಯಿಂದ ಬರ ಪರಿಸ್ಥಿತಿಯಲ್ಲಿ ಉದ್ಭವಿಸುವ ಕುಡಿಯುವ ನೀರು, ಮೇವು ಸಮಸ್ಯೆ ಇತ್ಯಾದಿ ಏನೇನಿವೆ, ಇದೆಲ್ಲಕ್ಕೂ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಿದೆಯೆಂಬ ಮಾತನ್ನು ಹೇಳುತ್ತೇನೆ. ಇನ್ನೊಂದು ಮಾತನ್ನು ಅವರು ಹೇಳುತ್ತಾರೆ, ಅದನ್ನು ಸದನದ ಗಮನಕ್ಕೆ ತರುತ್ತೇನೆ. ಇಸ್ರೇಲ್ ಟೈಪ್ ಆಫ್ ವಾಟರ್ ಮ್ಯಾನೇಜ್‌ಮೆಂಟ್‌ನ್ನು ಇಡೀ ಪ್ರಪಂಚದಲ್ಲೇ ಎಲ್ಲರೂ ಪಾಲಿಸಿದರೆ ಬಹುಶಃ ಇನ್ನೂ ನೂರು ವರ್ಷಕ್ಕಾದರೂ ಈ ನೀರಿನ ಸಮಸ್ಯೆ ಬರುವುದಿಲ್ಲವೆಂದು ಹೇಳುತ್ತಾರೆ. ಯಾವ ಮರಳುಗಾಡಿನಿಂದ ಕೂಡಿರುವಂಥ ಇಸ್ರೇಲ್‌ನಲ್ಲಿ ಕುಡಿಯುವ ನೀರು ಸಿಗುವುದಿಲ್ಲವೋ ಅಂಥ ಕಡೆ ಕುಡಿಯುವ ನೀರನ್ನು ಅವರು ಹೇಗೆ ಉತ್ಪಾದನೆ ಮಾಡಿಕೊಂಡಿದ್ದಾರೆ, ಸಮುದ್ರದ ನೀರನ್ನು ಡೀಸ್ಯಾಲಿನೇಟ್ ಮಾಡಿ ಉಪಯೋಗಿಸುತ್ತಿದ್ದಾರೆ, ಮತ್ತು ಸ್ವಲ್ಪವಿರುವ ನೀರನ್ನೇ ಡ್ರಿಪ್ ಇರಿಗೇಷನ್ ಮತ್ತೊಂದು ಪದ್ಧತಿಯನ್ನು ಜಾರಿಗೆ ತಂದು ಅವರು ಎಷ್ಟು ಚೆನ್ನಾಗಿ ಬಳಸಿಕೊಂಡಿದ್ದಾರೆ. ಅದನ್ನು ನಾವು ಜಾರಿಗೆ ತಂದರೆ ಡ್ರೌಟ್ ಬರತಕ್ಕ ಸಂದರ್ಭಗಳೇ ಬಹುಶಃ ಬರುವುದಿಲ್ಲವೇನೋ ಎಂಬುದು ನನ್ನ ಅನಿಸಿಕೆ. ನಮ್ಮಲ್ಲಿ ಕೆಲವು ಜನ ಸ್ನೇಹಿತರು ಇಸ್ರೇಲ್‌ಗೆ ಹೋಗಿ ಬಂದಿದ್ದಾರೆ. ನನಗೆ ಗೊತ್ತಿರುವಂತೆ ಶ್ರೀಮಾನ್ ಬೈರೇಗೌಡರು, ಹೋದ ಸಾರಿ ಅವರು ಕೃಷಿ ಸಚಿವರಾಗಿದ್ದಾಗ ಇಸ್ರೇಲ್‌ಗೆ ಹೋಗಿದ್ದರು

ಎನ್ನತಕ್ಕ ಮಾತನ್ನು ಕೇಳಿದ್ದೇನೆ. ಇವರು ಅಲ್ಲಿಂದ ಬಂದ ತಕ್ಷಣವೇ ಪೇಪರ್ ನಲ್ಲೋ ಎಲ್ಲೋ ಒಂದು ಸ್ಟೇಟ್ ಮೆಂಟ್ ಕೊಟ್ಟಿದ್ದಾರೆ. ಅದೇನೂ ಕೆಟ್ಟ ಸ್ಟೇಟ್‌ಮೆಂಟ್ ಅಲ್ಲ. ಕೆ.ಆರ್.ಎಸ್. ಅಂಥದ್ದು ಒಂದೇ ಒಂದು ಇಸ್ರೇಲ್‌ನಲ್ಲಿದ್ದರೆ ಇಡೀ ಇಸ್ರೇಲ್ ತುಂಬಾ ನೀರನ್ನೇ ಹರಿಸುತ್ತಿದ್ದರು, ಹಸಿರು ಮಾಡಿಬಿಡುತ್ತಿದ್ದರು ಎನ್ನತಕ್ಕ ಮಾತನ್ನು ಹೇಳುತ್ತಾರೆ. ನಾವೇನು ಕೆ.ಆರ್.ಎಸ್.ನ. ನೀರನ್ನು ವೇಸ್ಟ್ ಆಗಿ ಉಪಯೋಗಿಸುತ್ತಿದ್ದೇವೆ, ಯಾವ ಬೆಳೆಗೆ ಎಷ್ಟು ಉಪಯೋಗಿಸಬೇಕೋ ಅಷ್ಟನ್ನು ಉಪಯೋಗಿಸದೆ, ಅನಾವಶ್ಯಕವಾಗಿ ಹೆಚ್ಚಿಗೆ ಉಪಯೋಗಿಸುತ್ತಿದ್ದೇವೆ, ಅದನ್ನು ಏನಾದರೂ ಇಸ್ರೇಲ್ ಟೈಪ್ ರೀತಿಯಲ್ಲಿ ಡ್ರಿಪ್ ಇರಿಗೇಷನ್ ಆಧಾರದ ಮೇಲೆ ಮಾಡಿದ್ದರೆ ಈಗೇನು ಎರಡೂವರೆ ಲಕ್ಷ ಎಕರೆ ನೀರಾವರಿ ಮಾಡುತ್ತಿದ್ದೇವೆ ಅಷ್ಟೇ ಅಲ್ಲಾ ಅದರಲ್ಲಿ ಹತ್ತು, ಇಪ್ಪತ್ತು ಲಕ್ಷ ಎಕರೆ ನೀರಾವರಿ ಮಾಡಬಹುದಿತ್ತು ಎನ್ನತಕ್ಕ ಮಾತನ್ನು ಶ್ರೀ ಬೈರೇಗೌಡರು, ಕೃಷಿ ಸಚಿವರಾಗಿ ಹೇಳಿರುವುದನ್ನು ನಾನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುತ್ತೇನೆ. ಏಕೆಂದರೆ, ಅಲ್ಲಿ ಹೋದ ಅವರು ಅದನ್ನಾದರೂ ತಿಳಿದುಕೊಂಡು ಬಂದು ಹೇಳಿದರು. ಆದರೆ ಅದನ್ನು ಜಾರಿಗೆ ತರಲಿಲ್ಲ. ನೋಡಿದರು, ಬಂದರು, ಹೇಳಿಬಿಟ್ಟರು, ಮುಂದೆ ಅದು ಜಾರಿಗೆ ಬರಲಿಲ್ಲ. ಅಂದರೆ ನಮ್ಮಲ್ಲಿ ಫಾರಿನ್‌ಗೆ ಹೋಗುತ್ತೇವೆ ನೋಡುತ್ತೇವೆ ಬರುತ್ತೇವೆ, ಜಾರಿಗೆ ತರುವುದು ಬಹಳ ಕಡಿಮೆ ಎಂದಾಯಿತು. ಆದ್ದರಿಂದ ನಾವೆಲ್ಲಾ ಮುಖ್ಯಮಂತ್ರಿಗಳ ಮೇಲೆ ಒತ್ತಡ ತರುತ್ತಿದ್ದೇವೆ, ಮುಂದೆ ಫಾರಿನ್ ಟ್ರಿಪ್‌ಗಳಿಗೆ ನಮ್ಮ ಶಾಸಕರಿಗೆ ಅವಕಾಶ ಮಾಡಿಕೊಡಿ ಎಂದು. ಏಕೆಂದರೆ ಹೊಸ ವಿಚಾರವನ್ನು ನೋಡಬೇಕೆಂದು, ಹೇಳಿ, ನಮಗೆ ಯಾವ ಚಪಲದಿಂದೇನು ಹೋಗಬೇಕೆಂಬ ಇಚ್ಛೆ ನಮಗಿಲ್ಲ. ಆದರೆ ಹೊಸ ವಿಚಾರ, ನಮ್ಮ ಲುಕ್ ಮಾಡ್ರನ್ ಔಟ್ ಲುಕ್ ಆಗಲಿ ಎನ್ನತಕ್ಕ ದೃಷ್ಟಿಯಿಂದ ಅದನ್ನು ಕೇಳಬೇಕು ಎನ್ನತಕ್ಕ ವಿಚಾರ ಮಾಡಿದ್ದೇನೆ. ಕೊನೆಯದಾಗಿ, ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ವಿಚಾರದಲ್ಲಿ ಕಂಗ್ರ್ಯಾಜ್ಯುಲೇಷನ್ ಹೇಳಬೇಕಾಗುತ್ತದೆ. ವಾಟರ್ ಸಮಸ್ಯೆಯನ್ನೇ ಕಂಟ್ರೋಲ್ ಮಾಡುವ ಬಗ್ಗೆ ಒಬ್ಬರು ಮಂತ್ರಿಯವರನ್ನು ಅವರು ಮಾಡಿದ್ದಾರೆ. ಮಾನ್ಯ ಕೋಳಿವಾಡ್ ಸಚಿವರೇನಿದ್ದಾರೆ ಅವರ ಕೆಲಸವೇ ಕುಡಿಯುವ ನೀರಿನ ಯೋಜನೆ, ತೊಂದರೆಯಾದರೆ ನೋಡಿಕೊಳ್ಳುವುದೇ ಕೆಲಸ. ಇದಕ್ಕೋಸ್ಕರವೇ ಅವರನ್ನು ಮಾಡಿದ್ದಾರೆ. He is managing also to some extent. ನಾವು ಸುಮ್ಮನೆ ಹೇಳಬಾರದು. ಎಲ್ಲವನ್ನೂ ಮಾಡಿ ಬಿಟ್ಟಿದ್ದಾರೆಂದಲ್ಲಾ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಕೋಳಿವಾಡ್ ರವರನ್ನು ಅಪಾಯಿಂಟ್ ಮಾಡಿದ ಮೇಲೆ ಎಲ್ಲಾ ಶಾಸಕರಿಗೂ ಪತ್ರವನ್ನು ಬರೆದು ಕುಡಿಯುವ ನೀರಿನ ಬಗ್ಗೆ ಕೆಲವು ವಿಚಾರಗಳು, ಸಲಹೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ಸಲಹೆಯನ್ನು ಕೇಳಿದ್ದಾರೆ. ಶ್ರೀಮಾನ್ ಕೋಳಿವಾಡ್ ರವರನ್ನು ಕುಡಿಯುವ ನೀರಿನ ಬಗ್ಗೆಯೇ ಯೋಜನೆ ಮಾಡಿದ್ದಾರೆ, ಸ್ವಲ್ಪ ಯೋಜನೆಗಳನ್ನು ಅವರು ಜಾರಿಗೆ ತಂದರೆ ಬಹುಶಃ ಅದು ಯಶಸ್ವಿಯಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ನಾನು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಅವರನ್ನು ಹೊಗಳಬೇಕು ಎಂದು ನನಗೇನಿಲ್ಲ. ಅವರನ್ನು ಹೊಗಳಿ ನಾನೇನು ತೆಗೆದುಕೊಳ್ಳಬೇಕಾಗಿಲ್ಲ. ರೈಲಾನ್ ಸಿದ್ಧಿಯಲ್ಲಿ ಮಹಾರಾಷ್ಟ್ರದಲ್ಲಿ ಅಣ್ಣಾ ಹಜಾರೆ ಎಂದು ಇದ್ದಾರೆ, ವಿಶೇಷವಾಗಿ ಅಭಾವ ಪರಿಸ್ಥಿತಿ ಇರತಕ್ಕ ಪ್ರದೇಶದಲ್ಲಿದ್ದಂಥ ಅಣ್ಣಾಹಜಾರೆ ಯವರು ಮಾಡಿದಂಥ ಸ್ಕೀಮ್ ಗಳನ್ನು ಕರೆದುಕೊಂಡು ಹೋಗಿ ತೋರಿಸಿದರು. ಇಪ್ಪತ್ತು ಮೂವತ್ತು ಜನ ಶಾಸಕರು ಜೊತೆಯಲ್ಲಿ ಬಂದಿದ್ದರು. ಅವರೆಲ್ಲರೂ ಅದನ್ನು ನೋಡಿದ್ದಾರೆ.

ಅಲ್ಲಿ ಹೋದಾಗ ಅಣ್ಣಾ ಹಜಾರೆಯವರ ಸ್ಕೀಮ್ ನ್ನು ನೋಡಿದಾಗ, ನನಗೆ ನಮ್ಮ ದೇಶದಲ್ಲೂ ಇಂಥವರು ಇದ್ದಾರೆ, ನಾವೇನು ಇಸ್ರೇಲ್‌ಗೆ ಹೋಗಬೇಕಾಗಿಲ್ಲ, ಇಲ್ಲೇ ಇಸ್ರೇಲ್‌ನ ಮಕ್ಕಳು, ಮೊಮ್ಮಕ್ಕಳುಗಳೆಲ್ಲಾ ಇದ್ದಾರೆ, ಆದರೆ ಅದರಂತೆ ಇಲ್ಲಿ ಮಾಡುವವರು ಯಾರೂ ಇಲ್ಲವೆಂದು ನನಗನ್ನಿಸಿತು. ಆ ಅಣ್ಣಾ ಹಜಾರೆಯವರು ಎಂಥ ಅದ್ಭುತವಾದ ಸ್ಕೀಮ್‌ನ್ನು ಮಾಡಿದ್ದಾರೆಂದರೆ ರೈಲಾನ್‌ಸಿದ್ಧಿ ಎನ್ನತಕ್ಕ ಒಂದು ಗ್ರಾಮದಲ್ಲಿ ಇದ್ದಂಥ ಜನ ಹತ್ತು ವರ್ಷಗಳ ಹಿಂದೆ ಅಲ್ಲಿ ಕೂಲಿ ಸಿಗದೆ, ನೀರು ಸಿಗದೆ, ಊಟಕ್ಕೆ ಸಿಗದೆ ಒದ್ದಾಡಿಕೊಂಡು ಬಾಂಬೆಗೆ ಸ್ಲಮ್‌ಗಳಲ್ಲಿ ವಾಸ ಮಾಡಲು ಹೋಗುತ್ತಿದ್ದರಂತೆ. ಬಾಂಬೆಯ ಸ್ಲಮ್‌ಗಳಲ್ಲಿ ವಾಸ ಮಾಡತಕ್ಕ ಜನ ಈ ಊರಿನಿಂದ ತೊಂಭತ್ತು ಪರ್‌ಸೆಂಟ್ ಮೈಗ್ರೇಟ್ ಆಗಿ ಬಿಟ್ಟಿದ್ದಾರಂತೆ. ಆ ಜನರ ಪರಿಸ್ಥಿತಿಯನ್ನು ನೋಡಿದ ಇವರು, ಆ ರೈಲಾನ್ ಸಿದ್ಧಿ ಗ್ರಾಮದಲ್ಲಿ ಮಳೆಯೇ ಆಗುವುದಿಲ್ಲ, ಕುಡಿಯಲು ನೀರೇ ಇಲ್ಲ ಎನ್ನತಕ್ಕ ಊರಿನಲ್ಲಿ ನಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತಾರೆ, ಕೆರೆಗಳಲ್ಲಿ ನೀರು ಇದೆ, ಹಸಿರು ಇದೆ, ಮೇವು ಇದೆ, ನನಗೆ ಅದನ್ನು ನೋಡಿ ಆಶ್ಚರ್ಯವಾಯಿತು. ರಸ್ತೆಯ ಪಕ್ಕದಲ್ಲಿ ಮರಗಳನ್ನು ಹಾಕಿದ್ದಾರೆ, ಎಂಥ ಅದ್ಭುತವಾದಂಥ ಕೆಲಸವೆಂದರೆ, ಬಹುಶಃ ಆ ಅಣ್ಣಾ ಹಜಾರೆಯವರ ಕೆಲಸವನ್ನು ಎಲ್ಲಾ ಕಡೆ ಮಾಡಿಬಿಟ್ಟರೆ, ನಮ್ಮ ಉತ್ತರ ಕರ್ನಾಟಕದಲ್ಲೋ, ಮತ್ತೊಂದು ಕಡೆಯೋ ಕುಡಿಯುವ ನೀರಿನ ದೌರ್ಭಾಗ್ಯವೇನಿದೆಯೋ ಅದಕ್ಕಿಂತ ಅದ್ಭುತವಾದ ಕೆಲಸವನ್ನು ಮಾಡಲು ಆಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಣ್ಣಾ ಹಜಾರೆಯವರ ಉದಾಹರಣೆಯನ್ನೇನು ನೋಡಿದ್ದೇವೆ ಅದನ್ನು ಹೆಚ್ಚಿನ ರೀತಿಯಲ್ಲಿ ಸರ್ಕಾರ ಜಾರಿಗೆ ತರಲಿ ಎನ್ನತಕ್ಕ ಮಾತನ್ನು ಹೇಳುತ್ತಾ, ಬರಗಾಲದ ಪರಿಸ್ಥಿತಿಯನ್ನು ಎದುರಿಸುವಲ್ಲಿ ಎದುರಿಸುವಲ್ಲಿ ನಮ್ಮ ಸರ್ಕಾರವೇನೂ ಹಿಂದೆ ಬಿದ್ದಿಲ್ಲ. ಸಾಕಷ್ಟು ಕೆಲಸ ಮಾಡಿದ್ದಾರೆ. ನಾವು ಇವತ್ತು ಸದನದಲ್ಲಿ ಒಂದು ರೆಸಲ್ಯೂಷನ್ ಮಾಡಬೇಕು. ಏನೆಂದರೆ ಮಾಡಬೇಕೆಂದರೆ, ಬರ ಕಾರ್ಯಕ್ರಮದಲ್ಲಿ ಕೇಂದ್ರದವರು ನಮಗೇನು ಆಹಾರಧಾನ್ಯವನ್ನು ಕೊಡುತ್ತಿದ್ದಾರೆ ಆ ಕಾಂಪೊನೆಂಟ್‌ನ್ನು ಕೊಡುವುದರಲ್ಲಿ ಕೆಲವೊಂದು ಕಂಡೀಷನ್ಸ್ ಹಾಕಿದ್ದಾರೆ. ಅಸೆಟ್ ಇರಬೇಕು, ಕೂಲಿಗೆ ಇದನ್ನು ಕೊಡಬೇಕು, ಕೂಲಿಗಾಗಿ ಕಾಳು ಇದು, ಹೀಗೆಲ್ಲಾ ಕಂಡೀಷನ್ಸ್ ಇದೆ. ಆ ಕಂಡೀಷನ್ಸ್‌ನ್ನು ಬಿಟ್ಟು ಈಗ ವಾಸ್ತವಿಕವಾಗಿ ನಡೆಯುತ್ತಿರುವ ಆಧಾರದ ಮೇಲೆ ಈ ಪಾಲಿಸಿಗಳನ್ನು ಪ್ರಿನ್ಸಿಪಲ್ಸ್‌ಗಳನ್ನು ಬದಲಾಯಿಸಿ ಕೊಡಬೇಕೆಂದು ನಾವು ಕೇಳಬೇಕಾಗುತ್ತದೆ. ಇವತ್ತು ಬರ ಕಾರ್ಯಕ್ರಮದಲ್ಲಿ ಬಂದಂಥದ್ದನ್ನು ಕೆಲವು ಭಾಗ ಹಣ ಕೊಡುತ್ತಿದ್ದೇವೆ. ಕೆಲವು ಭಾಗವನ್ನು ಆಹಾರಧಾನ್ಯದ ರೂಪದಲ್ಲಿ ಕೊಡುತ್ತಿದ್ದೇವೆ. ಆದರೆ ಆಂಧ್ರ ಪ್ರದೇಶದಲ್ಲಿ ಕೇವಲ ಹತ್ತು ಕೆ.ಜಿ. ಅಕ್ಕಿ ಕೊಟ್ಟುಬಿಡುತ್ತಾರೆ. ಅಲ್ಲಿ ಹಣವನ್ನು ಕೊಡುವ ಪ್ರಶ್ನೆ ಇಲ್ಲವೇ ಇಲ್ಲ. ಹತ್ತು ಕೆ.ಜಿ.ಗೆ ಬೇಕಾದಷ್ಟು ಜನ ಕೆಲಸ ಮಾಡುತ್ತಾರೆ ಎನ್ನತಕ್ಕ ಮಾತು ಅದು. ಮಹಾರಾಷ್ಟ್ರದಲ್ಲಿ ಅಸೆಟ್ ಕ್ರಿಯೇಟ್ ಮಾಡುವುದಕ್ಕೆ ಆಯಾಯ ರಾಜ್ಯ ಸರ್ಕಾರಗಳಿಗೆ ಅಥರೈಸ್ ಮಾಡಿಬಿಟ್ಟಿದ್ದಾರೆ. ಏಕೆಂದರೆ ಅವರು ಆ ರೀತಿ ರೆಸಲ್ಯೂಷನ್ ಮಾಡಿ ಅವಕಾಶವನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕ ಮಾತನ್ನು ಕೇಳಿದ್ದೇನೆ. ಆದ್ದರಿಂದ ಮಾನ್ಯ ಸ್ನೇಹಿತರೆಲ್ಲರೂ ಒಪ್ಪುವುದಾದರೆ ನಾವೂ ನಮ್ಮ ರಾಜ್ಯದಲ್ಲಿ ಆ ರೀತಿ ರೆಸಲ್ಯೂಷನ್‌ನ್ನು ಮಾಡಿ ಕೇಂದ್ರ ಸರ್ಕಾರದವರು ಈ ಬಗ್ಗೆ ಇರ ತಕ್ಕಂಥ ಕಠಿಣವಾದ ನಿಲುವನ್ನು ಸಡಿಲ ಮಾಡಿ ಬರ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ ಪೂರ್ಣವಾಗಿ ನಮ್ಮ ರಾಜ್ಯ ಸರ್ಕಾರಕ್ಕೇ ಅಧಿಕಾರವನ್ನು ಕೊಡಬೇಕು ಎಂಬುದರ ಬಗ್ಗೆ ಕೇಳಬೇಕೆಂಬ ಮನಸ್ಸಿನಿಂದ ಈ

ಸಂದರ್ಭದಲ್ಲಿ ಎಲ್ಲರ ಮೂಲಕ ಮಾಡಿಕೊಳ್ಳುತ್ತೇನೆ. ಇನ್ನು ನದಿಗಳ ಬಗ್ಗೆ ಹೇಳುವುದಾದರೆ, ನದಿಗಳಿಗೆ ನೀರೇನು ಹರಿದು ಹೋಗುತ್ತದಲ್ಲಾ ಅದಕ್ಕೆ ಎಲ್ಲೋ ಒಂದು ಕಡೆ ಖಂಡಿ ಯೋಜನೆಯೆಂದು ಮಾಡಿದ್ದಾರೆ, ಅದರ ಬಗ್ಗೆ ನನಗೆ ಗೊತ್ತಿಲ್ಲ, ಕರಾವಳಿಯಲ್ಲಿರುವ ನನ್ನ ಸ್ನೇಹಿತರು ಇದರ ಬಗ್ಗೆ ಹೇಳಬೇಕು. ಆ ನೀರು ಸಮುದ್ರಕ್ಕೆ ಹಾದು ಹೋಗದಂತೆ ಖಂಡಿ ಯೋಜನೆಯೆಂದೇನೋ ನದಿಗಳನ್ನು ಲಿಂಕ್ ಮಾಡಲಿಕ್ಕೆ ಯೋಜನೆ ಮಾಡಿದ್ದಾರಂತೆ. ಅದು ಆದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಬರ ಕಡಿಮೆಯಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಾ ಬರ ಕಾರ್ಯಕ್ರಮವನ್ನೇನು ನಮ್ಮ ಮಾನ್ಯ ಕೃಷ್ಣರವರ ನೇತೃತ್ವದಲ್ಲಿನ ಸರ್ಕಾರ ಜಾರಿ ಗೊಳಿಸುತ್ತಿದೆ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಚುರುಕುಗೊಳಿಸಿಕೊಂಡು ಕೆಲಸ ಮಾಡಿದರೆ ಬರ ಎದುರಿಸುವುದರಲ್ಲೇನೂ ಕಷ್ಟವಾಗಲಾರದು, 1964ನ ಬರಗಾಲದ ಪರಿಸ್ಥಿತಿಯನ್ನು ನೋಡಿದರೆ ಈ ಸಾರಿಯ ಬರ ಬಹಳ ಕಡಿಮೆ, ಅದರ ಸಿವಿರಿಟಿಯನ್ನು ಕಂಪೇರ್ ಮಾಡಿದರೆ ಇದು ಶೇಕಡ 25 ಭಾಗವಾಗುತ್ತದೆ. ಇದನ್ನು ಟ್ಯಾಕಲ್ ಮಾಡಬಹುದು ಎಂಬ ಆಶ್ವಾಸನೆಯನ್ನು ಇಟ್ಟುಕೊಂಡು, ಇವತ್ತು ಈ ಸಂದರ್ಭದಲ್ಲಿ ಬರದ ಬಗ್ಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

+ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದ ಬರಗಾಲದ ಬಗ್ಗೆ ಈಗಾಗಲೇ ಅನೇಕ ನಾಯಕರು ಮಾತನಾಡಿದ್ದಾರೆ, ಬಹುಶಃ ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಕಾಣುತ್ತಿರುವ ಬರಗಾಲ ಹಿಂದೆ ಎಂದೂ ಕಂಡರಿಯದ ಬರಗಾಲವೆಂದರೆ ತಪ್ಪಾಗಲಾರದು. ಏಕೆಂದರೆ, ಇದೇ ವರ್ಷದಲ್ಲಿಯೇ ಬಂದಂಥ ಬರಗಾಲವಲ್ಲ. ಕಳೆದ ವರ್ಷ ಸಹ ಎಂದೂ ಕಾಣದಿದ್ದಂಥ ಬರಗಾಲವೆಂದು ಹೇಳುತ್ತಿದ್ದೆವು. ಅದರ ಹಿಂದಿನ ವರ್ಷವೂ ಬರಗಾಲವಿತ್ತು. ಸತತವಾಗಿ ಮೂರು ವರ್ಷಗಳಿಂದ ರಾಜ್ಯದಲ್ಲಿ ಬರಗಾಲವನ್ನು ಕಾಣುತ್ತಿದ್ದೇವೆ. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇವತ್ತು ಬರಗಾಲವಿದೆ ಎನ್ನುವುದನ್ನು ಸರ್ಕಾರ ಒಪ್ಪಿಕೊಂಡು ಕಾರ್ಯಕ್ರಮವನ್ನು ಮಾಡುತ್ತಿದೆ. ಆದರೆ, ಬರಗಾಲವನ್ನು ಎದುರಿಸುವಲ್ಲಿ ಸರ್ಕಾರವೇನು ವಿಫಲವಾಗಿದೆ ಎನ್ನುವುದರ ಬಗ್ಗೆ ಎಲ್ಲಾನಾಯಕರು ಈಗಾಗಲೇ ಹೇಳಿದ್ದಾರೆ. ಎಷ್ಟೊಂದು ಯುದ್ಧೋಪಾದಿಯಲ್ಲಿ ಇವತ್ತು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ಪ್ರಕಾರ ಪ್ರತಿಯೊಂದು ಕ್ಷೇತ್ರದಲ್ಲಿ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಇವತ್ತು ನಡೆಯುತ್ತಿಲ್ಲ ಎನ್ನುವಂತಹ ವಿಚಾರಗಳ ಬಗ್ಗೆ ಅನೇಕ ನಾಯಕರು ಇಲ್ಲಿ ಮಾತನಾಡಿದ್ದಾರೆ. ಈ ದಿಸೆಯಲ್ಲಿ ಇವತ್ತು ರೈತ ಬಹಳ ಕಂಗಾಲಾದಂತಹ ಪರಿಸ್ಥಿತಿಯಲ್ಲಿದ್ದಾನೆ. ರೈತನ ಮೇಲೆ ಅವಲಂಬನೆ ಆದಂತಹ ಕೂಲಿಕಾರರಂತೂ ಹೇಳುವಂತಹ ಸ್ಥಿತಿಯಲ್ಲಿಲ್ಲ. ಅವರೆಲ್ಲಾ ಈಗ ವಲಸೆ ಹೋಗುತ್ತಿದ್ದಾರೆ. ಈಗ ರೈತನಿಗೆ ಅವನು ಜೋಪಾನ ಮಾಡುವಂತಹ ಅಥವಾ ಅವನ ಕೃಷಿಗೆ ಸಹಾಯ ಮಾಡುವಂತಹ ದನಕರುಗಳ ಸ್ಥಿತಿಯಂತೂ ಹೇಳಲಿಕ್ಕೆ ಬಾರದಂತಹ ದುಸ್ಥಿತಿಯಲ್ಲಿವೆ. ದನಕರುಗಳನ್ನು ಕೈಗೆ ಬಂದಂತಹ ಬೆಲೆಗೆ ಮಾರಾಟ ಮಾಡಿ ಉಪ ಜೀವನ ಮಾಡುವಂತಹ ಸ್ಥಿತಿಗೆ ಇವತ್ತು ರೈತ ಬಂದಿದ್ದಾನೆ. ಇದಕ್ಕೆ ಮುಖ್ಯ ಕಾರಣ, ಕಳೆದ ಮೂರು ವರ್ಷದಿಂದ ಸತತವಾಗಿ ಕರ್ನಾಟಕ ರಾಜ್ಯದಲ್ಲಿ ಬರಗಾಲವನ್ನು ನಾವು ಅನುಭವಿಸುತ್ತಿದ್ದೇವೆ. ಸರ್ಕಾರ ಇವತ್ತು ಏನು ಕೇಂದ್ರದಿಂದ ಸಹಾಯವನ್ನು ಪಡೆದುಕೊಂಡಿದೆ. ಕೇಂದ್ರವು ಹಣದ ಸಹಾಯವನ್ನು ಮಾಡಿದೆ, ಹಾಗೂ ಕೂಲಿಗಾಗಿ ಕಾಳು ಕೊಡಲಿಕ್ಕೆ ಕಾಳಿನ ಸಾಕಷ್ಟು ಸಹಾಯವನ್ನು ಮಾಡಿದೆ.

ಆದರೆ ಅದರ ಪ್ರಯೋಜನ ಪ್ರತಿಯೊಂದು ತಾಲ್ಲೂಕಿನಲ್ಲಿ ಮತ್ತು ಪ್ರತಿಯೊಂದು ಕ್ಷೇತ್ರದಲ್ಲಿ ಎಷ್ಟೊಂದು ಯುದ್ಯೋಪಾದಿಯಲ್ಲಿ ನಡೆಯಬೇಕಾಗಿತ್ತೋ ಅದು ನಡೆದಿಲ್ಲ ಎನ್ನುವುದರ ಬಗ್ಗೆ ಎಲ್ಲಾ ನಾಯಕರು ಇವತ್ತು ಮಾತನಾಡಿದ್ದಾರೆ. ಇವತ್ತು ನೋಡಿ, ಎಲ್ಲಾ ಕಡೆಗೆ ಎಲ್ಲೆಲ್ಲೂ ಕಾಣದಂತಹ ರೀತಿಯಲ್ಲಿ ಜಲ ಬತ್ತಿದೆ, ಅಂದರೆ ಕುಡಿಯಲಿಕ್ಕೆ ನೀರಿಲ್ಲ. ಇವತ್ತು ಬೆಳೆ ಹಾಳಾಗಿದೆ, ಮುಂಗಾರು ಬೆಳೆ ಇಲ್ಲ, ಹಿಂಗಾರು ಬೆಳೆ ಇಲ್ಲ, ಹೋದ ವರ್ಷ ಕರ್ನಾಟಕ ರಾಜ್ಯದಲ್ಲಿ ಇದ್ದಂತಹ ಬರಗಾಲವನ್ನು ನಾವು ನೋಡಿದಾಗ ಎಲ್ಲೋ ಕೆಲವು ಕಡೆ ಅಲ್ಪ ಸಲ್ಪವಾದರೂ ಮಳೆಯಾಗಿ ಕೆಲವು ಕಡೆ ಬೆಳೆ ಬಂದಿತ್ತು. ಆದರೆ ಆ ಸಲ ಏನೇ ಬಿತ್ತಿದರೂ ಆ ಬಿತ್ತಿದ ಕಾಳನನ್ನೂ ಸಹಿತ ಇವತ್ತು ರೈತ ಕಳೆದುಕೊಂಡಿದ್ದಾನೆ. ಅವನು ಮಾಡಿದಂತಹ ವ್ಯವಸಾಯದ ಎಲ್ಲಾ ಖರ್ಚು ವೆಚ್ಚ ಇವತ್ತು ಮೈಮೇಲೆ ಬಂದಿದೆ. ಇವತ್ತು ಅವನು ಸಾಲಗಾರನಾಗಿ ಅಲೆದಾಡುವಂತಹ ಪರಿಸ್ಥಿತಿಗೆ ಬಂದಿದ್ದಾನೆ. ಈಗಾಗಲೇ ಎಷ್ಟೋ ಜನ ರೈತರು ಅವರ ಈ ಬಡತನ ಅಥವಾ ಈ ಬರಗಾಲವನ್ನು ತಾಳಲಾರದೆ ಇವತ್ತು ವಿಷ ತೆಗೆದುಕೊಂಡಂತಹ ಸಂಗತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು ನಾವು ಕಾಣುತ್ತಿದ್ದೇವೆ. ಬಹುಶಃ ಅಂಕಿ ಸಂಖ್ಯೆಯಿಂದ ನಾವು ಕೆಲವೇ ಜನರು ಇವತ್ತು ಸತ್ತಿದ್ದಾರೆ ಎನ್ನಬಹುದು. ನಮ್ಮ ಇವತ್ತು ಅಂಕಿ ಸಂಖ್ಯೆಗಳು ಸರಿಯಾದ ಪ್ರಮಾಣದಲ್ಲಿ ಇಲ್ಲ. ಅಷ್ಟೊಂದು ಜನ ಈ ಒಂದು ಬಡತನವನ್ನು ಬರಗಾಲದಲ್ಲಿ ಅನುಭವಿಸುತ್ತಿದ್ದಾರೆ. ಎಷ್ಟೋ ಜನ ನಮ್ಮ ನಗರಗಳಿಗೆ ಕೂಲಿಗಾಗಿ ಬರುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೇ ಅಲ್ಲ, ಬೇರೆ ಬೇರೆ ರಾಜ್ಯಗಳಿಗೆ ಸಹಿತ ಕೂಲಿಗಾಗಿ ಬಡ ಜನರು ಹೋಗುತ್ತಿರುವಂತಹ ಪರಿಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಯಾವ ಮಲೆನಾಡಿನ ಸೆರಗು ಎಂದು ಹೇಳುತ್ತೇವೋ ಅಂತಹ ಕಡೆಯಲ್ಲೂ ಸಹಿತ, ಅಂದರೆ ಕೊಡಗಿನಲ್ಲೂ ಇವತ್ತು ಏನು ಮಹಾ ನದಿ ಹುಟ್ಟುತ್ತದೆ, ಅಲ್ಲಿ ಸಹಿತ ಕುಡಿಯುವ ನೀರಿನ ಕಷ್ಟವನ್ನು ನಾವು ಕಾಣುತ್ತಿದ್ದೇವೆ. ನಮ್ಮ ಧಾರವಾಡ ಜಿಲ್ಲೆ, ಬಹುಶಃ ನಿಮ್ಮ ಹಾನಗಲ್ ಮತ್ತು ಹಾವೇರಿ ಜಿಲ್ಲೆಯಲ್ಲಿ ಬರುವಂತಹ ಮಲೆನಾಡಿನ ಪ್ರದೇಶವಾದ ಶಿಗ್ಗಾಂವದಲ್ಲಿ ಈಗಾಗಲೇ ತಮಗೆ ಗೊತ್ತಿರುವಂತೆ ಕುಡಿಯುವ ನೀರಿನ ಅಭಾವದಿಂದ ಇವತ್ತು ಒಂದು ರೂಪಾಯಿಗೆ ಒಂದು ಕೊಡ ನೀರು ಅಲ್ಲಿ ಮಾರುವಂತಹ ಪರಿಸ್ಥಿತಿ ಬಂದಿದೆ. ಒಂದು ರೂಪಾಯಿ ಕೊಟ್ಟು ಒಂದು ಕೊಡ ನೀರು ತೆಗೆದುಕೊಳ್ಳುವಂತಹ ಒಂದು ಸ್ಥಿತಿ ಇವತ್ತು ಅಲ್ಲಿ ಬಂದಿದೆ. ಆ ಬಗ್ಗೆ ಟಿ.ವಿಯಲ್ಲಿ ಮತ್ತು ಪತ್ರಿಕೆಗಳಲ್ಲಿ ಹಾಗೂ ಎಲ್ಲಾ ಕಡೆಗಳಲ್ಲಿ ವರದಿಯಾಗಿದೆ. ಇಂತಹ ಒಂದು ಬರಗಾಲವನ್ನು ಇವತ್ತು ಕರ್ನಾಟಕ ರಾಜ್ಯ ಅನುಭವಿಸುತ್ತಿದೆ. ಕೊಟ್ಟಂತಹ ಕಾಳು ಸದುಪಯೋಗವಾಗಲಿಲ್ಲ, ಅಥವಾ ಸರಿಯಾದ ರೀತಿಯಲ್ಲಿ ಕೆಲಸಗಳು ನಡೆದಿಲ್ಲ, ಹಾಗೂ ಕಾಳನ್ನು ಏನು ಜನರ ಕೈಗೆ ಕೊಟ್ಟು ಕೆಲಸ ಮಾಡಿಸಿ ಅವರ ಉಪ ಜೀವನಕ್ಕೆ ಸಹಾಯ ಮಾಡಬೇಕಾಗಿತ್ತು. ಆ ಕೆಲಸವನ್ನು ಇವತ್ತು ಸರ್ಕಾರ ಮಾಡಿಲ್ಲ. ಕೂಲಿ ಇಲ್ಲದಂತಹ ಜನರಿಗೆ ಸರ್ಕಾರ ಸಹಾಯ ಮಾಡಿಲ್ಲ. ಹೊಲದಲ್ಲಿ ಉತ್ಪಾದನೆ ಇಲ್ಲದೇ ರೈತನೂ ಸಹಿತ ಇವತ್ತು ಕೂಲಿ ಮಾಡುವಂತಹ ಸ್ಥಿತಿಗೆ ಬಂದಿದ್ದಾನೆ. ಇವತ್ತು ಯಾವ ರೈತ ಅನೇಕ ಜನರಿಗೆ ಹೊಟ್ಟೆಗೆ ಅನ್ನವನ್ನು ಕೊಟ್ಟು ಅಂತಹ ಜನರ ಕಷ್ಟಗಳಿಗೆ ಸಲಹುತ್ತಿದ್ದವನಿಗೆ ಇವತ್ತು ಅವನೇ ಹೋಗಿ ಮತ್ತೊಂದು ಕಡೆ ಕೂಲಿಗಾಗಿ ಕಾಳು ಬಯಸಿ ಕೆಲಸ ಮಾಡುವಂತಹ ಪರಿಸ್ಥಿತಿ ಬಂದಿದೆ. ಇದರ ಮೇಲೆ ಅವಲಂಬಿತವಾಗಿರುವಂತಹ ಕೂಲಿಕಾರರು ಸಹಿತ ಇವತ್ತು ಅನೇಕ ಕಡೆಗೆ ವಲಸೆ ಹೋಗಿದ್ದಾರೆ. ಇವತ್ತು ಕೂಲಿಗಾಗಿ ಕಾಳು ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತಿದೆ?

ಅನೇಕ ಕಡೆಗಳಲ್ಲಿ ಅದು ಮಾರ್ಕೇಟ್‌ನಲ್ಲಿ ಬಂದು ಮಾರಾಟವಾಗುತ್ತಿದೆ ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ಈ ರೀತಿಯಾದ ಅನೇಕ ಆಪಾದನೆಗಳನ್ನು ಇವತ್ತು ಸರ್ಕಾರದ ಮೇಲೆ ಜನ ಮಾಡುವಂತಹ ಸ್ಥಿತಿಗಳನ್ನು ನಾವು ಕಾಣುತ್ತಿದ್ದೇವೆ. ಇವೆಲ್ಲದಕ್ಕೆಲ್ಲಾ ಮುಖ್ಯವಾಗಿ ಕಾರಣ, ಜಿಲ್ಲಾ ಉಸ್ತುವಾರಿ ಮಂತ್ರಿಗಳು. ಅವರು ಪ್ರತಿಯೊಂದು ಜಿಲ್ಲೆಯಲ್ಲಿ ಸರಿಯಾದಂತಹ ಉಸ್ತುವಾರಿ ಮಾಡಬೇಕಾದಂತಹ ಅಗತ್ಯತೆ ಇತ್ತು. ಅದನ್ನು ಅವರು ಮಾಡಲಿಲ್ಲ. ಆ ಕಾರಣದಿಂದ ಎಷ್ಟೊಂದು ಪರಿಣಾಮಕಾರಿಯಾಗಿ ಬರಗಾಲವನ್ನು ಎದುರಿಸಿ ಜನರಿಗೆ ಸಹಾಯ ಮಾಡಬೇಕಾಗಿತ್ತೋ ಆ ಕಾರ್ಯ ನಡೆದಿಲ್ಲವೆಂದು ಇವತ್ತು ನಾವು ಹೇಳಬೇಕಾಗುತ್ತದೆ. ಹಿಂದೆ ಕೇಂದ್ರದಿಂದ ಬರಗಾಲದ ಸಲುವಾಗಿ ಒಂದು ಟೀಮ್ ಬಂತು. ಆ ಟೀಮ್ ಬರಬೇಕಾದರೆ ಇಲ್ಲಿ ಬರಗಾಲ ಸಾಕಷ್ಟು ಪ್ರಮಾಣದಲ್ಲಿ ಇತ್ತು. ಕೇವಲ ಕರ್ನಾಟಕದಲ್ಲಿ ಅಲ್ಲ, ಇಡೀ ಭಾರತದಲ್ಲೇ ಬರಗಾಲ ಇರುತ್ತದೆ ಎನ್ನುವುದು ಕೇಂದ್ರ ಸರ್ಕಾರಕ್ಕೆ ಗೊತ್ತಿದೆ. ಆ ದೃಷ್ಟಿಯಿಂದಲೇ ಕರ್ನಾಟಕದಲ್ಲಿಯ ಬರಗಾಲವನ್ನು ಅಧ್ಯಯನ ಮಾಡಲಿಕ್ಕೆ ಟೀಮ್‌ವೊಂದನ್ನು ಕೇಂದ್ರದವರು ಕಳುಹಿಸಿಕೊಟ್ಟರು. ಈ ಬರ ಅಧ್ಯಯನ ಮಾಡಲಿಕ್ಕೆ ಬಂದಂತಹಸ ಟೀಮಿನ ಮುಂದೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲೀ ಇತರ ಅಧಿಕಾರಿಗಳಾಗಲೀ ಸರಿಯಾದ ಮಾಹಿತಿ ಕೊಡಲಿಲ್ಲ. ಬರಗಾಲ ಅಧ್ಯಯನ ತಂಡ ಅನೇಕ ಜಿಲ್ಲೆಗಳಲ್ಲಿ ಪ್ರವಾಸ ಮಾಡಿತು. ನಿಜವಾಗಿ ಇರುವಂತಹ ಬರಗಾಲದ ಪರಿಸ್ಥಿತಿಯನ್ನು ಅವರ ಮುಂದೆ ಇಟ್ಟರೇ? ಅನ್ನುವುದನ್ನು ಇವತ್ತು ನೋಡಿದರೆ ಯಾರೂ ಸರಿಯಾದಂತಹ ಮಾಹಿತಿಯನ್ನು ಕೇಂದ್ರದ ಟೀಮಿನ ಮುಂದೆ ಇಡಲಿಲ್ಲ, ಬರಗಾಲದ ಸಂಪೂರ್ಣ ಚಿತ್ರವನ್ನು ಅವರಿಗೆ ಸರಿಯಾಗಿ ಕೊಡಲಿಲ್ಲ. ಸರಿಯಾದ ಚಿತ್ರ ಕೊಟ್ಟಿದ್ದರೆ ಕೇಂದ್ರ ಸರ್ಕಾರ ತಾವು ಕೇಳಿದಂತೆ ಬೇಕಾದಷ್ಟು ಕಾಳು ಕೊಡುತ್ತಿತ್ತು. ನಿಮಗೆ ಕೊಟ್ಟಂತಹ ಹಣ, ನಿಮಗೆ ಕೊಟ್ಟಂತಹ ಕಾಳು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಬಂದರೆ, ಮತ್ತೆ ನಿಮಗೆ ಬೇಕಾದಷ್ಟು ಕಾಳು ಕೇಂದ್ರದಿಂದ ಕೊಡಲಿಕ್ಕೆ ನಾವು ತಯಾರಿದ್ದೇವೆ. ನಿಮ್ಮ ಬರಗಾಲದ ಪರಿಸ್ಥಿತಿ ನಮಗೆ ಗೊತ್ತಿದೆ ಎಂದು ಕೇಂದ್ರ ಹೇಳಿತ್ತು. ಇವತ್ತು ಕೇವಲ ಕರ್ನಾಟಕದಲ್ಲಿ ಅಲ್ಲ, ಇಡೀ ರಾಷ್ಟ್ರದಲ್ಲಿಯೇ ಅನೇಕ ರಾಜ್ಯಗಳು ಬರಗಾಲವನ್ನು ಅನುಭವಿಸುತ್ತಿವೆ. ಈ ಒಂದು ಬರಗಾಲ ಇಡೀ ಭಾರತ ರಾಷ್ಟ್ರದ ಬಹುತೇಕ ರಾಜ್ಯಗಳಲ್ಲಿ ಬಂದಿದೆ ಎನ್ನುವುದನ್ನು ಅರಿತುಕೊಂಡು ಪ್ರಧಾನ ಮಂತ್ರಿಗಳು ನಾವು ಬೇಕಾದಷ್ಟು ಕಾಳು ಕೊಡುತ್ತೇವೆ, ತೆಗೆದುಕೊಂಡು ಹೋಗಿ ಬರಗಾಲವನ್ನು ನಿವಾರಣೆ ಮಾಡಿ ಎಂದು ಹೇಳಿದ್ದರು. ಆ ರೀತಿಯಲ್ಲಿ ನಮ್ಮ ಸರ್ಕಾರ ಎಷ್ಟು ಉಪಯೋಗ ಮಾಡಿಕೊಂಡು ನಮ್ಮ ರೈತರಿಗೆ ಸಹಾಯ ಮಾಡಬೇಕಾಗಿತ್ತೋ ಅದನ್ನು ಮಾಡಲಿಕ್ಕಾಗಲಿಲ್ಲ. ಕುಡಿಯುವ ನೀರಿನ ಬವಣೆ ಬಗ್ಗೆ ಈಗಾಗಲೇ ನಮ್ಮ ಅನೇಕ ಶಾಸಕರು ಹೇಳಿದರು. ಕುಡಿಯುವ ನೀರಿನ ಬವಣೆಯಂತೂ ಬಹುಶಃ ಹೋದ ಸಲಕ್ಕಿಂತ ಹೆಚ್ಚಾಗಿದೆ. ಹೋದ ಸಲ ಎಂದೂ ಕಾಣದಂತಹ ಬರಗಾಲ ಇತ್ತು, ಕೆರೆಕಟ್ಟೆಗಳೆಲ್ಲಾ ಒಣಗಿ ಹೋಗಿದ್ದವು. ಯಾವ ಕೆರೆಯಲ್ಲೂ ನೀರಿರಲಿಲ್ಲ, ಆ ಸಂದರ್ಭದಲ್ಲಿ ಧಾರವಾಡಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ನೀರಸಾಗರ ಜಲಾಶಯದ ಹೂಳು ತೆಗೆಯಬೇಕೆಂದು ಹೋದ ಸಲ ನಾವು ಸರ್ಕಾರವನ್ನು ಕೇಳಿಕೊಂಡಿದ್ದೆವು. ಅಂದರೆ ಅಂತಹ ಬರಗಾಲವನ್ನು ನಾವು ಹೋದ ಸಲವೇ ಅನುಭವಿಸಿದ್ದೇವೆ. ಹೋದ ಸಲವೇ ನೀರ ಸಾಗರ ಎನ್ನುವಂತಹ ಕೆರೆಯ ಹೂಳು ತೆಗೆಯಲಿಕ್ಕೆ ಸರ್ಕಾರ ಸಾಕಷ್ಟು ದುಡ್ಡು ಕೊಟ್ಟಿತು. ಆ ಹೂಳು ತೆಗೆಸುವಂತಹ ಕೆಲಸವನ್ನು

ಸರ್ಕಾರದವರು ಮಾಡಿದರು. ಆದರೆ ಆ ಹೂಳು ತೆಗೆದ ಮೇಲೆ ಇವತ್ತು ಅಲ್ಲಿ ಮಳೆಯಾಗಿ ನೀರೇ ಬಂದಿಲ್ಲ. ಇಂತಹ ಒಂದು ಪರಿಸ್ಥಿತಿ ಅನೇಕ ಕೆರೆಗಳಿಗೆ ಇವತ್ತು ಕಾಡುತ್ತಿದೆ. ಹೋದ ವರ್ಷ ಮತ್ತು ಈ ವರ್ಷ ಕೆಲವೊಂದು ಕೆರೆಗಳ ಹೂಳು ತೆಗೆಯುವಂತಹ ಕೆಲಸಗಳನ್ನು ಸರ್ಕಾರ ಪ್ರಾರಂಭ ಮಾಡಿದೆ. ಒಟ್ಟಾರೆಯಾಗಿ ರಾಜ್ಯಾದ್ಯಂತ ಎಷ್ಟು ಕೆರೆಗಳ ಹೂಳನ್ನು ಸರ್ಕಾರದವರು ತೆಗೆದಿದ್ದಾರೆ ಎನ್ನುವ ಅಂಕಿ ಸಂಖ್ಯೆ ನಮಗೆ ಇನ್ನೂವರೆಗೆ ಸಿಕ್ಕಿಲ್ಲ, ಬಹುಶಃ ಕೆರೆಗಳ ಹೂಳು ತೆಗೆಯುವಂತಹ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಈ ಸರ್ಕಾರ ಮಾಡಬೇಕಾಗಿತ್ತು ಬಹುಶಃ ಈಗ ಅದಕ್ಕೆ ಬಹಳ ಮಹತ್ವ ಇದೆ. ಇವತ್ತು ರೈತನಿಗೆ ಬೆಳೆ ಬೆಳೆಯುವ ಸಲುವಾಗಿ ಅಲ್ಲ, ಕುಡಿಯಲಿಕ್ಕೇ ನೀರು ಸಿಗುತ್ತಿಲ್ಲ. ಇವತ್ತು 400-500-800 ಫೂಟ್‌ನವರೆಗೂ ಬೋರ್ ತೆಗೆದರೂ ನೀರು ಸಿಗದಂತಹ ಪರಿಸ್ಥಿತಿ ಇದೆ. ಇದಕ್ಕೆಲ್ಲಾ ಏನು ಕಾರಣ? ಬಹಳ ಮುಖ್ಯವಾಗಿ ನಾವು ನೀರನ್ನು ಇವತ್ತು ಹಿಡಿದಿಟ್ಟುಕೊಳ್ಳುವ ಕೆಲಸವನ್ನು ಮಾಡಬೇಕಾಗಿತ್ತು ಕೆರೆಯಲ್ಲಿ ನೀರು ಹೆಚ್ಚು ಪ್ರಮಾಣದಲ್ಲಿ ನಿಲ್ಲುವಂತೆ ವ್ಯವಸ್ಥೆ ಮಾಡಬೇಕಾಗಿತ್ತು. ಹಿಡಿದಿಟ್ಟ ನೀರು ಭೂಮಿಯನ್ನು ಚಾರ್ಜಿಂಗ್ ಆಗುವಂತಹ ವ್ಯವಸ್ಥೆ ಮಾಡಬೇಕಾಗಿತ್ತು. ಅಲ್ಲಲ್ಲೇ ಹರಿದು ಹೋಗುವಂತಹ ನದಿಗಳು ಮತ್ತು ಸಣ್ಣ ಸಣ್ಣ ನಾಲೆಗಳಿಗೆ ಬಾಂದಾರುಗಳನ್ನು ಕಟ್ಟುವಂತಹ ಕೆಲಸ ಮಾಡಬೇಕಾಗಿತ್ತು. ಇವತ್ತು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಮೂಲಕ ಎಷ್ಟು ಬಂಡಾರಗಳನ್ನು ಕಟ್ಟಲಿಕ್ಕೆ ನಾವು ಪ್ರಾರಂಭ ಮಾಡಿದ್ದೇವೆ. ಹೊಸ ಕೆರೆಗಳನ್ನು ಬೇಡ. ನೀರು ಹರಿದು ಹೋಗುವಂತಹ ನಾಲೆಗಳಿಗೆ ಮತ್ತು ನದಿಗಳಿಗೆ ಸ್ವಲ್ಪ ಬಾಂದಾರವನ್ನಾದರೂ ಸಹಿತ ದೊಡ್ಡ ಪ್ರಮಾಣದಲ್ಲಿ ಈ ಒಂದು ಕೂಲಿಗಾಗಿ ಕಾಳು ಯೋಜನೆಯಲ್ಲಿ ಇವತ್ತು ತೆಗೆದುಕೊಂಡಿದ್ದರೆ ಎಷ್ಟೋ ಉಪಯೋಗವಾಗುತ್ತದೆ. ಏಕೆಂದರೆ ಇವತ್ತು ಕಾಣುವಂತಹ ಬರಗಾಲ ಬಹುಶಃ ಹಿಂದೆಂದೂ ಕಂಡಿಲ್ಲ. ಅಂತಹ ಬರಗಾಲವನ್ನು ಇವತ್ತು ಕರ್ನಾಟಕದ ರೈತರು ಅನುಭವಿಸುತ್ತಿದ್ದಾರೆ. ಇವತ್ತು ದನಕರುಗಳ ಪರಿಸ್ಥಿತಿಯಂತೂ ಚಿಂತಾಜನಕವಾಗಿದೆ. ಕೈಗೆ ಬಂದ ಬೆಲೆಗೆ ಅವುಗಳನ್ನು ಮಾರಾಟ ಮಾಡುತ್ತಿದ್ದಾರೆ. ದನಕರುಗಳಿಗಾಗಿ ಮೇವಿನ ವ್ಯವಸ್ಥೆ ಮಾಡಿ ಗೋಶಾಲೆಗಳನ್ನು ಕಟ್ಟಿಸಬೇಕು. ಮೊದಲು ಒಂದೆಡೆ ಮೇವಿನ ಸಂಗ್ರಹ ಮಾಡಬೇಕು. ಯಾವ್ಯಾವ ಪ್ರದೇಶದಲ್ಲಿ ಇವತ್ತು ದನಕರುಗಳನ್ನು ದೊಡ್ಡ ಪ್ರಮಾಣದಲ್ಲಿ ಮೇವಿಲ್ಲದ ಕಾರಣಕ್ಕಾಗಿ ಮಾರಾಟ ಮಾಡುತ್ತಿದ್ದಾರೋ ಅಥವಾ ಇವತ್ತು ಆರ್ಥಿಕವಾಗಿ ಅವರಿಗೆ ತೊಂದರೆಯಾಗಿ ಮಾರಾಟ ಮಾಡುತ್ತಿದ್ದಾರೋ ಆ ಪ್ರದೇಶಗಳಲ್ಲಾದರೂ ದನಕರುಗಳನ್ನು ಸಂರಕ್ಷಣೆ ಮಾಡಿಕೊಳ್ಳಬೇಕು. ಆ ದಿಸೆಯಲ್ಲಿ ಇಲ್ಲಿಯವರೆಗೆ ಎಲ್ಲಿಯೂ ಮೇವಿನ ಸಂಗ್ರಹವನ್ನು ಮಾಡಿಲ್ಲ ಅಥವಾ ಗೋಶಾಲೆಗಳನ್ನು ಕಟ್ಟುವಂತಹ ಕೆಲಸವನ್ನು ಸರ್ಕಾರ ಮಾಡಿಲ್ಲ. ವಿದ್ಯುಚ್ಛಕ್ತಿಯ ಅಭಾವದ ಬಗ್ಗೆಯೂ ಸಹ ನಮ್ಮ ಎಲ್ಲಾ ನಾಯಕರು ಇಲ್ಲಿ ಮಾತನಾಡಿದ್ದಾರೆ.

5.30 ಪಿಎಂ

ಬಹುಶಃ ವಿದ್ಯುಚ್ಛಕ್ತಿ ಅಭಾವ ಇದು ಇವತ್ತಿನದು ಅಲ್ಲ. ಎಷ್ಟೋ ವರ್ಷಗಳಿಂದ ಇಲ್ಲಿ ವಿದ್ಯುಚ್ಛಕ್ತಿ ಅಭಾವವಾಗಿದೆ. ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಅದು ಸಹಿತ ಸರಿಯಾದ ರೀತಿಯಲ್ಲಿ, ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಬೆಳವಣಿಗೆಗೆ, ವಿದ್ಯುಚ್ಛಕ್ತಿ ಉತ್ಪಾದನೆಗೆ ಕ್ರಮ ತೆಗೆದುಕೊಂಡಿಲ್ಲ. ರಾಯಚೂರು ಥರ್ಮಲ್ ಸ್ಟೇಷನ್ ಏನಿದೆ, ಅಲ್ಲಿ ಅನೇಕ ದೋಷಗಳಿಂದ

ಮೇಲಿಂದ ಮೇಲೆ ಉತ್ಪಾದನೆ ಕುಂಠಿತವಾಗುತ್ತಿದೆ. ಅದರ ಬಗ್ಗೆ ಏನಾಗಿದೆ ಎಂದೂ ಸಹ ಸರ್ಕಾರ ಗಮನಹರಿಸುತ್ತಿಲ್ಲ. ರಾಯಚೂರಿನ 5,6 ಮತ್ತ 7ನೇ ಪ್ಲ್ಯಾಂಟ್‌ಗಳು ಪ್ರಾರಂಭವಾಗಿ ರಾಜ್ಯಕ್ಕೆ ಸಾಕಷ್ಟು ವಿದ್ಯುತ್ತನ್ನು ಒದಗಿಸಬಹುದಾಗಿತ್ತು. ಇರುವಂತಹ ಥರ್ಮಲ್ ಪ್ಲ್ಯಾಂಟ್‌ಗಳೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಯಾವ ತರಹ ದೋಷ ಇದೆಯೋ ಮೇಲಿಂದ ಮೇಲೆ ಕುಂಠಿತವಾಗಿ ಪವರ್ ದೊರಕದೆ ಇರುವುದು ನಾವು ಕಾಣುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನಕೊಡಬೇಕಾದ ಅಗತ್ಯತೆ ಇದೆ. ಇದೂ ಅಲ್ಲದೆ ನಾವು ಹೇಳುತ್ತಿರುವುದು ರೈತನ ಗೋವುಗಳ ಸಂರಕ್ಷಣೆ ಮಾಡುವುದರ ಜೊತೆಗೆ ಈಗಿರುವಂತಹ ರೈತರ ಸಾಲ, ಸಾಲದ ವಸೂಲಿ ಬಗ್ಗೆ ಸಹಿತ ನಮ್ಮ ಎಲ್ಲಾ ನಾಯಕರು ಮಾತನಾಡಿದ್ದಾರೆ. ಸಾಲ ವಸೂಲಾತಿ, ಬಡ್ಡಿ ಮನ್ನ ಮಾಡುವ ಬಗ್ಗೆ ಹೇಳುವುದಾದರೆ ಈಗಾಗಲೇ ಈ ಬಡ್ಡಿ ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರ ಹಾಗೂ ಎಲ್ಲಾ ನ್ಯಾಷನಲೈಸ್ಡ್ ಬ್ಯಾಂಕುಗಳೂ ಸಹಿತ ಒಪ್ಪಿಕೊಂಡು ಈ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ನಾವು ಕೇಳುತ್ತಿರುವುದು ಈ ವರ್ಷದ ಸಾಲ ಮಾತ್ರ ಅಲ್ಲ, ಅದರ ಹಿಂದಿನ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ, ಇವು ಸಹಿತ ಎಷ್ಟೋ ವರ್ಷಗಳಿಂದ ಕಟ್ ಬಾಕಿದಾರದಾಗಿ ರೈತರು ಕಷ್ಟದಲ್ಲಿ ಇದ್ದಾರೆ. ಮೂರು ವರ್ಷಗಳಿಂದ ಸತತವಾಗಿ ಬೆಳೆ ಬಾರದೆ ಇರುವುದರಿಂದ ಸಾಲಗಾರರು ಆಗಿದ್ದಾರೆ ಅದನ್ನು ವಸೂಲಿ ಮಾಡುವ ಕಾರ್ಯಕ್ರಮ ಪಿಎಲ್ ಡಿ ಬ್ಯಾಂಕ್‌ನವರು ಮಾಡುತ್ತಿದ್ದಾರೆ. ಸಾಲ ವಸೂಲಿಗೆ ಹೋಗುವ ಎಷ್ಟೋ ಜನ ರೈತರ ಸ್ಥಿತಿ ಕಂಡು ಇವತ್ತು ಕಣ್ಣೀರು ಹಾಕುತ್ತಿದ್ದಾರೆ. ನಾವು ಅವರ ದುಃಖವನ್ನು ನೋಡಿದರೆ ಕಣ್ಣೀರು ಹಾಕಬೇಕಾಗುತ್ತದೆ. ಮೇಲಿಂದ ಮೇಲೆ ಸರಕಾರ ವಸೂಲಿ ಮಾಡಬೇಕೆಂದು ಬಂದಿದ್ದಕ್ಕೆ ನಾವು ಅವರ ಮನೆಗಳಿಗೆ ಹೋಗುತ್ತಿದ್ದೇವೆ. ಇಂತಹ ದುಸ್ಥಿತಿಯಲ್ಲಿ ನಾವು ಹೇಗೆ ವಸೂಲಿ ಮಾಡುವುದು? ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇವರ ದುಸ್ಥಿತಿಯನ್ನು ಸರ್ಕಾರ ಅರ್ಥ ಮಾಡಿಕೊಂಡಿಲ್ಲ. ಎಂದು ಸಾಲ ವಸೂಲಿಗೆ ಹೋಗುವ ಜನ ಅವರ ದುಖಃವನ್ನು ನಮ್ಮಲ್ಲಿ ತೋಡಿಕೊಂಡಿದ್ದಾರೆ. ಮಧ್ಯಮಾವಧಿಯಾಗಲಿ, ದೀರ್ಘಾವಧಿಯಾಗಲಿ ಸಾಲ ವಸೂಲಿಯನ್ನು ಪೂರ್ಣವಾಗಿ ನಿಲ್ಲಿಸಬೇಕು. ಈ ಸಾಲವನ್ನು ಮುಂದಕ್ಕೆ ಹಾಕಬೇಕು. ಮುಂದೆ ಬರುವಂತಹ ದಿನಗಳಲ್ಲಿ ಸಹ ಸುಲಭವಾಗಿ ಸಾಲ ದೊರಕುವ ಹಾಗೆ ಮುಂಜಾಗ್ರತಾ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು. ಇವೆಲ್ಲಾ ಕಾರ್ಯಗಳಿಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕಾದುದು ಸರ್ಕಾರದ ಆದ್ಯತೆ ಇದೆ. ಇವತ್ತು ಯಾವ ಸರ್ಕಾರ ಬಹಳ ಉತ್ತಮವಾದ ಕೆಲಸಗಳನ್ನು ಇಡೀ ರಾಷ್ಟ್ರದ ರೈತರ ಸಲುವಾಗಿ ಮಾಡುತ್ತಿದೆ ನೋಡಿರಿ. ಬಹುಶಃ 50 ವರ್ಷದ ಇತಿಹಾಸದಲ್ಲಿ ರೈತರಿಗೆ ಸಂರಕ್ಷಣೆ ಮಾಡುವಂತಹ ದಿಶೆಯಲ್ಲಿ ರೈತ ಇವತ್ತು ಶಹರುಗಳಿಗೆ ಏಕೆ ವಲಸೆ ಬರುತ್ತಿದ್ದಾನೆ, ನಗರಗಳಿಗೆ ಏಕೆ ವಲಸೆ ಬರುತ್ತಿದ್ದಾನೆ ಎಂದರೆ ಅವನು ಬೆಳೆಯುತ್ತಿರತಕ್ಕಂತಹ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರಕದೆ ಇರುವುದಕ್ಕೆ ನಗರಗಳಿಗೆ ಬರುತ್ತಿದ್ದಾನೆ. ಈ ಪ್ರಕಾರ ಮಳೆ ಆಗದೆ, ಹವಾಮಾನ ವೈಪರೀತ್ಯದಿಂದ ಅವನಿಗೆ ಬರಬೇಕಾದ ಉತ್ಪನ್ನ ಬಾರದೆ ಇರುವುದಕ್ಕೆ ಅವನು ನಗರಗಳಿಗೆ ವಲಸೆ ಬರುತ್ತಿದ್ದಾನೆ. ಇವೆಲ್ಲಾ ಕಾರಣಗಳಿಂದ ರೈತ ಮೊದಲಿನಿಂದ ಸಾಲಗಾರನಾಗಿದ್ದಾನೆ. ಸಾಲಗಾರ ಏಕೆ ಆಗಿದ್ದಾನೆಂದರೆ, ಅವನಿಗೆ ಸರಿಯಾದ ವೇಳೆಗೆ ಕೃಷಿ, ಕಾರ್ಯಕ್ಕೆ ಹಣ ದೊರಕದೆ ಇರುವುದರಿಂದ ಸಾಲಗಾರನಾಗಿದ್ದಾನೆ. ಕಿಸಾನ್ ಕ್ರೆಡಿಟ್ ಕಾರ್ಡ್ ಕೇಂದ್ರ ಸರ್ಕಾರ ಈಗ ತೆಗೆದುಕೊಂಡು ಬಂದಿದೆ. ಬಹುಶಃ ರೈತರಿಗೆ ಎಂದೋ ಇದು ಬರಬೇಕಾಗಿತ್ತು,

ಈ ದೇಶದ ಬೆನ್ನೆಲುಬು ರೈತ ಎಂದು ಹೇಳುತ್ತೇವೆ, ಈ ದೇಶದ ಸಂರಕ್ಷಣೆ ಮಾಡುವುದು ರೈತ ಎಂದು ಹೇಳುತ್ತೇವೆ. ಈ ದೇಶದ ಆರ್ಥಿಕ ಶಕ್ತಿ ಇರುವುದು ಗ್ರಾಮೀಣ ಪ್ರದೇಶಗಳಲ್ಲಿ. ಗ್ರಾಮೀಣ ಪ್ರದೇಶದ ರೈತ, ರೈತನಿಗೆ ಅವಲಂಬಿತವಾದ ಕೂಲಿಕಾರರನ್ನು ಈ ಬಡತನದ ದೇಶವನ್ನು ಸಂರಕ್ಷಣೆ ಮಾಡಬೇಕೆಂದು ಮಾನ್ಯ ಮಹಾತ್ಮಗಾಂಧೀಜಿಯವರ ಕಾಲದಿಂದ ಗ್ರಾಮೀಣ ರಾಜ್ಯವನ್ನು ಮಾಡಬೇಕಾದ ಈ ರಾಷ್ಟ್ರದಲ್ಲಿ ಇಲ್ಲಿಯವರೆಗೆ ರೈತರ ಬಗ್ಗೆ ಯಾರೂ ಕಾಳಜಿ ತೆಗೆದುಕೊಂಡಿಲ್ಲ. ಬಹುಶಃ ಇಲ್ಲಿರುವಂತಹ ಶಾಸಕರಲ್ಲಿ 70-80 ಪ್ರತಿಶತ ಶಾಸಕರು ಎಲ್ಲಾ ರೈತ ಕುಟುಂಬದಿಂದ ಬಂದವರು. ಬಹುಶಃ ರೈತರ ಕುಟುಂಬದಿಂದ ಬಂದಂತಹ ಶಾಸಕರು ನಾವುಗಳು ಎಲ್ಲಾ ರೈತರ ಬಗ್ಗೆ ಕಾಳಜಿ ಇದೆಯೇ ಸಂಘಟಿತವಾದ ಆರ್ಗನೈಸೇಷನ್ ಇವೆಯೇ? ಯಾರು ಸಂಘಟಿತವಾದ ಜನ ಇದ್ದಾರೆ, ಅವರೆಲ್ಲಾ ಇವತ್ತು ಬೇಕಾದಷ್ಟು ಲಾಭವನ್ನು ಪಡೆಯುತ್ತಿದ್ದಾರೆ. ಅಸಂಘಟಿತವಾದ ರೈತರಿಗೆ ಸಂರಕ್ಷಣೆ ಮಾಡುವುದಕ್ಕೆ ಯಾರೂ ತಯಾರಿಲ್ಲ. ನಾವೆಲ್ಲರೂ ರೈತರ ಬಗ್ಗೆ ಚಿಂತನೆ ಮಾಡುತ್ತೇವೆ, ಶಾಶ್ವತವಾಗಿ ಚಿಂತನೆ ಇವತ್ತಿನವರೆಗೆ ಆಗಲಿಲ್ಲ. 55 ವರ್ಷಗಳಿಂದ ಈ ದೇಶದ ಆಡಳಿತದಲ್ಲಿ ಏನು ರೈತರ ಬಗ್ಗೆ ಹೇಳುತ್ತಾ ಬಂದಿದ್ದಾರೆ, ಪ್ರತಿಯೊಂದು ಚುನಾವಣೆಯಲ್ಲಿ ರಾಜಕೀಯ ಜನ ಈ ದೇಶದ ಬೆನ್ನೆಲುಬು ನಮ್ಮ ರೈತ, ಅವನೇ ಅನ್ನ ಕೊಡುವವನು, ಎಲ್ಲರಿಗೂ ಸಂರಕ್ಷಣೆ ಮಾಡುವವನು ಎಂದು ಹೇಳುತ್ತಾರೆ. ಆದರೆ ಅವನ ಬಗ್ಗೆ ಸರಿಯಾದ ಕಾಳಜಿ ಮಾಡದೆ ಇರುವಂತಹ ಇಲ್ಲಿಯವರೆಗಿನ ಸರ್ಕಾರಗಳಿಗೆ ಮಾದರಿಯಾಗಿ ಕೇಂದ್ರದಲ್ಲಿರುವಂತಹ ಎನ್‌ಡಿಎ ಸರ್ಕಾರ ಇವತ್ತು ಕಿಸಾನ್ ಕ್ರೆಡಿಟ್ ಕಾರ್ಡ್ ತೆಗೆದುಕೊಂಡು ಬಂದಿದ್ದಾರೆ. ರೈತರಿಗೆ ಸರಿಯಾದ ವೇಳೆಗೆ ಸಾಲ ದೊರಕಬೇಕು. ಅವನು ಅಲ್ಲಿ ಇಲ್ಲಿ ಕೈ ಒಡ್ಡಿ ತನಗೆ ಬೇಕಾದ ಹಣದ ಸಲುವಾಗಿ ಹೋಗಬಾರದು. ಯಾವುದೇ ಇತಿ ಮಿತಿ ಇಲ್ಲದೆ ಬಡ್ಡಿ ಕೊಡುವ ಸ್ಥಿತಿಗೆ ಹೋಗಬಾರದು ಎಂದು ಕಿಸಾನ್ ಕ್ರೆಡಿಟ್ ಕಾರ್ಡ್ ಇವತ್ತು ಬಂದಿದೆ. ನಿಸರ್ಗದ ವಿಕೋಪದಿಂದ ಅವನು ಬೆಳೆಯತಕ್ಕಂತಹ ಬೆಳೆಗಳು ಕೈಗೆ ಬರುವಂತೆ ಮಾಡುವುದಕ್ಕೆ ಬೆಳೆ ವಿಮೆ ಸಹಿತ ಕೇಂದ್ರ ಸರ್ಕಾರ ತೆಗೆದುಕೊಂಡು ಬಂದಿದೆ. ಇವೆಲ್ಲಾ ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ಇದು ಶಾಶ್ವತವಾಗಿ ರೈತನ ಬೆಳವಣಿಗೆಗೆ ಈ ದೇಶದ 70 ಪ್ರತಿಶತ ರೈತರು ಏನಿದ್ದಾರೆ ಗ್ರಾಮೀಣ ಪ್ರದೇಶದಲ್ಲಿ ಅವರಿಗೆ ಶಾಶ್ವತವಾದ ಪರಿಹಾರ ಸಿಗಬೇಕೆಂಬ ದೃಷ್ಟಿಯಿಂದ ಇವರೆಡೂ ಬಹಳ ಮುಖ್ಯವಾದ ಯೋಜನೆಗಳನ್ನು ಕೇಂದ್ರ ಸರ್ಕಾರ ತಂದಿದೆ. ಒಂದು ಕಿಸಾನ್ ಕ್ರೆಡಿಟ್ ಕಾರ್ಡ್ ಮತ್ತೊಂದು ಬೆಳೆ ವಿಮೆ. ರೈತ 12 ತಿಂಗಳು ನನ್ನ ಹೊಲಗಳಿಗೆ ಹೋಗಿ ಕೆಲಸ ಮಾಡುವುದಕ್ಕೆ ಪ್ರತಿಯೊಂದು ಗ್ರಾಮದಲ್ಲಿಯೂ ಈ ರಸ್ತೆಗಳಿಗೆ ಪ್ರಧಾನ ಮಂತ್ರಿಗಳು ನೀಡಿದ ಹಣದಿಂದ ಹೊಲಕ್ಕೆ ಹೋಗುವ ಸಂಪರ್ಕ ರಸ್ತೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿದೆ. ಇವೆಲ್ಲಾ ದೀರ್ಘ ಕಾಲದ ಸಮಸ್ಯೆಗಳು ಏನಿವೆ 50 ವರ್ಷಗಳಿಂದ ಗ್ರಾಮೀಣ ಪ್ರದೇಶದ ರೈತರಿಗೆ ಸಹಾಯ ಮಾಡಬೇಕಾದ ಸರ್ಕಾರಗಳು ಯಾವುದೂ ಮಾಡಲಿಲ್ಲ. ಇವತ್ತು ಆ ಕೆಲಸಗಳನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಇದರಿಂದ ಇವತ್ತು ಆದರ ಪರಿಣಾಮ ಮೂರು ವರ್ಷಗಳಿಂದ ಈ ಬರಗಾಲ ಅನುಭವಿಸುತ್ತಿದ್ದೇವೆ. ಬಹುಶಃ ಈ ಕ್ರೆಡಿಟ್ ಕಾರ್ಡ್ ಸಹಿತ ಇವತ್ತು ಎಲ್ಲಾ ಕಡೆ ವಿತರಣೆ ಆಗಬೇಕಾಗಿದೆ. ಬೆಳೆ ವಿಮೆ ಸಹಿತ ಹೊಸ ಪ್ರಯೋಗ. ಹೋದ ವರ್ಷದಲ್ಲಿ ಪ್ರಾರಂಭವಾದರೆ ಸರ್ಕಾರ ಅದಕ್ಕೆ ಎಷ್ಟು ಗಮನ ಕೊಟ್ಟು ರೈತರಿಗೆ ಅದರ ಲಾಭ ತಲುಪಿಸಬೇಕಾಗಿತ್ತು, ಆ ಯೋಜನೆ ಪೂರ್ಣವಾಗಿ ಫಲಕಾರಿ ಮಾಡಬೇಕಾಗಿತ್ತು, ಅಲ್ಲಿ ಸಹಿತ ಅನೇಕ ವಿಫಲತೆಯನ್ನು ಸರ್ಕಾರದ ಮೂಲಕ

ರೈತರಿಗೆ ಆಗಿರುವುದನ್ನು ಕಾಣುತ್ತಿದ್ದೇವೆ. ಸರಿಯಾಗಿ ಮಾಡಿದ್ದರೆ ಬಹುಶಃ ಕೇಂದ್ರ ಸರ್ಕಾರ ರೈತರಿಗೆ ಶಾಶ್ವತ ಪರಿಹಾರ ಹುಡುಕುವ ಬೆಳೆ ವಿಮೆ ಏನು ತಂದಿದೆ, ಶಾಶ್ವತವಾಗಿ ಹಣಕಾಸಿನ ತೊಂದರೆಯಾಗದಂತೆ ಕಿಸಾನ್ ಕ್ರೆಡಿಟ್ ಕಾರ್ಡ್ ತಂದಿದೆ, ರೈತ ಸತತವಾಗಿ 12 ತಿಂಗಳ ಕಾಲ ಹೊಲಗಳಲ್ಲಿ ಕೆಲಸ ಮಾಡುವುದಕ್ಕೆ ಮತ್ತು ಬೆಳೆದ ಉತ್ಪನ್ನಗಳನ್ನು ಮಾರಾಟಕ್ಕೆ ತರುವ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಮಾಡಿದೆ. ಇದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಅದರ ಪರಿಣಾಮ ಏನಿದೆ ಮುಂದಿನ ಕಾಲದಲ್ಲಿ ರೈತರಿಗೆ ದೊಡ್ಡ ಅನುಕೂಲತೆಗಳನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಉಗ್ರಾಣಗಳ ನಿರ್ಮಾಣ, ಶೈತ್ಯಾಗಾರಗಳ ನಿರ್ಮಾಣ, ಸಂರಕ್ಷಣೆ ಮಾಡುವ ಘಟಕಗಳಿಗೆ ರಾಜ್ಯ ಸರ್ಕಾರದವರು ಹೆಚ್ಚು ಗಮನ ಕೊಡಬೇಕಾಗಿದೆ. ಏಕೆಂದರೆ, ಶಾಶ್ವತವಾದ ಕೃಷಿ ಉತ್ಪನ್ನಗಳಿಗೆ ವ್ಯವಸ್ಥೆ ಮಾಡಿದರೆ ಮಾತ್ರ ರೈತ ಬದುಕುತ್ತಾನೆ. ಅವನು ಗ್ರಾಮೀಣ ಪ್ರದೇಶದಲ್ಲಿದ್ದು ಒಕ್ಕಲುತನದ ವ್ಯವಸ್ಥೆಯಲ್ಲಿ ಅವನು ಇರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅವನ ಮಕ್ಕಳು ವಲಸೆ ಬರುತ್ತಿದ್ದಾರೆ. ಅವನು ಬೆಳೆದ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದೆ ಇರುವುದರಿಂದ, ನಿಸರ್ಗ ವಿಕೋಪದಿಂದ ಅವನ ಬೆಳೆ ಕೈಗೆ ಸಿಗದೆ ಇರುವುದರಿಂದ ಅವನು ಸಾಲಗಾರನಾಗಿ ತೊಳಲಾಡುತ್ತಿರುವಂತಹ ಸಂದರ್ಭದಲ್ಲಿ ಎಲ್ಲಕ್ಕಿಂತ ಒಳ್ಳೆಯದು ಎಲ್ಲಾದರೂ ನೌಕರಿ ಹಿಡಿದುಕೊಂಡು ಇರಬೇಕೆಂದು ಅಪೇಕ್ಷಿಸುತ್ತಾನೆ. ಅದರಿಂದ ರೈತ ಗ್ರಾಮಗಳಿಂದ ಶಹರಗಳಿಗೆ ವಲಸೆ ಬರುತ್ತಿದ್ದಾನೆ. ನಾವೆಲ್ಲಾ ವಿಚಾರ ಮಾಡಬೇಕಾಗುತ್ತದೆ. ಸರ್ಕಾರಿ ನೌಕರಿಯಲ್ಲಿರುವ ಜನ ನಾವು ಸರ್ಕಾರಿ ನೌಕರಿಯಲ್ಲಿರುವ ಜನ ಸಹಿತ 70 ಪ್ರತಿಶತ ಜನ ಹಳ್ಳಿಗಾಡಿನಿಂದ ಬಂದೂ ರೈತ ಕುಟುಂಬದಿಂದ ಬಂದರೂ ಅವರು ಎಷ್ಟರ ಮಟ್ಟಿಗೆ ನ್ಯಾಯವಾಗಿ ಬರಪರಿಹಾರದಲ್ಲಿ ಅವರು ತಮ್ಮನ್ನು ತೊಡಗಿಕೊಂಡು ಕಾರ್ಯ ಮಾಡುತ್ತಿದ್ದಾರೆ? ಈ ರೈತ ಸಲುವಾಗಿ, ಈ ಜನತೆ ಸಲುವಾಗಿ ಪರಿಣಾಮಕಾರಿಯಾಗಿ ಅವರ ಸೇವೆಯನ್ನು ಮಾಡುತ್ತಿದ್ದಾರೆಂಬುದನ್ನು ನಾವು ನೋಡಬೇಕು. ಏಕೆಂದರೆ ಎಲ್ಲಾ ಲಾಭವನ್ನು ಆರ್ಗನೈಸ್ಡ್ ಸೆಕ್ಟಾರ್ಸ್ ತೆಗೆದುಕೊಳ್ಳುತ್ತಿವೆ. ಸಂಘಟಿತವಾದ ಶಕ್ತಿ ಇವತ್ತು ಈ ಪ್ರಜಾ ತಂತ್ರದಲ್ಲಿ ಲಾಭವನ್ನು ಪಡೆಯುತ್ತಿದ್ದಾರೆ. ಇವತ್ತು ರೈತನಿಗೆ ಆರ್ಗನೈಸೇಷನ್ ಇಲ್ಲ. ಅಸಂಘಟಿತನಾಗಿದ್ದಾನೆ. ಅವನಿಗೆ ಈ ದೇಶದಲ್ಲಿ ಯಾರು ಕೇಳುವವರೇ ಇಲ್ಲ. ಇಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಇದೆ. ಈ ವಿಚಾರವಾಗಿ ನಾನು ಕೇಳಿಕೊಳ್ಳುವುದಿಷ್ಟೆ. ನಮ್ಮ ಸರ್ಕಾರ ಈಗಲಾದರೂ ಸಹಿತ ಬರ ಪರಿಹಾರ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಮಾಡಲು ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರ ಕೂಲಿಗಾಗಿ ಕಾಳು ಯೋಜನೆಯನ್ವಯ ಇನ್ನೂ ಹೆಚ್ಚು ಕಾಳನ್ನು ಕೊಡುವುದಕ್ಕೆ ತಯಾರಿದೆ. ಈ ಸೌಲಭ್ಯವನ್ನು ಪಡೆಯುವ ಸಲುವಾಗಿ ಈಗಾಗಲೇ ಕೊಟ್ಟಿರುವ ಕಾಳನ್ನು ಮತ್ತು ಹಣವನ್ನು ಸದಪಯೋಗ ಮಾಡಿರುವ ಬಗ್ಗೆ ಯುಟಿಲೈಸೇಶನ್ ಬಗ್ಗೆ ಸರಿಯಾದ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಒದಗಿಸಿದರೆ ಮತ್ತೆ ಕಾಳು ಮತ್ತು ಹಣವನ್ನು ಬೇಕಾದಷ್ಟು ಕೇಂದ್ರ ಸರ್ಕಾರ ಕೊಡುವುದಕ್ಕೆ ತಯಾರಿದೆ ಎಂದು ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಇಷ್ಟೇ ಅಲ್ಲ ಬರ ಪರಿಹಾರ ಕಾರ್ಯದಲ್ಲಿ ಯಾವುದೇ ರಾಜಕೀಯ ಮಾಡುವುದಿಲ್ಲ ಮತ್ತು ಎಲ್ಲ ರಾಜ್ಯಗಳನ್ನು ಈ ವಿಚಾರದಲ್ಲಿ ಸಮಾನವಾಗಿ ನೋಡಿಕೊಳ್ಳುತ್ತೇವೆಂದು ಪ್ರಧಾನ ಮಂತ್ರಿಗಳು ಮೇಲಿಂದ ಮೇಲೆ ಹೇಳುತ್ತಲೇ ಬಂದಿದ್ದಾರೆ. ಆದುದರಿಂದ ಕೇಂದ್ರದ ಮೇಲೆ ಗೂಬೆ ಕೂರಿಸುವುದು ಯಾವ ದೃಷ್ಟಿಯಿಂದಲೂ ಸರಿಯಲ್ಲವೆಂದು ಹೇಳುತ್ತೇನೆ. ನಮಗೆ ಅನೇಕ ನಾಯಕರು ಹೇಳಿದ್ದಾರೆ, ನಾವು ಕೊಡಬೇಕಾದಂಥ ಮಾಹಿತಿ ಅಥವಾ ನಾವು ಏನು

ಉಪಯೋಗ ಮಾಡಬೇಕಾದಂಥ ದೃಷ್ಟಿಯೊಳಗೆ ಕರ್ನಾಟಕ ಸರ್ಕಾರ ಅದನ್ನು ಉಪಯೋಗ ಮಾಡಿ ಮಾಹಿತಿಯನ್ನು ಒದಗಿಸಿದರೆ ಇನ್ನೂ ಹೆಚ್ಚು ಹಣ ಮತ್ತು ಕಾಳನ್ನು ಕೇಂದ್ರದಿಂದ ಪಡೆಯಬಹುದು. ಆದಕಾರಣ ಆ ದಿಸೆಯಲ್ಲಿ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ತೀವ್ರವಾಗಿ ದನಕರುಗಳ ಮೇವನ್ನು ಸಂಗ್ರಹ ಮಾಡುವುದು ಮತ್ತು ಕುಡಿಯುವ ನೀರಿನ ಸಲುವಾಗಿ ತೀವ್ರವಾದಂಥ ಅವಶ್ಯಕತೆ ಇರುವುದರಿಂದ ಎಲ್ಲಾ ಕಡೆಗೆ ಬೋರ್‌ವೆಲ್‌ಗಳನ್ನು ತೆಗೆದು ಕುಡಿಯುವ ನೀರಿನ ಸೌಲಭ್ಯವನ್ನು ಕೊಡಬೇಕಾದುದು ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತೇನೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಯುದ್ದೋಪಾದಿಯಲ್ಲಿ ಈ ಬರ ಪರಿಹಾರ ಕಾರ್ಯಗಳನ್ನು ಮಾಡುವುದಕ್ಕೆ ಕೆಲಸ ಮಾಡಬೇಕಾದದ ಅಗತ್ಯತೆ ಇದೆ. ಆದರೆ ಈವರೆಗೆ ಜನರ ಪರಿಸ್ಥಿತಿ ನೋಡಿದರೆ, ಜನರ ಸಮಸ್ಯೆಗಳನ್ನು ನೋಡಿದರೆ ಸರ್ಕಾರ ಸರಿಯಾದ ರೀತಿಯಲ್ಲಿ ಬರ ಪರಿಹಾರ ಕೆಲಸವನ್ನು ಮಾಡುತ್ತಿಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲಿ, ಅಧಿಕಾರಿಗಳಾಗಲಿ ಹೆಚ್ಚಿನ ಕಾಳಜಿ ವಹಿಸಿ ಬರಗಾಲವನ್ನು ನಿವಾರಣೆ ಮಾಡುವಲ್ಲಿ ಕಾರ್ಯವನ್ನು ಮಾಡಬೇಕು. ಇದರ ಜೊತೆಗೆ ರೈತರ ಮತ್ತು ಜನತೆಯ ಹಿತದೃಷ್ಟಿಯಿಂದ ಈ ಬರಗಾಲದಲ್ಲಿ ನಾವೆಲ್ಲಾ ಕೂಡಿ ಕೆಲಸ ಮಾಡೋಣವೆಂದು ಹೇಳಿ ಇಲ್ಲಿಯವರೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಉಪಾಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ಬರದ ವಿಚಾರವಾಗಿ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಂದಿಸುತ್ತೇನೆ. ನಮ್ಮ ದೇಶದಲ್ಲಿ ಒಟ್ಟು 14 ರಾಜ್ಯಗಳಲ್ಲಿ ನಾವು ಇಂದು ಬರ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಇದರ ಜೊತೆಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಅತ್ಯಂತ ಕಷ್ಟಕರವಾದಂಥ ಒಂದು ವಾತಾವರಣವನ್ನು ನಾವು ಎದುರಿಸುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸರ್ಕಾರದವರೂ ಕೂಡ ಒಂದು ಪ್ರಪೋಸಲ್‌ನ್ನೂ ಕೂಡ ತಯಾರು ಮಾಡಿದ್ದಾರೆ. ಈಗ ನಾವು ಸತತವಾಗಿ ಕಳೆದ ಮೂರು ವರ್ಷಗಳಿಂದ ಬರವನ್ನು ಎದುರಿಸುತ್ತಿದ್ದೇವೆ, ಈಗ ಮತ್ತೆ ಮುಂದಿನ ಮಾರ್ಚ್, ಏಪ್ರಿಲ್, ಮೇ ತಿಂಗಳ ವರೆಗೂ ಬರದಲ್ಲಿ ಎಲ್ಲಾ ಜನರನ್ನು ರಕ್ಷಣೆ ಮಾಡಬೇಕು ಮತ್ತು ಜಾನುವಾರುಗಳ ರಕ್ಷಣೆ ಮಾಡಬೇಕು ಮತ್ತು ಹೆಚ್ಚಿನ ಉದ್ಯೋಗವನ್ನು ಸೃಷ್ಟಿ ಮಾಡಬೇಕು ಎನ್ನುವ ಒಂದು ಆಲೋಚನೆಯನ್ನು ಮಾಡಿ ಸುಮಾರು 1478 ಕೋಟಿ ರೂಪಾಯಿಗಳ ಒಂದು ಪ್ರಪೋಸಲ್‌ನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕೊಟ್ಟಿದೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಆಗತಕ್ಕಂಥ ಸಂದರ್ಭದಲ್ಲಿ ಇವೊತ್ತು ಎರಡೂ ಪಕ್ಷಗಳಿಂದಲೂ ವಿಫಲವಾಗಿವೆ ಎಂದು ನಾನು ಹೇಳಬಯಸುತ್ತೇನೆ. ಕೇಂದ್ರದಲ್ಲಿರುವ ಬಿ.ಜೆ.ಪಿ.ಯವರು ಹುಬ್ಬಳ್ಳಿ ರೈಲ್ವೆ ವಲಯದ ಬಗ್ಗೆಯೇ ಹೆಚ್ಚು ಕಾನ್ಸ್‌ನ್ ಟ್ರೇಟ್ ಮಾಡಿದರು. ಏಕೆಂದರೆ ಮುಂದಿನ ಚುನಾವಣೆಯಲ್ಲಿ ನಾವು ಗೆಲ್ಲಬೇಕು ಎಂಬುದೇ ಆಗಿದೆ. ಅಂದು ಪ್ರಧಾನಮಂತ್ರಿಗಳು ಬಂದಂಥ ಸಂದರ್ಭದಲ್ಲಿ ಬರಗಾಲ ನಮ್ಮಲ್ಲಿ ಇಷ್ಟಿದೆ, ಇಷ್ಟು ಫುಡ್‌ಗ್ರೈನ್ಸ್ ಬೇಕು, ಇಷ್ಟು ಕ್ಯಾಶ್ ಬೇಕು ಎಂದು ಯಾರೂ ಮುಖಂಡರೂ ಕೂಡ ಸ್ಪಷ್ಟ ಚಿತ್ರಣವನ್ನು ಪ್ರಧಾನ ಮಂತ್ರಿಗಳಿಗೆ ಕೊಡಲಿಲ್ಲ ಎನ್ನುವುದೇ ನನ್ನ ಒಂದು ಆತಂಕ. ಇನ್ನು ನಮ್ಮ ರಾಜ್ಯವನ್ನು ಆಳುತ್ತಿರುವ ಕಾಂಗ್ರೆಸ್ ಪಕ್ಷದವರೂ ಕೂಡ ಮೊನ್ನೆ ರಾಯಚೂರು ಜಿಲ್ಲೆಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀಮತಿ ಸೋನಿಯಾಗಾಂಧಿಯವರು ಬಂದಿದ್ದಾಗ, ಅವರೂ ಕೂಡ ಏನು ಹೇಳಿದ್ದಾರೆಂದರೆ ರಾಜ್ಯ ಅತ್ಯಂತ ಸಂಕಷ್ಟ [illegible]

ಒಳ್ಳೆಯ ಆಡಳಿತವನ್ನು ಪಕ್ಷ ಕೊಡುತ್ತಿದೆ ಎಂದಿದ್ದಾರೆ. ಆದರೆ ಇಲ್ಲಿ ರೈತರ ಆತ್ಮಹತ್ಯೆ ಇರಬಹುದು, ಅಥವಾ ಸಂಕಷ್ಟ ಪರಿಸ್ಥಿತಿ ಏನಿದೆ ಎಂಬ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಹೇಳಿ ಒತ್ತಡವನ್ನು ಹೇರಬೇಕು ಎಂಬ ಬಗ್ಗೆ ಹೇಳುವುದಕ್ಕೆ ಇವರೂ ಕೂಡ ವಿಚಾರ ಮಾಡಲಿಲ್ಲ. ಹೀಗಾಗಿ ಒಟ್ಟಾರೆ ಎರಡೂ ಪಕ್ಷಗಳ ವಿಫಲತೆಯಿಂದ ಇಂದು ರಾಜ್ಯದಲ್ಲಿ ಅತ್ಯಂತ ಕ್ಲಿಷ್ಟ ಪರಿಸ್ಥಿತಿಯನ್ನು ನಾವು ಎದುರಿಸುತ್ತಾ ಇದ್ದೇವೆ. ಇಂದು ನಾವೇನು ಹೋರಾಟವನ್ನು ಕೇಂದ್ರ ಸರ್ಕಾರದೊಂದಿಗೆ ಮಾಡಿದೆವು, ಆ ಹೋರಾಟದ ನಂತರ 3.65 ಲಕ್ಷ ಟನ್ ಆಹಾರವನ್ನು ಬಿಡುಗಡೆ ಮಾಡಿರತಕ್ಕಂಥದ್ದು ಮತ್ತು 187 ಕೋಟಿ ರೂ ಮತ್ತು 191 ಕೋಟಿ ರೂ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈ ಎರಡೂ ಅನುದಾನದ ಮೇಲೆ ನಾವೇನು ಕೆಲಸ ಮಾಡಿದ್ದೇವೆ ಎನ್ನುವುದನ್ನೂ ಕೂಡ ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಕಳೆದ ಮೂರು ವರ್ಷಗಳಿಂದ ಸತತವಾಗಿ ಬರ ನಮಗೆ ಕಾಡುತ್ತಿದೆ, ಆದರೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಮತ್ತು ಉನ್ನತ ಮಟ್ಟದ ಕಾರ್ಯದರ್ಶಿಗಳು ಮಾತ್ರ ಇದರ ಬಗ್ಗೆ ಆಲೋಚನೆಯನ್ನು ಮಾಡಿಲ್ಲ ಎಂದು ನಾನು ಆಪಾದಿಸುತ್ತೇನೆ. ಏಕೆಂದರೆ ರೈತನಿಗೆ ಬಹಳ ಪ್ರಮುಖವಾಗಿ ಇರುವುದು ಎರಡು ಸಂಪತ್ತು. ಅವು ಯಾವುವೆಂದರೆ, ಜಾನುವಾರು ಸಂಪತ್ತು ಮತ್ತು ಎರಡನೆಯದಾಗಿ ಮರಗಳ ಸಂಪತ್ತು. ಇಲ್ಲಿ ನಾವು ಹಲವಾರು ಕ್ಷೇತ್ರಗಳ ಬಗ್ಗೆ ಹಲವಾರು ಇಲಾಖೆಗಳ ಬಗ್ಗೆ ಬಹಳಷ್ಟು ಮಾತನಾಡುತ್ತೇವೆ. ಹಲವಾರು ಮುಖಂಡರುಗಳೂ ಕೂಡ ಮತನಾಡುತ್ತಲೇ ಬಂದಿದ್ದಾರೆ. ಆದರೆ ಭವಿಷ್ಯದಲ್ಲಿ ಬರವನ್ನು ಎದುರಿಸುವ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುವ ದಿಸೆಯಲ್ಲಿ ಯಾರೂ ಕೂಡ ಭವಿಷ್ಯ ಚಿಂತನೆಯನ್ನು ಮಾಡುತ್ತಿಲ್ಲ. ಇವೊತ್ತು ಜಲ ಸಂವರ್ಧನೆ ಯೋಜನೆ ಎಂದು ಹೇಳಿ ಒಂದು ಕಡೆ ಒತ್ತು ಕೊಡುತ್ತಿದ್ದೇವೆ. ಇದಲ್ಲದೆ ಜಲ ಸ್ವಜಲಧಾರ ಯೋಜನೆ ಎಂದು ಹೇಳಿ ಆರ್.ಡಿ.ಪಿ.ಆರ್. ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ. ಇಲಾಖೆಯವರು ಹೇಳುತ್ತಾರೆ, ಏಕೆಂದರೆ ಹತ್ತು ಪರ್ಸೆಂಟ್ ಗ್ರಾಮ ಪಂಚಾಯತಿಯವರು ಹಣವನ್ನು ಕಾಂಟ್ರಿಬ್ಯೂಟ್ ಮಾಡಿದರೆ ಇನ್ನುಳಿದ ತೊಂಭತ್ತು ಪರ್ಸೆಂಟ್ ಹಣವನ್ನು ಕೇಂದ್ರ ಸರ್ಕಾರದವರು ಅನುದಾನದ ರೂಪದಲ್ಲಿ ಕೊಡುತ್ತಾರೆ. ನೀವು ನದಿ ಮೂಲದಿಂದ ವಾಟರ್ ರಿಸೋರ್ಸ್ ಇರತಕ್ಕಂಥ ಕಡೆಯಿಂದ ನೀವು ಒಂದೊಂದು ಕೋಟಿ ರೂಪಾಯಿ ಖರ್ಚು ಆದರೂ ಚಿಂತೆಯಿಲ್ಲ ನೀರನ್ನು ಕುಡಿಯುವುದಕ್ಕೆ ಕೊಡುತ್ತೇವೆ ಎಂದಿದ್ದಾರೆ. ಆದರೆ ಇದರ ಬಗ್ಗೆ ನಾವ್ಯಾರೂ ಆಲೋಚನೆಯನ್ನು ಮಾಡುತ್ತಿಲ್ಲ. ಏಕೆಂದರೆ ನದಿ ನೀರನ್ನು ತೆಗೆದುಕೊಂಡು ಇವೊತ್ತು ಕುಡಿಯುವ ನೀರಿನ ಯೋಜನೆಯನ್ನು ಈಗಾಗಲೇ ಮಾಡಿರುವ ಹಲವಾರು ಪಟ್ಟಣಗಳಲ್ಲಿ ಉಂಟಾಗಿರುವ ಧಾರುಣ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಹುಬ್ಬಳ್ಳಿಯಂಥ ಪಟ್ಟಣ ಪ್ರದೇಶವಿರಬಹುದು, ಗದಗ್ ಅಂಥ ಒಂದು ಶಹರ್ ಇರಬಹುದು, ಹೊಸಪೇಟೆಯಂಥ ಒಂದು ನಗರವಿರಬಹುದು, ಕೊಪ್ಪಳ ಅಂಥ ಒಂದು ಪಟ್ಟಣವಿರಬಹುದು, ಇಲ್ಲೆಲ್ಲಾ ಕೂಡ ನದಿ ಮೂಲದಿಂದಲೇ ನೀರನ್ನು ಪಡೆದುಕೊಂಡು ಕುಡಿಯುವುದಕ್ಕೆ ನೀರನ್ನು ನಾವು ಉಪಯೋಗ ಮಾಡುತ್ತಿದ್ದೇವೆ. ಆದರೆ ನದಿ ಇವೊತ್ತು ಬತ್ತಿದೆ. ನದಿ ಬತ್ತಿರುವಂಥ ಸಂದರ್ಭದಲ್ಲಿ ನೀವು ಇಷ್ಟೊಂದು ಹಣ ಖರ್ಚು ಮಾಡಿ ಇವೊತ್ತು ಯೋಜನೆಗಳನ್ನು ಕೈಗೆತ್ತಿಕೊಂಡಿರತಕ್ಕಂಥದ್ದು ಸಮಂಜಸವೇ ಎಂಬ ಬಗ್ಗೆ ಕೂಡ ತಾವು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಈಗಾಗಲೇ ಹನ್ನೊಂದು ಗ್ರಾಮಗಳಲ್ಲಿ ನಾಲ್ಕು ಮತ್ತು ಐದೈದು ಯೋಜನೆಗಳನ್ನು ನಾವು ಮಾಡಿದ್ದೇವೆ. ಈಗ ಕೆಲವು ಕಡೆ ನಾವು ಇವೊತ್ತು

ಶಾಲಾ ಬೋರ್‌ಗಳಿಂದ ನೀರು ಕೊಟ್ಟಿದ್ದೇವೆ. ಕೆಲವು ಕಡೆ ಇವೊತ್ತು ಬೋರ್ ವೆಲ್ ಗಳಿಂದ ನೀರು ಕೊಟ್ಟಿದ್ದೇವೆ. ಕೆಲವು ಕಡೆ ಇವೊತ್ತು ಕೆರೆಗಳಿಂದ ಪೈಪ್‌ಲೈನ್ ಎಳೆದು ನೀರು ಕೊಟ್ಟಿದ್ದೇವೆ. ಕೆಲವು ಕಡೆ ನದಿ ಮೂಲದಿಂದ ಪೈಪ್ ಲೈನ್ ಎಳೆದು ನೀರನ್ನು ಕೊಟ್ಟಿದ್ದೇವೆ. ಆದರೆ ಈ ಎಲ್ಲಾ ಸೋರ್ಸ್‌ಗಳು ಇವೊತ್ತು ಕಡಿಮೆಯಾಗಿವೆ. ಇದಕ್ಕೆ ಕಾರಣ ನಾವು ಮರಗಳನ್ನು ಕಳೆದುಕೊಂಡಿರುವುದೇ ಆಗಿದೆ. ಇದರ ಬಗ್ಗೆ ಯಾರೂ ಹೆಚ್ಚು ಆಲೋಚನೆಯನ್ನು ಮಾಡುತ್ತಿಲ್ಲ. ಇವೊತ್ತು ಕೃಷಿ ಮಂತ್ರಿಗಳು ಮತ್ತು ಕೃಷಿ ಕಾರ್ಯದರ್ಶಿಯವರು ಒಂದು ಕೆಲಸ ಮಾಡಬಹುದಿತ್ತು. ಅದೇ ರೀತಿ ಅರಣ್ಯ ಮಂತ್ರಿಗಳು ಮತ್ತು ಅರಣ್ಯ ಕಾರ್ಯದರ್ಶಿಗಳೂ ಕೂಡ ಒಂದು ಕೆಲಸ ಮಾಡಬಹುದಿತ್ತು. ಆದರೆ ಇವರೇನು ಸರ್ವೆ ಮಾಡಿದ್ದಾರೆ ಎಂಬ ಬಗ್ಗೆ ತಾವು ಉತ್ತರ ಒದಗಿಸಬೇಕಾಗುತ್ತದೆ. ಇವೊತ್ತು ರಾಜ್ಯದಲ್ಲಿ ಇರುವ ಜಾನುವಾರುಗಳ ಸಂಪತ್ತು ಎಷ್ಟು ಎಂಬ ಬಗ್ಗೆ ತಾವು ವಿವರಣೆಯನ್ನು ಕೊಡಬೇಕಾಗುತ್ತದೆ. ಇದರ ಜೊತೆಗೆ ಬರ ಬಂದಮೇಲೆ ಜಾನುವಾರುಗಳ ಸಂಪತ್ತು ಎಷ್ಟಿದೆ ಎಂಬ ಬಗ್ಗೆ ಕೂಡ ತಾವು ಅಂಕಿ ಸಂಖ್ಯೆಗಳಲ್ಲಿ ಉತ್ತರ ಕೊಡಬೇಕಾಗುತ್ತದೆ. ಇದರ ಅರ್ಥ ಏನೆಂದರೆ ರೈತರಿಗೆ ಅಗತ್ಯವಾದ ಮರಗಳ ಮೂಲ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಮುಂದಿನ ವರ್ಷ ಮಳೆಯಾದ ನಂತರ ರೈತನಿಗೆ ಎತ್ತುಗಳು ಸಿಗುವುದಕ್ಕೆ ಸಾಧ್ಯವೇ ಇಲ್ಲ. ಇವೊತ್ತು ಮರಗಳ ಬಗ್ಗೆ ವಿಚಾರ ಮಾಡುವುದಾದರೆ, ಯಾವುದೇ ಮರ ಒಂದು ದಿವಸದಲ್ಲಿ ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ. ಈಗಾಗಲೇ ಪ್ರತಿಯೊಂದು ತಾಲ್ಲೂಕಿನಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ, ನೀವು ಸ್ಟೇಟ್ ಹೈವೇಯಲ್ಲಿ ಅಥವಾ ಗ್ರಾಮೀಣ ಮಟ್ಟದ ಹೈವೇಗಳಲ್ಲಿ ಸಂಚಾರ ಮಾಡತಕ್ಕಂಥ ಸಂದರ್ಭದಲ್ಲಿ ಟ್ರ್ಯಾಕ್ಟರ್ ಗಳನ್ನು ಇವೊತ್ತು ಹಸಿ ಕಟ್ಟಿಗೆ ಮರಗಳನ್ನು ಕಡಿದು ಇವೊತ್ತು ರೈತ ಬದುಕುವುದಕ್ಕೆ ಹೊರಟು ಇಂಥ ದುಸ್ಸಾಹಸಕ್ಕೆ ಮುಂದಾಗಿದ್ದಾನೆ. ಏಕೆ ಹೀಗೆ ಮಾಡುತ್ತಿಯೇ ಎಂದು ಅವನಿಗೆ ಪ್ರಶ್ನೆ ಹಾಕಿದರೆ ಅವನು ಏನು ಹೇಳುತ್ತಾನೆಂದರೆ ಇವೊತ್ತು ನಾವು ಬದುಕುವುದಕ್ಕೆ, ಒಂದು ಹೊತ್ತಿನ ಊಟಕ್ಕೂ ಕೂಡ ಗತಿ ಇಲ್ಲದಾಗಿದೆ, ಆ ಕಾರಣಕ್ಕಾಗಿ ಇವೊತ್ತು ಮರಗಳನ್ನು ನಾವು ಕಡಿಸುತ್ತೇವೆ ಎಂದು ಸ್ಪಷ್ಟವಾಗಿ ಉತ್ತರವನ್ನು ಕೊಡುತ್ತಿದ್ದಾನೆ. ಆದರೆ ಸರ್ಕಾರ ಇದರಲ್ಲಿ ಮೊದಲೇ ಮುಂದೆ ಬಂದು ಎಷ್ಟು ಮರಗಳಿವೆ ಎಂಬ ಬಗ್ಗೆ ಸರ್ವೆ ಮಾಡಿಸಬೇಕಾಗಿತ್ತು, ಅವರಿಗೆ ಏನಾದರೂ ಪರಿಹಾರದ ಮೂಲಕ ಗಿಡಗಳನ್ನು ಉಳಿಸತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಬೇಕಾಗಿತ್ತು. ಅದಕ್ಕಾಗಿ ಇವೊತ್ತು ನೈತಿಕ ಹೊಣೆಯನ್ನು ನೀವು ಹೊರಬೇಕಾಗುತ್ತದೆ. ಯಾರು ಇಂದು ಆಡಳಿತವನ್ನು ನಡೆಸುತ್ತಿದ್ದಾರೆ, ಈ ರಾಜ್ಯದ ಭಾರವನ್ನು ಯಾರು ಹೊರುತ್ತಿದ್ದಾರೋ ಅವರು ಈ ಬಗ್ಗೆ ಚಿಂತನೆ ಮಾಡಬೇಕಾಗಿತ್ತು. ಆ ಚಿಂತನೆಯನ್ನು ಮಾಡಿದ್ದಾರೋ, ಇಲ್ಲವೋ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಅರಣ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಇದರ ಜೊತೆಗೆ ಕೃಷಿ ಮಂತ್ರಿಗಳೂ ಕೂಡ ಉತ್ತರ ಕೊಡಬೇಕಾಗುತ್ತದೆ. ಎಷ್ಟು ಜಾನುವಾರುಗಳು ಇವೆ, ಎಷ್ಟು ಜಾನುವಾರುಗಳನ್ನು ನಾವು ಕಳೆದುಕೊಂಡಿದ್ದೇವೆ, ಎಷ್ಟು ಜಾನುವಾರುಗಳು ಇವೊತ್ತು ಕಸಾಯಿಖಾನೆಗಳಿಗೆ ಹೋಗಿವೆ, ಎನ್ನುವುದು ಬಹಳ ಮುಖ್ಯವಿದೆ. ಆ ಕಾರಣಕ್ಕಾಗಿ ನಾವು ಚಿತನೆಯನ್ನು ಮಾಡಬೇಕಾಗಿದೆಯೆಂದು ಸರ್ಕಾರಕ್ಕೆ ನಾನು ಸಲಹೆಯನ್ನು ಕೊಡುತ್ತೇನೆ. ಕೇವಲ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಘೋಷಣೆಯನ್ನು ಹೇಳುವುದಕ್ಕೆ ಮುಂಚೆ ನಾವು ಇವೊತ್ತು ಸತತವಾಗಿ ಆ ಯೋಜನೆಯನ್ನು ಯಶಸ್ವಿಯಾಗಿ ಹಮ್ಮಿಕೊಳ್ಳತಕ್ಕಂಥ ಕೆಲಸಕ್ಕೆ ಕೈಹಾಕಬೇಕಾಗುತ್ತದೆ. ಇವೊತ್ತು ಕಾಯಿದೆ ಮೂಲಕವಾದರೂ ಹೆಚ್ಚು ಮರಗಳನ್ನು ಬೆಳೆಸಬೇಕಾದ ಕಾರ್ಯವನ್ನು ನಾವು ಮಾಡಬೇಕಾಗಿದೆ.

ಇವತ್ತು ನಾಲ್ಕು ಎಕರೆ ಇರಬಹುದು ಅಥವಾ ಎರಡು ಎಕರೆ ಜಮೀನಿರಬಹುದು, ಆವನಿಗೆ ಕಡ್ಡಾಯವಾಗಿ ಹತ್ತು ಗುಂಟೆ ಅಥವಾ 20 ಗುಂಟೆ ಮರಗಳನ್ನು ಬೆಳೆಸಬೇಕು ಎನ್ನುವಂತಹ ವಿಚಾರದಲ್ಲಿ ಒತ್ತು ಕೊಡತಕ್ಕಂಥ ಕೆಲಸ ಆಗುತ್ತಿಲ್ಲ. ಹಾಗೂ ಅದಕ್ಕೆ ರೈತರಿಗೆ ಇನ್‌ಸೆಂಟೀವ್ ಕೊಡಿ. ಇವತ್ತು ಜಮೀನು ಖಾಲಿ ಬಿದ್ದಿದೆ. ನೂರು ಕೋಟಿ ರೂ. ಸಾವಿರಾ ಕೋಟಿ ರೂಪಾಯಿ ನಾವು ಯಾವ್ಯಾವುದಕ್ಕೊ ಖರ್ಚು ಮಾಡುತ್ತೇವೆ. ಆದರೆ ಅದಕ್ಕೆ ರೈತರಿಗೆ ಇನ್‌ಸೆಂಟೀವ್ ಕೊಟ್ಟರೆ ಆ ಮರವನ್ನು ರೈತ ಅಲ್ಲೇ ಬಿಡುತ್ತಾನೆ. ಆ ಕಾರಣಕ್ಕಾಗಿ ಇವೊತ್ತು ನೀವು ಕೆಲಸವನ್ನು ಮಾಡಿದರೆ ನಾವು ಸಮೃದ್ಧ ರಾಜ್ಯವನ್ನು ಕಟ್ಟುವುದಕ್ಕೆ ಆಗುತ್ತದೆ. ಎಂದು ಭಾವಿಸುತ್ತೇನೆ.

ಇನ್ನು ವಿದ್ಯುತ್ ಸಮಸ್ಯೆ ತೆಗೆದುಕೊಂಡರೆ ಇವತ್ತು ನಾವು ಆಫ್ ಸೆಟ್ ಆಗಿಬಿಡುತ್ತೇವೆ. ಆ ವಿದ್ಯುತ್ತನ್ನು ನಂಬಿ ನಾವು ಕೃಷಿಯನ್ನು ಮಾಡುವುದಕ್ಕೆ ಹೋದರೆ ನಮ್ಮಂಥ ಮೂರ್ಖರು ಯಾರೂ ಇಲ್ಲವೆನ್ನುವಂತಹ ಮಟ್ಟ ನಿರ್ಮಾಣವಾಗಿದೆ. ತಾವು 1999ರಲ್ಲಿ ಅಧಿಕಾರ ತೆಗೆದುಕೊಂಡಿರಿ. ಅಧಿಕಾರ ಸ್ವೀಕಾರ ಮಾಡಿದಂತಹ ಸಂದರ್ಭದಲ್ಲಿ ನಿಮ್ಮ ಗುರಿ 6500 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡಬೇಕೆಂದು ಇತ್ತು. ಆ ಗುರಿಯಲ್ಲಿ ಏನು ಸಾಧಿಸಿದ್ದಿರಿ ಎಂದು ತಾವು ಉತ್ತರದಲ್ಲಿ ಹೇಳಬೇಕಾಗುತ್ತದೆ. ಇವತ್ತು ಯಾವುದೇ ಹಳ್ಳಿಗಾಡಿಗೆ ಹೋದರೂ ನಮಗೆ ನಾಲ್ಕು ತಾಸು ಸಂಪೂರ್ಣವಾಗಿ ಥ್ರೀ ಫೇಸ್ ವಿದ್ಯುತ್ ಸಿಗುತ್ತಿಲ್ಲ. ಅಲ್ಲಿರುವಂತಹ ಮಕ್ಕಳು ಓದತಕ್ಕಂಥ ಸಂದರ್ಭದಲ್ಲಿ ಅವರಿಗೆ ಲೈಟ್ ವ್ಯವಸ್ಥೆ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ಪೂರ್ವಾಪರ ಚಿಂತನೆ ಮಾಡಿ ಭವಿಷ್ಯವನ್ನು ನಿರ್ಮಾಣ ಮಾಡುವಂತಹ ಯೋಜನೆಗೆ ಒತ್ತು ಕೊಡುವಂತಹ ಕೆಲಸ ಈ ಸರ್ಕಾರದಿಂದ ಆಗಿಲ್ಲ. ಇವತ್ತು ಬರೀ ಘೋಷಣೆಗಳನ್ನು ಮಾಡುವುದಕ್ಕೆ ನಾವು ಹೊರಟಿದ್ದೇವೆ. ಇವತ್ತು ನಾವು ಜಲಸಂವರ್ಧನೆಗೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇವೆ. ಸಾರ್ವಜನಿಕ ಸಭೆಗಳಲ್ಲೂ ಕೂಡ ನಾವು ಬಹಳ ಒಳ್ಳೆಯ ಮುಖ್ಯಮಂತ್ರಿಗಳು, ರಾಜ್ಯಕ್ಕೆ ನಾಲ್ಕೈದು ಉತ್ತಮ ಯೋಜನೆಗಳನ್ನು ಕೈಗೊಂಡಿದ್ದಾರೆ ಎಂದು ಹೇಳಿದ್ದೇವೆ. ಈಗ ನೀವು "ರೈತ ಕಾಯಕ ಕೆರೆ" ಎಂದು ಹೆಸರು ಕೊಟ್ಟಿದ್ದು, ಅದರ ವಿಚಾರದಲ್ಲಿ ನಾವು ಟಿವಿ ಹಾಗೂ ಮಾಧ್ಯಮದವರನ್ನು ಕರೆದುಕೊಂಡು ಹೋಗಿ ಪೂಜೆ ಮಾಡಿಸಿದ್ದೇವೆ. ಆದರೆ ನಂತರ ನೋಡಿದರೆ ಕೆರೆ ಹೂಳು ಇಲ್ಲ, ಏನೂ ಇಲ್ಲ. ನಮಗೆ ಗ್ರಾಮೀಣ ಮಟ್ಟದಲ್ಲಿ ಹೋದರೆ ಛೀ, ಥೂ ಎಂದು ಹೇಳುತ್ತಾರೆ. ಏನ್ರಿ ನೀವು ಹಳ್ಳಿಗಾಡಿನಲ್ಲಿ ಫೋಕಸ್ ಮಾಡುವುದಕ್ಕೆ ಬರುತ್ತೀರಾ; ರೈತರಿಗೆ ಏನು ಕೆಲಸ ಮಾಡಿದ್ದೀರಿ ಎಂದು ಪ್ರಶ್ನೆ ಹಾಕುತ್ತಾರೆ. ಆ ಕಾರಣಕ್ಕಾಗಿ ತಾವು ಇಂತಹ ಕೆಲಸಗಳಿಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಇವತ್ತು ಯಾವ ತಾಲ್ಲೂಕಿನಲ್ಲಿ ರೈತ ಕಾಯಕ ಕೆರೆ ತೆಗೆದುಕೊಂಡಿದ್ದೀರಿ ಎಂಬುದನ್ನೂ ಹೇಳಿ? ಬರಗಾಲದ ಬಗ್ಗೆ ಬಂದಿರತಕ್ಕಂಥ ಹಣದ ವಿಚಾರದಲ್ಲಿ ಕೂಡ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ತಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬಂದಿರತಕ್ಕಂಥ ಹಣವನ್ನು ಉಪಯೋಗ ಮಾಡತಕ್ಕಂಥ ಸಂದರ್ಭದಲ್ಲಿ ಬಹಳ ಅಚ್ಚುಕಟ್ಟಾಗಿ ಮಾಡಿದರು. ಮತ್ತು ನಮ್ಮ ಜಿಲ್ಲಾಧಿಕಾರಿಗಳೂ ಕೂಡ, 11ನೇ ಫೈನಾನ್ಸ್ ಇರಬಹುದು, ಎಸ್‌ಎಫ್‌ಸಿ ಹಣ ಇರಬಹುದು ಬೇರೆಬೇರೆ ಶಾಸಕರ ಅನುದಾನ

ಇರಬಹುದು, ಅದಕ್ಕೆ ಶೇಕಡ 75 ರಷ್ಟು ಕಾಳನ್ನು ಪ್ರತಿಶತ 25ರಷ್ಟು ಕ್ಯಾಷ್ ಅನ್ನು ನೀವು ಉಪಯೋಗ ಮಾಡಿಕೊಂಡು ಅದು ಅಸೆಟ್ ಆಗತಕ್ಕಂಥ ಕೆಲಸ ತೆಗೆದುಕೊಳ್ಳಿ ಎಂದು ಜಿಲ್ಲಾ ರಿವ್ಯೂ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ಅದೇ ರೀತಿ ಕೆಲಸ ಕೂಡ ಆಗಿದೆ. ನಾವು ಅನೇಕ ಶಾಲಾ ಕಟ್ಟಡಗಳನ್ನು ತೆಗೆದುಕೊಂಡಿದ್ದೇವೆ. ಅನೇಕ ವಾರ್ಡ್‌ಗಳಲ್ಲಿ ನಾವು ಸಿಮೆಂಟ್ ರಸ್ತೆಯನ್ನು ತೆಗೆದುಕೊಂಡಿದ್ದೇವೆ. ಹಾಗೂ ಕಾಂಪೌಂಡ್‌ಗಳನ್ನು ತೆಗೆದುಕೊಂಡಿದ್ದೇವೆ. ಇದನ್ನು ಬಿಟ್ಟರೆ ಇವತ್ತು ದೇಶ ಮತ್ತು ರಾಜ್ಯದ ಭವಿಷ್ಯವನ್ನು ಗುರುತಿಸುವಂತಹ ಕೆಲಸ ಆಗುತ್ತಿಲ್ಲ. ಹಾಗೂ ಮಾನ್ಯ ಮುಖ್ಯಮಂತ್ರಿಗಳು, ಹೌಸಿಂಗ್ ಸ್ಕೀಂನಲ್ಲಿ ಒಳ್ಳೆಯ ಹೆಸರು ಪಡೆದುಕೊಳ್ಳಬೇಕು ಮತ್ತು ಇನ್ನೂ ಒಂದು ಲಕ್ಷ ಮನೆ ಕಟ್ಟುತ್ತೇವೆಂದು ಹೇಳಿದ್ದಾರೆ. ಆದರೆ ವಾಂಬೆ (ವಾಲ್ಮಿಕಿ ಅಂಬೇಡ್ಕರ್) ಯೋಜನೆ ಏನಿದೆ ಅದರಂತೆ ಈ ಯೋಜನೆಗೂ ಸಹ ನೀವು ಸಬ್ಸಿಡಿಯನ್ನು ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಯೋಜನೆಯಲ್ಲಿ 20 ಸಾವಿರ ರೂ. ಸಬ್ಸಿಡಿ ಇದೆ. ನಾವು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನಿಂದ ಕೊಡುತ್ತಿರುವಂತಹ ಸಾಲ ಪೂರ್ತಿ ಸಾಲದ ಪೋರ್ಷನ್ ಎಂದು ಗ್ರಾಮೀಣ ಭಾಗದಲ್ಲಿ ಹೇಳುತ್ತಿದ್ದೇವೆ. ಅದು ಬಹಳ ಕಷ್ಟವಾಗುತ್ತದೆ. ಇಲ್ಲಾ ಒಂದೇ ಪಾಲಿಸಿಯಾಗಬೇಕು. ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು ಆ ಕಾರಣಕ್ಕಾಗಿ ಇಲ್ಲಿ ಕೂಡ ಏನು ವ್ಯಾಂಬಿ ಯೋಜನೆಗೆ ಅನುಸರಿಸತಕ್ಕಂಥ ಯೋಜನೆಗೆ ತಾವು ಒತ್ತು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ವಿದ್ಯುತ್ ಸಮಸ್ಯೆ ಬಗ್ಗೆ ಏನೂ ಕೆಲಸ ಮಾಡಿಲ್ಲ. ನಮ್ಮ ಸರ್ಕಾರ ಇದ್ದಾಗ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡತಕ್ಕಂಥ ಕೆಲಸವನ್ನು ಮಾಡಿದೆ. ಇನ್ನು ಮುಂದೆಯಾದರೂ ಕೂಡ ಮುಂದಿನ ದಿನಮಾನದಲ್ಲಿ ತಾವೇನು ಜನಪರ ಬಜೆಟ್ ಎಂದು ಕರೆಯುತ್ತೀರಿ, ಆ ಬಜೆಟ್‌ನಲ್ಲಿ ಆದರೂ ಕೂಡ 6500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಯೋಜನೆಗಳು ಇದೆ, ಅದಕ್ಕೆ ಒತ್ತು ಕೊಡತಕ್ಕಂಥ ಕೆಲಸ ತಮ್ಮಿಂದ ಆಗಬೇಕೆಂದು ಹೇಳುತ್ತೇನೆ. ಇನ್ನು ವಿಶೇಷವಾಗಿ ಹೊಸ ಜಿಲ್ಲೆಗಳ ಬಗ್ಗೆ ಡಿಸ್ಟ್ರಿಕ್ಟ್ ಕಾಂಪ್ಲೆಕ್ಸ್ ಅಥವಾ ಸಂಕೀರ್ಣ ಎಂದು ಏನು ಕರೆಯುತ್ತೇವೆ ಅದನ್ನು ಕ್ಲಿಯರ್ ಮಾಡಿದ್ದೀರಿ. ಅದಕ್ಕೆ ನಾವು ಸಂತೋಷವನ್ನು ವ್ಯಕ್ತಪಡಿಸುತ್ತೇವೆ. ಒಂದೊಂದು ಜಿಲ್ಲೆಗೆ ಹದಿನಾಲ್ಕೂವರೆ ಕೋಟಿ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ. ಅಲ್ಲಿ ಕೆಲಸ ಕೂಡ ಪ್ರಾರಂಭ ಆಗಿದೆ. ಆದರೆ ಇವತ್ತು ಮೂಲಭೂತ ಸೌಲಭ್ಯಗಳು ಬಗ್ಗೆ ಕೊಪ್ಪಳ ಜಿಲ್ಲೆಯನ್ನು ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಅವರು ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊಪ್ಪಳ ಜಿಲ್ಲೆಯಲ್ಲಿ ಇವತ್ತು 250 ಬೆಡ್ ಹಾಸ್ಪಿಟಲ್ ಮಂಜೂರಾಗಿದೆ. ಹಾಗೂ ಅದಕ್ಕೆ ಜರ್ಮನ್ ಏಡ್ ನಿಂದ ಹಣಕಾಸು ನೆರವೂ ಕೂಡ ಸಿಕ್ಕಿದೆ. ಮೊನ್ನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಕೊಪ್ಪಳಕ್ಕೆ ಭೇಟಿ ಕೊಟ್ಟಾಗ ನಮ್ಮ ಜಿಲ್ಲಾ ಮಂತ್ರಿಗಳಿಗೆ ಹಾಗೂ ನನಗೆ ಕೂಡ ಕರೆದು ಬುದ್ಧಿವಾದ ಹೇಳಿದರು. ನಿಮ್ಮ ಜಿಲ್ಲೆಗೆ 250 ಬೆಡ್‌ನ ಆಸ್ಪತ್ರೆ ಕಟ್ಟುವುದಕ್ಕೆ ತಯಾರಾಗಿದ್ದೇವೆ ಆದರೆ ಅದಕ್ಕೆ ನಿಮ್ಮಿಂದ ಜಮೀನು ಕೊಡತಕ್ಕಂಥ ಕೆಲಸವಾಗಿಲ್ಲವೆಂದೂ ಇದು ನಾಚಿಕೆಗೇಡು ಎಂದು ಹೇಳಿದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾವು ತರುವುದೇನೆಂದರೆ

ಈ ಒಂದು ಅನುದಾನದಲ್ಲಿ ಸುಮಾರು 20 ಎಕರೆಗೆ 30 ಲಕ್ಷ ರೂಪಾಯಿ ಅನುದಾನವನ್ನು ತಾವು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಜಿಲ್ಲಾ ಮಂತ್ರಿಗಳೂ ಕೂಡ ಇಲ್ಲೇ ಇದ್ದೀರಿ. ಅದರ ಬಗ್ಗೆ ತಾವೂ ಕೂಡ ಒಂದು ಮಾತು ಹೇಳಿದರೆ ಒಳ್ಳೆಯದಾಗುತ್ತದೆ. ಅನ್ನು ಅನೇಕ ವಿಚಾರಗಳ ಬಗ್ಗೆ, ಅದರಲ್ಲೂ ಬರದ ಬಗ್ಗೆ ಮುಂದೆ ಏನು ಎಂದು ಚಿಂತನೆ ಮಾಡಬೇಕಾಗಿದೆ. ನಮಗೆ ಹತ್ತು ಲಕ್ಷ ರೂ. ಕೊಟ್ಟರೆ, ಮೂವತ್ತು ಲಕ್ಷ ರೂ. ನ ಫುಡ್ ಗ್ರೇನ್ ಸೇರಿಸಿ ಇವತ್ತು 40 ಲಕ್ಷ ರೂಪಾಯಿ ಕೆಲಸ ತೆಗೆದುಕೊಳ್ಳುತ್ತೇವೆ. ಆದರೆ ಅದು ಡಿಸ್ ಕಂಟಿನ್ಯೂ ಆಗಿಬಿಡುತ್ತದೆ. ಏನಾಗಿದೆ ಎಂದರೆ ಯಾರೂ ಕೃಷಿಯನ್ನು ಮಾಡುವುದಿಲ್ಲ, ಎಲ್ಲಾ ಕಾರ್ಮಿಕರಾಗಿದ್ದಾರೆ. ಒಂದು ನಾಲ್ಕೈದು ದಿವಸ ಕೆಲಸ ಆದಮೇಲೆ ಆ ಕೆಲಸ ನಿಂತುಹೋಗುತ್ತದೆ. ನಂತರ ಜನ ಗುಳೆ ಹೋಗುವಂತಹ ವ್ಯವಸ್ಥೆ ಬರಬೇಕಾಗುತ್ತದೆ. ಆದುದರಿಂದ ಅದು ಕಂಟಿನ್ಯೂಟಿ ಆಗಬೇಕಾಗಿದೆ. ಅದಕ್ಕೆ ಕಂಟಿನ್ಯೂಟಿ ಪ್ರೋಗ್ರಾಂ ಅನ್ನು ಹಾಕಿ ಕೊಳ್ಳಬೇಕಾಗುತ್ತದೆ. ಇನ್ನು ಗೋಶಾಲೆಗಳನ್ನು ತೆರೆಯುವುದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ಎಲ್ಲಾ ಮಂತ್ರಿಗಳು ಗೋಶಾಲೆಗಳನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಹಳ್ಳಿಗಳಲ್ಲಿ ಒಂದು ಗಾದೆ ಇದೆ 'ಕುದುರೆಗೆ ಹುಲ್ಲು ತೋರಿಸುವುದು' ಎಂದು. ಅದಕ್ಕೆ ಹುಲ್ಲು ಹಾಕುವುದಿಲ್ಲ, ಅದು ಹೊತ್ತುಕೊಂಡು ಹುಲ್ಲು ಸಿಗುತ್ತದೆ ಎಂದು ಓಡಬೇಕಲ್ಲಾ. ಹಾಗೆ ಆಗಿದೆ ಈ ಸರ್ಕಾರದ ಕೆಲಸ. ಆದುದರಿಂದ ಬರಗಾಲದ ವಿಚಾರದಲ್ಲಿ ಹೆಚ್ಚು ಒತ್ತು ಕೊಡುವಂತಹ ಕೆಲಸ ಆಗಬೇಕು. ಇನ್ನು ಕುಡಿಯುವ ನೀರಿನ ವಿಚಾರ ನಾವು ಮಾಡಿದರೆ ಇವತ್ತು ನಮ್ಮ ಕೊಪ್ಪಳ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದು ಆರ್ಟಿಕಲ್ ಸಂಯುಕ್ತ ಕರ್ನಾಟಕದಲ್ಲಿ ಬಂದಿದೆ. ಒಂದು ಸ್ಪೆಸಿಫಿಕ್ ಆಗಿ ಯೋಜನೆ 1992ರಲ್ಲಿ ಹೆಚ್ ಕೆ ಡಿ ಬಿಯಿಂದ ಕೆಲಸ ತೆಗೆದುಕೊಂಡಿದ್ದು, ಆಗ ನಾವು ಜಡ್ ಪಿ ಮೆಂಬರ್ ಇದ್ದೆವು. ಆ ವರ್ಕ್ ತೆಗೆದುಕೊಂಡಾಗ ಲಿಂಗರಿಂಗ್ ಆ ಸಂದರ್ಭದಲ್ಲಿ ಅದಕ್ಕೆ ಎರಡು ಕೋಟಿ ರೂಪಾಯಿ ಆಗಿತ್ತು, ಅದು ಎರಡು ತಾಲ್ಲೂಕುಗಳಾದ ಯಲಬುರ್ಗ ಹಾಗೂ ಕೊಪ್ಪಳಕ್ಕೆ ಅನ್ವಯಿಸುತ್ತದೆ. ಸುಮಾರು 35 ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡುವ ಯೋಜನೆಯಾಗಿದೆ. ಆದರೆ ಅದು ಈಗ 18 ಕೋಟಿ ರೂಪಾಯಿಗೆ ಅಂದಾಜು ವೆಚ್ಚ ಬಂದಿದೆ. ಆದರೆ ಮಾನ್ಯ ಗೋರ್ಪಡೆಯವರು ಕೊಪ್ಪಳಕ್ಕೆ ಬಂದಾಗ ಈ ಕೆಲಸವನ್ನು ತುಂಬಾ ಫಾಸ್ಟ್ ಆಗಿ ಕೈಗೆತ್ತಿಕೊಳ್ಳುತ್ತೇವೆ 34 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುತ್ತೇವೆಂದು, ಅದನ್ನು ಲ್ಯಾಂಡ್ ಆರ್ಮಿ ಏಜೆನ್ಸಿಗೆ ವಹಿಸಿಕೊಟ್ಟರು. ಆದರೆ ಅಲ್ಲಿ ಬಹಳ ಆಮೆಗತಿಯಲ್ಲಿ ಕೆಲಸವಾಗುತ್ತಿದ್ದು, ಅಷ್ಟಾಗಿ ಏನೇನೂ ಕೆಲಸವಾಗಿಲ್ಲ. ಅಲ್ಲಿ ಜಿ.ಓ. ಪ್ರಕಾರ ಒಂದು ಕೋಟಿ ರೂಪಾಯಿ ಹಣ ರಿಲೀಜ್ ಮಾಡಬೇಕೆಂದು ಆರ್ಡರ್ ಇದೆಯೆಂದು ಹೇಳಿದರು. ಆದರೆ ನಾಲ್ಕು ತಿಂಗಳಿನಿಂದ 25 ಲಕ್ಷ ರೂಪಾಯಿ ಬಿಡುಗಡೆ ಆಗಿದೆಯೆಂದು ಹೇಳುತ್ತಾರೆ. ಎಂದರೆ ಇವತ್ತು ಸರ್ಕಾರದಲ್ಲಿ ಹಣ ಇಲ್ಲವೆಂದು ಕಂಡುಬರುತ್ತದೆ. ಜಿ.ಓ. ಆಗಿ ನಾಲ್ಕು ತಿಂಗಳಾದರೂ ದುಡ್ಡು ಒಂದು ಕೋಟಿ ರೂಪಾಯಿ ಬಿಡುಗಡೆಯಾಗಿಲ್ಲವೆಂದು, ನಾವು ಅಧಿಕಾರಿಗಳನ್ನು ದಬಾಯಿಸಿದರೆ ಅಂತಹ ದೊಡ್ಡ ಸ್ಕೀಮ್ ಅನ್ನು ಏಕೆ ವಿಳಂಬ ಮಾಡುತ್ತೀರಿ ಎಂದರೆ ಅವರು ನಾಲ್ಕು ತಿಂಗಳಿನಿಂದ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ಮಾನ್ಯ

ಘೋರ್ಪಡೆಯವರೆ ತಾವೇ ಆಸಕ್ತಿಯಿಂದ ಆ ಕೆಲಸವನ್ನು ಅವರಿಗೆ ವಹಿಸಿಕೊಟ್ಟಿರಿ. ಅದಕ್ಕೆ ದುಡ್ಡು ಕೊಟ್ಟರೆ ಸುಮಾರು 35 ಹಳ್ಳಿಗಳಿಗೆ ಶುದ್ಧವಾದ ನೀರನ್ನು ಕೊಡುವುದಕ್ಕೆ ಸಾಧ್ಯವಿದೆ. ಅದಕ್ಕೆ ಹಣವನ್ನು ರಿಲೀಜ್ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಿ ಎಂದು ನಾನು ತಿಳಿದುಕೊಳ್ಳುತ್ತೇನೆ. ಇವತ್ತು ಚಿಕ್ಕನಕೊಪ್ಪ ಗ್ರಾಮದಲ್ಲಿ ಎಂಟು ರೂಪಾಯಿಗೆ ಒಂದು ಕೊಡ ನೀರು ಮಾರಾಟ ಮಾಡುತ್ತಿದ್ದಾರೆ ಅದನ್ನು ಪತ್ರಿಕೆಯಲ್ಲಿ ಬರೆದಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು) : ಹಣದ ತೊಂದರೆ ಇರಲಿಕ್ಕಿಲ್ಲ. ತಾವು ವಿವರಗಳನ್ನು ಬರೆದು ಕೊಟ್ಟರೆ ಒಳ್ಳೆಯದು. ನಾನು ತಕ್ಷಣ ನೋಡಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಲ್ಯಾಂಡ್ ಆರ್ಮಿಯ ಡೆಪ್ಯೂಟಿ ಡೈರೆಕ್ಟರ್ ರವರ ಜೊತೆ ಇವತ್ತು ನಾನು ಮಾತನಾಡಿದ್ದೇನೆ. ಹಣ ರಿಲೀಜ್ ಮಾಡುವುದಕ್ಕೆ ಆರ್ಡರ್ ಆಗಿದೆ, ಆದರೆ ನಾಲ್ಕು ತಿಂಗಳಿನಿಂದ 25 ಲಕ್ಷ ರೂಪಾಯಿ ಮಾತ್ರ ಬಂದಿದೆ, ಹಣ ಇಲ್ಲದೆ ಇರುವುದಕ್ಕೆ ನಾವು ಕೆಲಸ ನಿಲ್ಲಿಸಿದ್ದೇವೆಂದು ಹೇಳುತ್ತಿದ್ದಾರೆ. ಒಂದು ಕಡೆ ಯುದ್ಧೋಪಾದಿಯಲ್ಲಿ ಕೆಲಸ ಮಾಡುತ್ತೇವೆಂದು ನಾವು ಕುಡಿಯುವ ನೀರಿನ ವಿಚಾರದಲ್ಲಿ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಹಣ ರಿಲೀಜ್ ಆಗದೆ ಇರುವುದು ನಮಗೆ ಕಂಡುಬರುತ್ತಿದೆ. ಇದರ ಗುಟ್ಟೇನು ತಾರತಮ್ಯ ಏನು, ಇಲಾಖೆಯಲ್ಲಿ ಹಣ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಕುಡಿಯುವ ನೀರಿನ ವಿಚಾರದಲ್ಲಿ ಹಣದ ಅಭಾವ ಇಲ್ಲ, ಅದನ್ನು ತಕ್ಷಣ ನಾನ ನೋಡಿಸುತ್ತೇನೆ.

ಶ್ರೀ ಕರಡಿ ಸಂಗಪ್ಪ ಅಮರಪ್ಪ : ತಾವು ಹಿರಿಯ ಮಂತ್ರಿಗಳಿದ್ದೀರಿ. ತಮಗೆ ಒಂದು ಕಾನ್ಸೆಪ್ಟ್ ಇದೆ. ಈ ಒಂದು ಯೋಜನೆಗೆ ತಾವೇ ಒತ್ತು ಕೊಟ್ಟಿದ್ದೀರಿ. ಆದುದರಿಂದ ಆ ಕೆಲಸಕ್ಕೆ ಹಣ ರಿಲೀಜ್ ಮಾಡುವಂತಹ ಕೆಲಸಕ್ಕೆ ಮುಂದಾಗಬೇಕು. ಅದರ ಜೊತೆಗೆ ಇವತ್ತು ಗೋಶಾಲೆಗಳನ್ನು ತೆರೆಯುವಂತಹ ಕೆಲಸ ಬಹಳ ಅವಶ್ಯಕತೆಯಿದೆ. ಇರತಕ್ಕಂಥ ಜಾನುವಾರುಗಳನ್ನು ನಾವು ಉಳಿಸಿಕೊಳ್ಳದೆ ಇದ್ದರೆ, ಇವತ್ತು ದೈವೀ ಸಂಬಂಧದಲ್ಲಿ ಏನು ನಾವು ಅವುಗಳನ್ನು ನೋಡುತ್ತೇವೆ, ಆ ಸಂಬಂಧದಲ್ಲಿ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡೇಕು ಎಂದು ಹೇಳುತ್ತಾ ನನಗೆ ಬರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಬೆಳ್ಳುಬ್ಬಿಯವರು ಮಾತನಾಡುವುದಕ್ಕೆ ತಮ್ಮ ಹೆಸರನ್ನು ಕೊಟ್ಟಿದ್ದಾರೆ. ನಮ್ಮ ಕಾರ್ಯಕ್ರಮದ ಪ್ರಕಾರ ಆರು ಗಂಟೆಗೆ ನಮ್ಮ ಕಲಾಪವನ್ನು ಮುಕ್ತಾಯ ಮಾಡಬೇಕಾಗಿದೆ. ಇನ್ನೂ ಮಾತನಾಡುವವರು ಯಾರಿದ್ದಾರೆ. ಅವರೆಲ್ಲಾ ನಾಳೆ ಮಾತನಾಡಿ. ಇವತ್ತು ಕಲಾಪವನ್ನು ಮುಕ್ತಾಯಗೊಳಿಸುತ್ತೇವೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು 6.00 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 6-3-2003 ರಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)